QUESTION FOR ANSWER ON THE DAY
(but not taken up)

Steps taken to give Relief to the Goldsmiths.

*Q.—244. Sri P. VENKATAGIRIYAPPA (Kolar).—

Will the Government be pleased to state:—

(a) whether they are aware that the new Gold Control Rules enforced by the Central Government has resulted in mass unemployment of Goldsmiths in the State;

(b) if so, the steps taken or intend to take to give relief to the Goldsmiths?

A.—Sri D. DEVARAJ URS (Minister for Labour, Housing and Transport).—

(a) Yes.

(b) Whenever the unemployed Goldsmiths approach the Employment Exchanges, the benifit of Employment assistance is being extended to them consistent with their qualifications and experience as per existing rules.

Motion for suspension of rule 28 (1) of the Rules of Procedure and Conduct of Business in the Mysore Legislative Assembly

Sri S. NIJALINGAPPA.—I beg to move:

"That under the second proviso to sub-rule (1) to Rule 28 of the Rules of Procedure and Conduct of Business in the Mysore Legislative Assembly the said rule be suspended and that the Government business be transacted instead of Private Members' Business allotted for the day."

Mr. SPEAKER.—The question is

"That under the second proviso to sub-rule (1) to Rule 28 of the Rules of Procedure and Conduct of Business in the Mysore Legislative Assembly the said rule be suspended and the Government business be transacted instead of private Members' Business allotted for the day."

The motion was adopted.

MOTION re: THE SHARING OF KRISHNA AND GODAVARI WATERS
(Debate continued.)

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಆದುದರಿಂದ ಮೈಸೂರು ರಾಜ್ಯಕ್ಕೆ ಎಂದರೆ ಕರ್ಣಾಟಕಕ್ಕೆ ತಮ್ಮ ನ್ಯಾಯವಾದ ಪಾಲು ದೊರಕಿದೆ ಎನ್ನುವುದನ್ನು ಯಾರೂ ಒಪ್ಪುವಂತಿಲ್ಲ. ಈಗಾಗಲೇ ಸಾಕಷ್ಟು ಅಂಕಿ ಅಂಶಗಳನ್ನು ಸರಕಾರದವರು ನಮ್ಮ ಮುಂದಿಟ್ಟಿದ್ದಾರೆ.

ಅದೇ ಅಂಕಿ ಅಂಶಗಳನ್ನು ರಾಜ್ಯದ ಪರವಾಗಿ ಕೇಂದ್ರ ಸರಕಾರದ ಮುಂದೆ ಮತ್ತು ಸಂಬಂಧಪಟ್ಟವರ ಮುಂದೆ ರಾಜ್ಯ ಸರಕಾರದವರು ಆಗಿಂದಾಗ್ಗೆ ಇಡುತ್ತಾ ಬಂದಿದ್ದಾರೆ. ಜೊತೆಗೆ ಈಚೆಗೆ ಈ ಸಂಬಂಧದಲ್ಲಿ ಮರಾಮತ್ತು ಶಾಖಾಸಚಿವರು ಮೊನ್ನೆ ತಾನೇ ಮಾಡಿದ ಭಾಷಣದಲ್ಲಿ ಕೂಡ ಈ ರಾಜ್ಯದ ಪಾಲು ಏನು ಎನ್ನುವುದನ್ನು ತಿಳಿಸಿದ್ದಾರೆ. ಈ ಎಲ್ಲ ಅಂಕಿ ಅಂಶಗಳ ವಿವರಗಳನ್ನು ನಾವು ಒಂದೊಂದಾಗಿ ಪರಿಶೀಲನೆ ಮಾಡಿದರೆ ಇವೊತ್ತು ಕೇಂದ್ರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ನಮಗೆ ಏನು ಕೊಡುಗೆ ರೀತಿಯಲ್ಲಿ ಕೊಟ್ಟಿದ್ದಾರೆ. ಎಂದರೆ ಈ ನೀರಿನ ಹಂಚಿಕೆ ಯಾವುದೇ ದೃಷ್ಟಿಯಿಂದಲೂ ಸಮರಸವಾಗಿಲ್ಲ, ಸಮರ್ಪಕವಾಗಿಲ್ಲ ಮತ್ತು ನ್ಯಾಯಸಮ್ಮತವಾಗಿಲ್ಲ ಎನ್ನುವುದು ಕಂಡುಬರುತ್ತದೆ. ಇಂತಹ ಒಂದು ಸಂದರ್ಭದಲ್ಲಿ ನಾವಿದ್ದೇವೆ. ಆಂಧ್ರದವರು ತಮಗೆ ಹೆಚ್ಚಿನ ನೀರು ಪಾಲು ದೊರೆತಿದ್ದರೂ ಕೂಡ ಕೇಂದ್ರದ ಮಂತ್ರಿಗಳ ತೀರ್ಮಾನವನ್ನು ಪ್ರತಿಭಟಿಸಿ ಒಪ್ಪಿಕೊಂಡಿದ್ದಾರೆ. ಮಹಾರಾಷ್ಟ್ರದವರು ತಿರಸ್ಕರಿಸಿದ್ದಾರೆ. ಈಗ ಈ ನೀರಿನ ಪಾಲುಗಳಲ್ಲಿ ಮುಖ್ಯ ಹಂಚಿಕೆಯ ಪಾಲು ಪಡೆಯಬೇಕಾದದ್ದು ನಮ್ಮ ಕರ್ಣಾಟಕ ರಾಜ್ಯವೂ ಕೂಡ, ಈ ಒಂದು ಹಂಚಿಕೆಯನ್ನು ವಿಷಾದದಿಂದ ಪ್ರತಿಭಟಿಸಿ ಇದನ್ನು ಪುನರ್ ವಿಮರ್ಶೆಮಾಡಬೇಕು ಮತ್ತು ಈಗ ಐವತ್ತೊಂದನೇ ಇಸವಿಯ ಹಂಚಿಕೆಯ ಪ್ರಕಾರ ಏನು ಕೆಲಸಕಾರ್ಯಗಳು ನಡೆಯುತ್ತಿವೆ, ಮುಖ್ಯವಾಗಿ ಆಂಧ್ರದವರು ಯಾವ ಕಾಮಗಾರಿಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಅವುಗಳನ್ನು ತತ್‌ಕ್ಷಣ ನಿಲ್ಲಿಸುವಂತೆ ತಡೆಯಾಜ್ಞೆಯನ್ನು ಸಾಧ್ಯವಾದರೆ ತಗಬೇಕು ಅದನ್ನು ಯಾರು ಕೊಡಬೇಕು ಅದನ್ನು ಯಾರು ತರಿಸಬೇಕು ಎನ್ನುವುದು ಬೇರೆಪ್ರಶ್ನೆ ಅದು. ರಾಜ್ಯಸರಕಾರಕ್ಕೆ ಬಿಟ್ಟದ್ದು. ಅನೇಕ ಮಾನ್ಯ ಸದಸ್ಯರು ಈ ತಂಟೆಯನ್ನು ನಾವು ಕಾನೂನು ಪ್ರಕಾರ ಒಂದು ಟ್ರಿಬ್ಯೂನಲ್ಲಿಗೆ ಒಪ್ಪಿಸಬೇಕು ಅಥವಾ ಸುಪ್ರೀಮ್ ಕೋರ್ಟಿಗೆ ಹೋಗಿ ನ್ಯಾಯ ಪಡೆಯಬೇಕು ಎಂದು ಸಲಹೆ ಮಾಡಿದ್ದಾರೆ. ಕೇಂದ್ರ ಸರಕಾರದವರು ಈ ನೀರಿನ ಹಂಚಿಕೆಯನ್ನು ಪುನರ್ವಿಮರ್ಶೆಮಾಡಿ ಗುಲ್ಹಾಟಿ ಆಯೋಗದವರು ಕೊಟ್ಟಿರತಕ್ಕಂಥ ಸಲಹೆಗಳನ್ನು ಪರಿಶೀಲನೆಮಾಡಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಇಷ್ಟಪಡದೇ ಹೋದಲ್ಲಿ ನಮಗೆ ತಿಳಿದಿರತಕ್ಕಂಥ ಒಂದೇಮಾರ್ಗ ಅಂದರೆ ನ್ಯಾಯವಾದ, ಸಮ್ಮತವಾದ ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳಬೇಕು ಎಂಬುದು ಆಗಿದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಾರಂಭ ಭಾಷಣಮಾಡುತ್ತ ಹೇಳಿದರು. ಈ ತೀರ್ಮಾನ in a sense it is binding ಹಾಗು binding ಅಲ್ಲ ಎಂದು ಇನ್ನೊಂದು ಅರ್ಥದಲ್ಲಿ ಹೇಳಿದರು. ಯಾವ ಆಧಾರದ ಮೇಲೆ ಹಾಗೆ ಹೇಳಿದ್ದಾರೆ ಎಂಬುದು ನನಗೆ ತಿಳಿಯಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—binding ಎಂದು ಅವರು ಹೇಳಲಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಅವರು ಹೇಳಿದ ವಾಕ್ಯ ನೋಡಿದರೆ ಆ ರೀತಿ ಅರ್ಥ ಬರುವ ಹಾಗೆ ಹೇಳಿದ ಹಾಗೆ ಇದೆ. ಆ ಸ್ಟೇಟ್‌ಮೆಂಟು ಅವಾರ್ಡ್ ಅಲ್ಲ ಎಂದು ಹೇಳಿದರು. ಇನ್ನೊಂದು ಅರ್ಥದಲ್ಲಿ ಅದು ಬೈಂಡಿಂಗ್ ಎಂದು ಹೇಳಿದಹಾಗೆ ನನಗೆ ನೆನಪಿದೆ. ಒಳ್ಳೇತನದಲ್ಲಿ ನಂಬಿಕೆ ಇರತಕ್ಕಂಥ ಅವರು ತನ್ನಂತೆ ಬೇರೆಯವರು ಒಳ್ಳೆಯವರು ಎಂದು ತಿಳಿದುಕೊಂಡು ಇಂಥ ಪರಿಹಾರ ಸಮಸ್ಯೆಯಲ್ಲಿ ಆ ರೀತಿ ನಂಬಿಕೆಯಿಟ್ಟು ಹೇಳಿದಂತೆ ಕಾಣುತ್ತದೆ. ಆದರೆ ಇದು ಅಷ್ಟು ಸರಳವಾದ ಪ್ರಶ್ನೆಯಲ್ಲ. ಮತ್ತು ಯಾವ ವ್ಯಕ್ತಿಯಲ್ಲಿಯೂ ನಂಬಿಕೆ ಇಡತಕ್ಕ ಪ್ರಶ್ನೆಯಲ್ಲ. ಈ ಸಮಸ್ಯೆ ಕಳೆದ ಹನ್ನೆರಡು ವರ್ಷಗಳಿಂದ ರಾಜ್ಯದ ಮುಂದಿದೆ. ಆಗ್ಯೆ ಕರ್ನಾಟಕ ರಾಜ್ಯ ರಚನೆಯಾಗಿರಲಿಲ್ಲ, ಅದು ಬೇರೆ. ನೀರು ಹಂಚಿಕೆ ಯಾವ ಆಧಾರದಮೇಲೆ ನಡೆಯಬೇಕು ಎಂಬುದು ಇದ್ದೇಇದೆ. ಇದೂವರೆಗೆ ಒಂದು ಸಮಂಜಸವಾದ ಸರ್ವಸಮ್ಮತವಾದ ಸೂತ್ರವನ್ನು ಕೇಂದ್ರ ಸರಕಾರವಾಗಲೀ, ಪ್ಲಾನಿಂಗ್ ಕಮೀಷನ್ ಅವರು ಆಗಲಿ ಅಥವಾ ಕೇಂದ್ರ ಸರಕಾರದಲ್ಲಿರತಕ್ಕ ನೀರಾವರಿ ವಿದ್ಯುಚ್ಛಕ್ತಿ ಆಯೋಗದವರಾಗಲಿ ಇನ್ಯಾವದಾದರೂ ಆಯೋಗವಾಗಲಿ ಒಂದು ಸೂತ್ರ ಕಂಡುಹಿಡಿಯಲು ಸಾಧ್ಯವಾಗಿಲ್ಲ. ಚರ್ಚಾಸ್ಪದವಾಗಿ ಉಳಿದಿರತಕ್ಕಂಥದಲ್ಲಿ ಬಹಳ ಅಪಾಯಕ್ಕೆ ಅನರ್ಥಕ್ಕೆ ಎಡೆ ಮಾಡಿಕೊಟ್ಟಿದೆ. 1951ನೇ ಇಸವಿಯ ತೀರ್ಮಾನ ಪ್ರಕಾರ ಆಂಧ್ರದವರು ಬಹಳ ಮಟ್ಟಿಗೆ ತಮ್ಮ ಪಾಲನ್ನು ಉಪಯೋಗಿಸಿಕೊಂಡು ಮುಂದುವರಿದಿದ್ದಾರೆ. ನಾವು ಬಹಳ ಹಿಂದೆ ಇದ್ದೇವೆ. ಈ ವಿಷಯವನ್ನು ನಾವು ಕೇಂದ್ರ ಸರಕಾರದವರಿಗೆ ಮನಮುಟ್ಟುವಂತೆ ತಿಳಿಸಬೇಕು. ಮಂತ್ರಿಗಳ ಹೇಳಿಕೆಯಲ್ಲಿ ಕಾಲಹರಣ ಮಾಡತಕ್ಕಂಥ ಮಾತುಗಳಿವೆ. ಮತ್ತು ಯಾವ ವಿಷಯವನ್ನು ಹೇಳಬೇಕೋ ಆ ವಿಷಯವನ್ನು ಹೇಳದೆ ಬೇರೆ ವಿಷಯದಲ್ಲಿ ಸಮಾಧಾನಪಡಿಸತಕ್ಕ ಪ್ರಯತ್ನ ಮಾಡಿದ್ದಾರೆ. ಇದರಲ್ಲಿ ನನಗೆ ಒಂದು ಅನಿಸುತ್ತದೆ, ಇವತ್ತು ಈ ವಿಷಯದ ವ್ಯಾಪ್ತಿ ತೀವ್ರತೆ ಬಹುಜನರಿಗೆ ಅರ್ಥವಾದಂತೆ ಕಾಣುವುದಿಲ್ಲ, ಎಷ್ಟು ಜನಕ್ಕೆ ಮಂತ್ರಿ ಮಂಡಲದಲ್ಲಿ ಅರ್ಥವಾಗಿದೆಯೋ ? ಇಲ್ಲವೋ ! 4ನೇ ಅಥವಾ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೂಡ 600 ಸಹಸ್ರ ದಶಲಕ್ಷ ಘನ ಅಡಿ ನೀರನ್ನು ಉಪಯೋಗಿಸಿಕೊಳ್ಳುತ್ತೇವೆಯೋ ? 4ನೇ 5ನೇ ಯೋಜನೆ ಮುಗಿಯುವ ಹೊತ್ತಿಗೆ ಉಪ

(ಶ್ರೀ ಎಸ್. ಗೋಪಾಲಗೌಡ)

ಯೋಗಿಸಿ ಕೊಳ್ಳುತ್ತೇವೆಯೇ ! 4ನೇ 5ನೇ ಯೋಜನೆ ಮುಗಿಯುವ ಹೊತ್ತಿಗೆ ಉಪಯೋಗಿಸಿ ಕೊಳ್ಳಲು ಆಗುವುದಿಲ್ಲ. ಜೊತೆಗೆ ಇದು ಶೃಂಗೇರಿ, ತೀರ್ಥಹಳ್ಳಿ ಹಿಡಿದು ತುಂಗಾ ಭದ್ರಾ ಮೂಲದಿಂದ ರತ್ನಗಿರಿಯಿಂದ ಎಲ್ಲ ಭಾಗದ ಜನರಿಗೆ ಬ್ರೆಂಡಿಂಗ್ ಆಗುತ್ತದೆ ಎಂದು ಕೆಲವರಿಗೆ ಗೊತ್ತು ಇರಲಿಕ್ಕಿಲ್ಲ. ತುಂಗಭದ್ರಾ ಯೋಜನೆಯಾಯಿತು ಹೆಚ್ಚು ನೀರು ಹರಿದುಹೋದರೆ ಹೋಗಲಿ ಎಂಬ ಅಭಿಪ್ರಾಯ ಕೆಲವರಿಗೆ ಇರಬಹುದು. ಆದರೆ ಅದು ಹಾಗಲ್ಲ, ಒಂದು ತೀರ್ಮಾನವಾದಮೇಲೆ ಆ ನದಿಯ ನೀರನ್ನು ಯಾವದೇ ಬೇರೆ ರೀತಿಯಿಂದ ಆ ಪ್ರದೇಶದಲ್ಲಿ ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ. ಕೃಷ್ಣಾ ಜಲಾಶಯದ ಭೂಮಿಯಲ್ಲಿ ಮೈಸೂರಿನ ಭಾಗ 45ಸಾವಿರ ಚದುರ ಮೈಲಿಯಷ್ಟು ಇದೆ. ಇದರಲ್ಲಿ ಸುಮಾರು 18-20 ಸಾವಿರ ಚದುರ ಮೈಲ ಭಾಗ ಹೆಚ್ಚು ಕಡಿಮೆ ಮರು ಭೂಮಿ ಸಮಾನವಾದ ಭೂಮಿ ಇದೆ. ಇದಕ್ಕೆ ವಿಜಾಪುರದ ದುರಂತ ಚರಿತ್ರೆ ನೋಡಬಹುದು ಆಗುಂಬೆ ಹತ್ತಿರ ಪ್ರದೇಶದಲ್ಲಿ 250 ಅಂಗುಲ ಮಳೆ ಬೀಳುವ ಪ್ರದೇಶದಲ್ಲಿರುವವರಿಗೆ ಇದು ಗೊತ್ತಾಗುವುದಿಲ್ಲ 18-20 ಇಂಚು ಮಳೆ ಬಾರದೇ ಇರತಕ್ಕ ಪ್ರದೇಶ ಹತ್ತಿರವೇ ಇರುವ ಸಂಭವವಿದೆ. ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್ ತಿಂಗಳು ಬಿಟ್ಟರೆ ಬಾಕೀಕಾಲದಲ್ಲಿ ನದಿ ಒಣಗಿ ಹೋಗಿರುವ ಸನ್ನಿವೇಶವಿರುತ್ತದೆ. ಹೀಗಿರುವಾಗ ಉತ್ತರದಲ್ಲಿ ಸಿಂಧೂ, ಗಂಗಾ, ಬ್ರಹ್ಮಪುತ್ರ ನದಿಗಳ ಜಲಾಶಯಗಳನ್ನು ಭಾವಿಗೆ ಹೇಗೆ ಮಹತ್ವಕೊಟ್ಟು ಅನೇಕ ಯೋಜನೆಗಳನ್ನು ಮಾಡಿ, ನೀರಾವರಿ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೋ ಹಾಗೆ ದಕ್ಷಿಣದಲ್ಲಿ ಕಾವೇರಿ ಕೃಷ್ಣಾನದಿಗಳಿಗೆ ಇರಬೇಕು. ನದಿಯ ನೀರನ್ನು ಸಮರ್ಪಕವಾಗಿ ಉಪಯೋಗ ಮಾಡಿಕೊಂಡರೆ ಮಾತ್ರ ಆ ಪ್ರದೇಶ ಸುಭಿಕ್ಷ ಮಾಡಬಹುದು ಇದಕ್ಕೆ ಒಂದು ಕ್ರಮ ಏರ್ಪಡಿಸಬೇಕು, ಮೂರು ನಾಲ್ಕು ಯೋಜನೆಗಳ ನಂತರ ಸಹ ಹಾಗೆಯೇ ಇರುಘದರಿಂದ ಇವತ್ತಿನ ದಿನ ಚರ್ಚೆಮಾಡಿ, ವಿಷಾದ, ಅಸಮಾಧಾನ ವ್ಯಕ್ತಪಡಿಸಿ, ಬೇರೆ ರಾಜಕೀಯ ಕಾರಣಗಳಿಗೋಸ್ಕರ ಸಮಾಧಾನ ಪಟ್ಟುಕೊಂಡು ಕೈ ತೊಳಕೊಳ್ಳತಕ್ಕಂಥ ಕೆಲಸ ಇದು ಅಲ್ಲ. ಇನ್ನು ಮುಂದೆ ಹುಟ್ಟಬಹುದಾದ ಪೀಳಿಗೆಯ ಕೈಕಟ್ಟಿ ಹಾಕುವ ಸಮಸ್ಯೆಯಾಗಿದೆ. ಇಡೀ ಕರ್ನಾಟಕದ ಅಳಿವು ಉಳಿವು ಪ್ರಶ್ನೆಯಾಗಿದೆ, ಎಂದು ತಿಳಿದುಕೊಳ್ಳುವುದು ಅವಶ್ಯಕ. ಮುಖ್ಯವಾಗಿ ಸರಕಾರ ಈ ರೀತಿ ತಿಳಿದುಕೊಳ್ಳಬೇಕು, ಅದಕ್ಕಾಗಿ ಇದನ್ನು ಪದೇಪದೇ ಹೇಳುತ್ತಿದ್ದೇವೆ. ಕೇಂದ್ರದಲ್ಲಿ ಪ್ರಭಾವ ಪೂರ್ತಿಹೋಗಿರುವುದಕ್ಕೆ ಕಾರಣ ಏನು ಗೊತ್ತಿಲ್ಲ. ಲೋಕಸಭೆಯಲ್ಲಿ, ರಾಜ್ಯಸಭೆಯಲ್ಲಿ ನಮ್ಮ ರಾಜ್ಯದ ಸದಸ್ಯರಿದ್ದಾರೆ. ಇಲ್ಲಿಂದ ಕೇಂದ್ರಕ್ಕೆ ಹೋಗಿರತಕ್ಕಂಥ ದೊಡ್ಡ ದೊಡ್ಡ ಮಂತ್ರಿಗಳಿದ್ದಾರೆ ಅವರೆಲ್ಲರೂ ಏನು ಪ್ರಯತ್ನ ಮಾಡಿದ್ದಾರೆ ? ಅವರು ಸರಕಾರದ ಹಿಂದೆ ಇದ್ದಾರೆಯೇ ಇಲ್ಲವೇ ಎನ್ನುವ ವಿಷಯ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಇವರೆಲ್ಲರೂ ಇರುವಾಗ್ಗೆ ಕೇಂದ್ರ ಸರಕಾರದ ಮಂತ್ರಿಯವರು ಈ ಒಂದು ಸಮಸ್ಯೆಯನ್ನು ತಾವೇತಾವಾಗಿ ಪರಿಹಾರ ಮಾಡಿದ್ದಾರೆ ಎನ್ನುವುದು ಬಹಳ ಆಶ್ಚರ್ಯದ ಸಂಗತಿಯಾಗಿ ಕಾಣುತ್ತದೆ.

ಇತ್ತೀಚೆಗೆ ಎರಡು-ಮೂರು ಸಲ ಈ ಸಂದರ್ಭದಲ್ಲಿ ನಮ್ಮ ರಾಜ್ಯದ ಮಂತ್ರಿಗಳು ದೆಹಲಿಗೆ ಹೋಗಿದ್ದೇವೆ, ಮಾತುಕತೆ ನಡೆಸಿದ್ದೇವೆ, ನಮಗೆ ಅನ್ಯಾಯ ಮಾಡದಂತೆ ನೋಡಿಕೊಳ್ಳುತ್ತಾರೆಂದು ಹೇಳಿದರು ; ಮತ್ತು ನಮಗೆ ಬರಬೇಕಾದಂಥ ಪಾಲುಗಳನ್ನು ಕೊಟ್ಟುಬಿಡುತ್ತಾರೆಂದು ಹೇಳಿದರು. ಆದರೆ ಈಗ ಆಂಧ್ರದವರಿಗೂ "ನೀವು ಮುಂದುವರಿಯಿರಿ" ಎಂದು ಹೇಳುತ್ತಾರೆ ; ನಮಗೂ "ನೀವೂ ಮುಂದುವರಿಯಿರಿ. ಬೇಕಾದ್ದನ್ನು ಕೊಡುತ್ತೇವೆ" ಎಂದು ಹೇಳಿದ್ದಾರೆ. ಇಂಥ ಒಂದು ಮಾರ್ಗದರ್ಶನ, ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಇಂಥ ಒಂದು ತೀರ್ಮಾನವನ್ನು ಮಾಡಿದ್ದಾರೆ. ಇದರಿಂದ ಮೈಸೂರು ಮತ್ತು ಮಹಾರಾಷ್ಟ್ರ ಎರಡು ರಾಜ್ಯಗಳಿಗೂ ತಾರತಮ್ಯ ಮಾಡಿದಂತಾಗಿದೆ. ಇದರಿಂದ ಏನೆಂದು ತಿಳಿಯಬೇಕಾಗಿದೆಯೆಂದರೆ ಕೇಂದ್ರ ಸರ್ಕಾರದಲ್ಲಿ ಮತ್ತು ಕೇಂದ್ರ ವಿದ್ಯುಚ್ಛಕ್ತಿ ಮತ್ತು ನೀರಿನ ಮಂಡಲಿಯಲ್ಲಿ ಏನಾದರೂ ಆಂಧ್ರ ಮತ್ತು ಮದ್ರಾಸಿನವರುಗಳ ಪ್ರಭಾವ ಇದೆಯೋ ಏನೋ, ಅವರ ಕೈವಾಡ ಇದೆಯೋ ಏನೋ ಎಂದು. ಏಕೆಂದರೆ ನನಗೆ ಗೊತ್ತಾದ ಹಾಗೆ ಅಲ್ಲಿ ಒಂದು ಒಳ್ಳೆಯ ರೀತಿಯಲ್ಲಿ ನಮ್ಮ ಸಮಸ್ಯೆಯನ್ನು ಕೇಂದ್ರ ಸರ್ಕಾರದ ಮುಂದಿಟ್ಟು ನ್ಯಾಯಕ್ಕೆ ಹೋರಾಟ ಮಾಡತಕ್ಕಂಥ ಯಾವ ಒಂದು ಶಕ್ತಿ ಕೇಂದ್ರದಲ್ಲಿ ಇಲ್ಲ ಅನ್ನುವುದು ನಮಗೆ ಕಾಣುತ್ತಿದೆ. ಇದು ಒಂದು ದೊಡ್ಡ ಲೋಪ. ಕೆಲವರು ಹೇಳಬಹುದು. ಇದರಲ್ಲಿ ಯಾವ ಸ್ವಾರ್ಥವೂ ಇರಬಾರದು, ಕೆಲವರು ರಾಜ್ಯದ ಸ್ವಾರ್ಥದ ಮಾತನ್ನೇ ಆಡಬಾರದು ಎಂದು. ವಿಶಾಲ ದೃಷ್ಟಿಯಿಂದ ನೋಡಬೇಕು ಎಂದು ಮಾನ್ಯ ಕೇಂದ್ರ ಮಂತ್ರಿಗಳು ಆದೇಶ ನೀಡುತ್ತಾರೆ. ಇದು ಬಹಳ ಒಳ್ಳೆಯ ಉಪದೇಶ, ಆದರೆ ನಮಗೆ ಬರಬೇಕಾದ ನ್ಯಾಯವಾದ ಪಾಲನ್ನು ಕೊಡದೆ, ಉಪದೇಶ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ಈ ಕೃಷ್ಣಾನದಿ ವಿಷಯವನ್ನು ತೆಗೆದುಕೊಂಡರೆ ನಮ್ಮವರ ಲೆಕ್ಕದ ಪ್ರಕಾರ ಸುಮಾರು 2,340 ಸಹಸ್ರ ದಶಲಕ್ಷ ಘನ ಅಡಿಗಳಷ್ಟು ನೀರು, ಶೇಕಡ 75 ರಷ್ಟು dependability ತೆಗೆದು ಕೊಂಡರೆ ಸಿಗುವುದು ಎಂದು ಹೇಳುತ್ತಾರೆ. ಅದರಲ್ಲಿ ಶೇಕಡ 47.5 ರಷ್ಟು ನೀರು ನಮಗೆ ಬರಬಹುದು, ಮಹಾರಾಷ್ಟ್ರಕ್ಕೆ ಶೇಕಡ 28 ರಷ್ಟು, ಆಂಧ್ರ ಪ್ರದೇಶಕ್ಕೆ 24.5 ರಷ್ಟು ಬರಬಹುದು. 1,110 TMC ನಮಗೆ ಬರಬೇಕಾದುದು. 1951 ರ ಒಂದು ಮಾತುಕತೆಯನ್ನು ಅವರು ಅಗ್ರಿಮೆಂಟ್ ಅಂತ ಹೇಳುತ್ತಾರೆ, ಅದನ್ನು ಅಗ್ರಿಮೆಂಟ್ ಅಂತ ನಾವು ಒಪ್ಪಿಕೊಂಡಿಲ್ಲ. ಆಗ ಮೈಸೂರು, ಸಂಸ್ಥಾನವಾಗಿತ್ತು; ಕರ್ಣಾಟಕವಾಗಿರಲಿಲ್ಲ. ಈ ಸಂದರ್ಭದಲ್ಲಿ ಆ ಭಾಗಗಳು ಮುಂಬೈ, ಮದ್ರಾಸ್ ರಾಜ್ಯದಲ್ಲಿ ಇದ್ದವು; ಆಗ ಕೊಡಗೂ ಇದ್ದಿತು, ಯಾವ ಭಾಗಗಳೂ ಸೇರಿರಲಿಲ್ಲ. ಇದರಿಂದ ಮೈಸೂರು ಸರ್ಕಾರದವರು ಆಗಲೂ ಕೂಡ ವಿರೋಧ ಮಾಡಿದ್ದರು. ಮತ್ತು ಒರಿಸ್ಸಾದವರು ಈ ಸಂದರ್ಭದಲ್ಲಿ ಇರಲಿಲ್ಲ ಎಂದು ಕೇಳುತ್ತೇನೆ. ಹೀಗಿರುವುದರಿಂದ ಇದನ್ನು ಕೇಂದ್ರ ಸರ್ಕಾರದವರೂ ಒಪ್ಪಿಕೊಂಡಿದ್ದಾರೆ; ಅಟಾರ್ನಿ ಜನರಲ್ ಕೂಡ, ಕೇಳಿದಾಗ, ಇದು abinitiovoid ಆಗಿರತಕ್ಕಂಥ ಒಂದು ಅಗ್ರಿಮೆಂಟು ಎಂದು ಒಪ್ಪಿಕೊಂಡಿದ್ದಾರೆ. ಎಲ್ಲರ ಒಪ್ಪಿಗೆ ಇದಕ್ಕೆ ಇಲ್ಲ. 1956 ರಲ್ಲಿ ರಾಜ್ಯಗಳ ಪುನರ್ವಿಂಗಡಣೆ ಆದಾಗ, ಆಗ ತಕ್ಷಣ ಪ್ಲಾನಿಂಗ್ ಕಮಿಷನ್ನಿನವರು, ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಮುಖ್ಯ ಮಂತ್ರಿಗಳು ಮತ್ತು ಇಲಾಖೆಯವರು ಈ ವಿಷಯವನ್ನು ಚರ್ಚೆ ಮಾಡಿದಾಗ, ನ್ಯಾಯವಾದ ತಾಲ್ಲೂಕುಗಳನ್ನು ದೊರಕಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡದ್ದೇವೆ ಹಾಗೆಯೇ ಮುಂದುವರಿದುಕೊಂಡು ಬರಲು ಬಿಟ್ಟದ್ದರಿಂದ, ಈ ಸಮಸ್ಯೆ ಉಗ್ರವಾಗಿ, ಜಟಿಲವಾಗಿ ಬಂದು ನಿಲ್ಲುವುದಕ್ಕೆ ಕಾರಣವಾಗಿದೆ. ಇದರಲ್ಲಿ 1951 ನೇ ಇಸವಿಯಲ್ಲಿ ಆಂಧ್ರದವರಿಗೆ 983 TMC ಯಷ್ಟು ನೀರನ್ನು ಕೊಡಬೇಕು ಅಂತ ಹೇಳಿ ಅವರು ಕೊಟ್ಟಿದ್ದರು. ಆಗ ಮುಂಬೈಗೆ 416 TMC, ಹೈದರಾಬಾದಿಗೆ 410, ಮೈಸೂರಿಗೆ 108.5 TMC, ಮದ್ರಾಸಿಗೆ 760, ಹೀಗೆ ಹಂಚಿದ್ದಾರೆ. ಅದರಲ್ಲಿ ನನಗೆ ಈಚೆಗೆ ಗೊತ್ತಾದಂತೆ, "ನಮಗೆ 114 TMC ಯಷ್ಟನ್ನು ನೀವು ಹೊಡೆದು ಹಾಕಿದ್ದೀರಿ" ಎಂದು ಆಂಧ್ರ ಮಂತ್ರಿಯವರು ಹೇಳಿದರಂತೆ; 800 ಕೊಟ್ಟಿದ್ದು ಸಾಲದೇನೆ. ಈಗ ತಮಗೆ ಇನ್ನೂ 114 TMC ಬರಬೇಕು, ಅದನ್ನು ಬಿಡುವುದಿಲ್ಲ ಎಂದು ಆಂಧ್ರದವರು ಹೇಳುತ್ತಿದ್ದಾರೆ. ಅಷ್ಟೇ ಅಲ್ಲದೆ 1951 ರ ಅಗ್ರಿಮೆಂಟು ಎಲ್ಲರಮೇಲೆಯೂ binding, ಇದನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಕೊಡುವುದಿಲ್ಲ ಎಂದು ಆಂಧ್ರದವರು ಹೇಳುತ್ತಾರೆ. ಆಂಧ್ರದವರು ತಮ್ಮ ಒಂದು ನಿಲುವನ್ನು ಕೇಂದ್ರದಮೇಲೆ ಪ್ರಭಾವಪೂರ್ಣವಾಗಿ ಬೀರುತ್ತಾ ಇದ್ದಾರೆ. ಇದು ಕರ್ಣಾಟಕಕ್ಕೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಮಾತ್ರ ಹೇಳುತ್ತೇನೆ. ಏಕೆಂದರೆ ಈ ಎರಡು ನದಿಗಳೂ ಮಹಾರಾಷ್ಟ್ರದಲ್ಲಿ ಹುಟ್ಟುತ್ತವೆ; ಕರ್ಣಾಟಕದಲ್ಲಿ ಇವು ಮೈನೆರೆಯುತ್ತವೆ ಎಂದು ಹೇಳಬಹುದು, ಮುಂದೆ ಹೋಗಿ ಆಂಧ್ರದಲ್ಲಿ ಅವು ನೀರನ್ನು ಉಣಿಸಿ ಅಲ್ಲಿ ಸಾರ್ಥಕಗೊಳ್ಳುತ್ತವೆ. ನಮಗೆ ಇದು ಪ್ರಕೃತಿದತ್ತವಾದ ಸಂಪತ್ತು; ಇದರಲ್ಲಿ ಎಲ್ಲರಿಗೂ ಪಾಲು ಇರಬೇಕು. ಇದಕ್ಕೆ ಒಂದು ಸೂತ್ರವನ್ನು ಅನುಸರಿಸಿ, ಎಲ್ಲರಿಗೂ ಅನುಕೂಲವಾಗತಕ್ಕಂಥ ಒಂದು ರೀತಿಯಲ್ಲಿ ನಾವು ಈ ಎಲ್ಲ ಪ್ರದೇಶಗಳನ್ನೂ ಅಭಿವೃದ್ಧಿಪಡಿಸಿಕೊಳ್ಳಬೇಕು. ಗುಲ್ಹಾಟಿ ಸಮಿತಿಯವರು ಒಂದು ಮಾತನ್ನು ಹೇಳುತ್ತಾರೆ. ಈ ನೀರು ಅನ್ನತಕ್ಕಂಥಾದ್ದು ಅಪರೂಪವಾದ ಪ್ರಾಕೃತಿಕ ಸಂಪತ್ತು; ಹಾಗೂ ಈ ನೀರಾವರಿ ಸಂಬಂಧದಲ್ಲಿ ಇದು ಬಹಳ ದುಬಾರಿ ವಸ್ತುವಾಗಿದೆ. ಇದನ್ನು ಬಹಳ ಜಿಪುಣತನದಿಂದ ಉಪಯೋಗಿಸಿಕೊಳ್ಳುವುದು ಒಳ್ಳೆಯದು, ಈಗ ನೀರಾವರಿ ಯೋಜನೆಗಳು ಬಹಳ ಲೋಪದೋಷಗಳಿಂದ ಕೂಡಿವೆ, ಅವುಗಳ ಮೇಲೆ ಮರ್ಮಮಾನೆ ಖರ್ಚು ಮಾಡುತ್ತಿದ್ದಾರೆ, ಇದರಿಂದ ಕಷ್ಟವಾಗಿ ದುಷ್ಪರಿಣಾಮವಾಗಬಹುದು, ಇದನ್ನು ಪುನರ್ವಿಮರ್ಶೆ ಮಾಡಬೇಕು ಅಂತ ಕೂಡ ಹೇಳಿ, ಬಹಳ ಸೂಕ್ತವಾದ ಸಲಹೆಗಳನ್ನು ಕೊಟ್ಟು, ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ನೀವು ಇದನ್ನು ಗಮನಕ್ಕೆ ತೆಗೆದುಕೊಂಡು, ಪ್ರತಿಯೊಂದು ಅಂಶವನ್ನೂ ಗಮನಕ್ಕೆ ತೆಗೆದುಕೊಂಡು, ನಮ್ಮ ಯೋಜನೆಗಳನ್ನು ಪರಿಶೀಲನೆ ಮಾಡಿ, ತಕ್ಕ ರೀತಿಯಲ್ಲಿ ಅವುಗಳನ್ನು ಮಾರ್ಪಾಡು ಮಾಡಿಕೊಂಡು, ಮುಂದುವರಿಯದೆ ಹೋದರೆ, ಮುಂದೆ ದೊಡ್ಡ ಅನಾಹುತಕ್ಕೆ ತುತ್ತಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಆದ್ದರಿಂದ ನಾನು ಹೇಳುವುದು ಮೈಸೂರು ಸರ್ಕಾರದವರು ಇದುವರೆಗೆ ಮಾಡಿರತಕ್ಕಂಥ ಪ್ರಯತ್ನ ಅವರ ದೃಷ್ಟಿಯಿಂದ ಸರಿ ಎಂದು ಕಂಡು ಬಂದರೂ ಕೂಡ, ಈಗ ಏನು ಒಂದು ವಿಪತ್ತು ಈ ರಾಜ್ಯಕ್ಕೆ ಬಂದೊದಗಿದೆ. ಯಾರದೇ ತಪ್ಪು ಇರಲಿ ಈ ವಿಪತ್ತಿನಿಂದ ಪಾರಾಗಬೇಕಾದರೆ ಬಹಳ ದೊಡ್ಡ ಸಾಹಸದ ಹೆಜ್ಜೆಯನ್ನು, ನಿಷ್ಠುರದ ಹೆಜ್ಜೆಯನ್ನು ಧೈರ್ಯವಾದ ಹೆಜ್ಜೆಯನ್ನು ಇಡಬೇಕಾಗುತ್ತದೆ. ಅದರಲ್ಲಿ ಬಹುಶಃ ಬಿನ್ನಾಭಿಪ್ರಾಯ ಇರುವುದಕ್ಕೆ ಸಾಧ್ಯವಿಲ್ಲ.

ಇಂಥ ಒಂದು ಶಕ್ತಿ ಈ ಮಂತ್ರಿಮಂಡಳಕ್ಕೆ ಮತ್ತು ಮುಂದಾಳುಗಳಿಗೆ ಇದೆಯೇ ಅನ್ನುವುದು ಒಂದು ಪ್ರಶ್ನೆ. ಅವರು ಹೇಳುತ್ತಾರೆ: "ನಾವು ಮಾಡುತ್ತೇವೆ, ನಮಗೆ ಎಲ್ಲಾ ಧೈರ್ಯವಿದೆ,

(ಶ್ರೀ ಎಸ್. ಗೋಪಾಲಗೌಡ)

ಶಕ್ತಿ ಇದೆ, ನೀವು ಬೆಂಬಲವನ್ನು ಮಾತ್ರ ಕೊಡಿ, ನಮ್ಮ ಜೊತೆಯಲ್ಲಿ ಇರಿ'' ಎಂದು. ನಾವು ಬೆಂಬಲ ಕೊಡುವುದಕ್ಕೂ ತಯಾರಿದ್ದೇವೆ, ಜೊತೆಯಲ್ಲಿ ಇರುವುದಕ್ಕೂ ತಯಾರಿರುತ್ತೇವೆ. ಕೃಷ್ಣಾನದಿಯಲ್ಲಿ ನೀರು ಮುಳುಗಿಸಿದರೆ ನಾವೂ ಮುಳುಗಿ ಹೋಗುತ್ತೇವೆ, ನಿಮಗೆ ಪ್ರಾಣಪಾಯ ಬಂದರೆ ನಮಗೂ ಬರುತ್ತದೆ; ಈ ಸಾವು, ಮುಳುಗಡೆ ಪರಿಸ್ಥಿತಿಯಲ್ಲಿ ಬಹುಶಃ ರಾಜಕೀಯ ಪಕ್ಷದ ದೃಷ್ಟಿ ಬರುವುದಿಲ್ಲ ಎಂದು ನಾವು ತಿಳಿದುಕೊಂಡಿದ್ದೇವೆ. ಹಾಗೆ, ಅಷ್ಟು ಸಂಕುಚಿತ ದೃಷ್ಟಿಯಿಂದ ನಾವು ಇಲ್ಲ. ಇದರಲ್ಲಿ ಯಾವತ್ತೂ ನಿಮಗೆ ಕೊಡುವುದೇ ಉದ್ದೇಶ. ಆದರೆ ಒಳ್ಳೆಯ ಕೆಲಸಕ್ಕೆ ಹಾಗೂ ದಕ್ಷತೆಯಿಂದ ಕೆಲಸ ಮಾಡುವವರಿಗೆ, ಕೆಲಸ ಸಾಧಿಸಿ ವಿಶ್ವಾಸವನ್ನು ನಮ್ಮಲ್ಲಿ ಹುಟ್ಟಿಸತಕ್ಕಂಥವರಿಗೆ ಬೆಂಬಲ ಕೊಡದೇನೆ, ಪ್ರತ್ಯೇಕವಾದ ಬೇರೆ ಕಾರಣಗಳಿಗೆ ಬೆಂಬಲ ಕೊಡುವುದರಿಂದ ಪ್ರಯೋಜನ ವಾಗುವುದಿಲ್ಲ. ನಾನು ಸರ್ಕಾರದಲ್ಲಿ ಹೇಳುವುದಿಷ್ಟು ಮುಖ್ಯವಾಗಿ ಶ್ರೀವರ್ಗ ನಿಜಲಿಂಗಪ್ಪನವರಲ್ಲಿ ಅರಿಕೆಮಾಡಿಕೊಳ್ಳುವುದು ಇಷ್ಟೆ. ತಮ್ಮ ಬಗ್ಗೆ ನನಗೆ ವೈಯಕ್ತಿಕವಾಗಿ ಗೌರವ ಎಲ್ಲಾ ಇದೆ. ಆದರೆ ರಾಜಕಾರ್ಯದಲ್ಲಿ ಇವತ್ತು ಪರಿಸ್ಥಿತಿ ಎಷ್ಟು ಕೆಟ್ಟುಹೋಗಿದೆಯೆಂದರೆ, ಒಬ್ಬರ ಕತ್ತನ್ನು ಒಬ್ಬರು ಕಡಿದು ತಾವು ಬದುಕಬೇಕು ಅನ್ನುವ ಮನೋಭಾವ ದೇಶದಲ್ಲಿದೆ. ಬೇರೆ ದೇಶಗಳ ವಿಷಯ ಹೇಳುವುದಿಲ್ಲ. ಇವತ್ತು ರಾಜ್ಯ ರಾಜ್ಯಗಳಿಗೆ ಕೂಡ ಒಂದು ಮುಡಿ ನೆಲಕ್ಕಾಗಿ, ಒಂದು ಹಿಡಿ ಮಣ್ಣಿಗಾಗಿ, ಒಂದು ತಂಬಿಗೆ ನೀರಿಗಾಗಿ, ಕಚ್ಚಾಡತಕ್ಕಂಥ ಪರಿಸ್ಥಿತಿ ಇಲ್ಲಿ ಬಂದಿದೆ. ಮಾತಿನಲ್ಲಿ ಎಷ್ಟೋ ಒಳ್ಳೆಯ ಮಾತನ್ನು ಹೇಳಬಹುದು; ಸರಕಾರದ ಅನ್ಯೋನ್ಯತೆ, ಪ್ರೀತಿ, ಭಾತೃಭಾವ ಇರುವ ಮಾತುಗಳನ್ನು ಬಹಳ ಸಲ ಹೇಳಬಹುದು. ವಾಸ್ತವವಾಗಿ ಅನ್ನವನ್ನು ಹಂಚಿ, ಊಟ ಮಾಡುವ ಪ್ರಶ್ನೆ ಬಂದಾಗ, ನೀರು ಹಂಚಿ ಕುಡಿಯತಕ್ಕಂಥ ಪ್ರಶ್ನೆ ಬಂದಾಗ, ನೆಲವನ್ನು ಹಂಚಿ ಕೊಂಡು ಪಾಲು ಮಾಡಿಕೊಳ್ಳತಕ್ಕಂಥ ಪ್ರಶ್ನೆ ಬಂದಾಗ, ಕಷ್ಟಸುಖದಲ್ಲಿ ಭಾಗಿಯಾಗತಕ್ಕಂಥ ಪ್ರಶ್ನೆ ಬಂದಾಗ, ಮನುಷ್ಯ ಎಷ್ಟು ಸ್ವಾರ್ಥನಾಗುತ್ತಾನೆ, ಎಷ್ಟು ಹೀನ ಸ್ಥಿತಿಗೆ ಇಳಿಯುತ್ತಾನೆ ಅನ್ನತಕ್ಕಂಥಾದ್ದು ಎಲ್ಲರಿಗೂ ಮನವರಿಕೆಯಾಗಿರುವ ವಿಷಯ.

2-30 P.M.

ಆದ್ದರಿಂದ ನಾವಿಲ್ಲಿ, ನಾವೇನು ಮಹಾರಾಷ್ಟ್ರದವರನ್ನು ಆಂಧ್ರದವರನ್ನು, ಕೇಂದ್ರದವರನ್ನು ಮತ್ತು ಮದರಾಸಿನವರನ್ನು ಟೀಕೆ ಮಾಡುತ್ತೇವೆ, ಅವರ ಮೇಲೆ ದೋಷಾ ರೋಪಣೆ ಮಾಡುತ್ತೇವೆ, ಆಕ್ಷೇಪಣೆ ಹೊರಿಸುತ್ತೇವೆ ಎಂಬ ಪ್ರಶ್ನೆ ಇಲ್ಲ. ಈ ನಾಡಿನ ಈಗಿರತಕ್ಕ ಜನರು, ಕಾಲಾನು ಕಾಲದಲ್ಲಿ ಹುಟ್ಟಿ ಬದುಕಿ ಬಾಳತಕ್ಕ ಅನೇಕ ಲಕ್ಷ, ಕೋಟಿ ಜನರ ಜೀವನದ ಮಾತಾಗುತ್ತದೆ, ಈ ಸಮಸ್ಯೆ ತೀರ ಗಂಭೀರವಾದದ್ದು ವ್ಯಾಪಾರವಾದದ್ದು ಮತ್ತು ಕಾಲದ ದೃಷ್ಟಿಯಿಂದಲೂ ಕೂಡ ಭವಿಷ್ಯದ ನಿರ್ಧಾರಕ್ಕೆ ಸಂಬಂಧಪಟ್ಟ ವಿಷಯ. ಆದ್ದರಿಂದ ಇವತ್ತು ಮಂತ್ರಿ ಮಂಡಲದಲ್ಲಿರತಕ್ಕವರಿಗೆ ಅಂಥ ಒಂದು ದೂರವನ್ನು ನೋಡತಕ್ಕ ದೃಶ್ಯ ಬರಲಿ ಮತ್ತು ಕೇವಲ ಮನೆಯಲ್ಲಿನ ಪ್ರಶ್ನೆಯಾಗಿಮಾಡಿ ಕೊಂಡು ಇದಕ್ಕೆ ಅಡ್ಡಿಮಾಡದೇ ಇರಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಸುಬ್ಬಾರೆಡ್ಡಿಯವರು ಹೇಳಿದ ಹಾಗೆ ನಿಜಲಿಂಗಪ್ಪನವರೂ ಕೂಡ ಏನಾದರೂಮಾಡಿ ಒಂದು ವ್ಯವಸ್ಥೆಮಾಡಿಸುತ್ತೇನೆ, ಗಾಬರಿಯಾಗಬೇಡಿ, ಬೆಂಬಲ ಕೊಡಿ ಎಂದು ಹೇಳಬಹುದು ಮತ್ತು ಈಗಾಗಲೇ ಅನೇಕರು ಅವರಲ್ಲಿ ವಿಶ್ವಾಸವನ್ನಿಟ್ಟುಕೊಂಡಿದ್ದಾರೆ. ವಿಶ್ವಾಸವನ್ನಿಟ್ಟುಕೊಂಡು ಏನೂ ಮಾತನಾಡದೇ ಇದಕ್ಕೆ ವಿರೋಧಮಾಡದೇ ಹೋಗಬಹುದು, ಆದರೆ ನಾಳೆ ಏನಾದರೂ ಅಪಾಯವುಂಟಾದರೆ, ತಪ್ಪಾಗಿ ತೀರ್ಮಾನವಾಗಿ ಪುನರ್ವಿಮರ್ಶೆಮಾಡದೇ ನಮಗೆ ದೊರಕಬೇಕಾದ ನ್ಯಾಯವಾದ ಪಾಲು ದೊರಕದೇ ಹೋದರೆ ಆರೀತಿ ವಿಶ್ವಾಸ ಇಟ್ಟುಕೊಂಡ ಬೆಂಬಲ ಕೊಟ್ಟವರು ಇದಕ್ಕೆ ಬಾಧ್ಯರಾಗು ತ್ತಾರೆ ಎಂಬದನ್ನು ಕೂಡ ಅವರು ಚೆನ್ನಾಗಿ ತಿಳಿದುಕೊಂಡಿರಬೇಕು. ಆದ್ದರಿಂದ ನಮ್ಮ ಸಭಾನಾಯಕರಲ್ಲಿ ನಾನು ಹೇಳುವುದು ಇಷ್ಟೆ. ಈ ವಿಚಾರದಲ್ಲಿ ಎಲ್ಲರೂ ಬಿಚ್ಚು ಮನಸ್ಸಿನಿಂದಿರುವು ದಕ್ಕೆ ಅವಕಾಶ ಕೊಡಬೇಕು. ಬೆಂಬಲ ತೆಗೆದುಕೊಳ್ಳುವುದು ಬೇರೆ ವಿಷಯದಲ್ಲಿ ಸರಿ. ಆದರೆ ಇಂಥಾ ವಿಷಯದಲ್ಲಿ ಗುಲ್ಬರ್ಗದ ಅಣ್ಣಾರಾಯರು, ಅವರೊಬ್ಬರೇ ಧೈರ್ಯಮಾಡಿ ಈ ಸಭೆಯಲ್ಲಿ ಹೇಳಿದರು. ವೀರೇಂದ್ರ ಪಾಟೀಲ್ ಅವರೂ ಗುಲ್ಬರ್ಗದವರೇ ಆಗಿದ್ದಾರೆ ಅವರೂ ಕೂಡ ಆಗ್ರಹ ಪೂರ್ವಕವಾಗಿ ವೈಯುಕ್ತಿಕವಾಗಿ ಹೇಳಿದ್ದಾರೆ. ಅವರು ಈ ವಿಷಯದಲ್ಲಿ ಯೋಗ್ಯವಾದ ನಿಲುವನ್ನು ಹೊಂದಿದ್ದಾರೆ. ಅವರು ಹೈದರಾಬಾದ್ ಕರ್ನಾಟಕದಿಂದ ಬರತಕ್ಕವರಾದ್ದರಿಂದ ನನಗಿಂತ ಅವರಿಗೆ ಗುಲ್ಬರ್ಗ, ರಾಯಚೂರು, ಬಿದರ್ ಬಗ್ಗೆ ಆಸಕ್ತಿ ಇರಬೇಕು. ಇನ್ನು ಬಿಜಾಪುರದವರು, ಧಾರವಾಡದವರು, ಬೆಳಗಾಂನವರು ಮತ್ತು ಚಿತ್ರದುರ್ಗ ಈ ಎಲ್ಲಾ ಭಾಗಗಳವರೂ ಕೂಡ ಹೆಚ್ಚು ಒತ್ತಾಯವನ್ನು ಸರ್ಕಾರದವರ ಮೇಲೆ ತರಬೇಕು. ಇದರಲ್ಲಿ ಸರ್ಕಾರ ಯಶಸ್ವಿಯಾಗಬೇಕೆಂದು ಹೇಳಬೇಕು. ಇನ್ನು

ಹೆಚ್ಚಿನ ರೀತಿಯಲ್ಲಿ ಎಚ್ಚರಿಸುವುದು ಒಳ್ಳೆಯದು. ಇದರಲ್ಲಿ ಜನರ ಪಾತ್ರ ಬಹಳವಾಗಿರುತ್ತದೆ. ಸರ್ಕಾರದವರು ಮುಂದೆ ಬಂದಿಲ್ಲ ಎಂದು ಹೇಳುತ್ತಿಲ್ಲ. ಪ್ರತಿಯೊಂದು ಕಡೆಯವರೂ ಈ ದಿವಸ ಒಟ್ಟಾಗಿ ನಮಗೆ ನೀರು ಬೇಕು, ಅದಕ್ಕೆ ತಕ್ಕ ಯೋಜನೆಯಾಗಬೇಕೆಂದು ಹೇಳಬೇಕು. ಈರೀತಿ ಎಲ್ಲಾ ಕಡೆಯಲ್ಲೂ ಜನತೆಯಲ್ಲಿ ಜಾಗೃತಿಯುಂಟಾಗಿ ಈ ಸಮಸ್ಯೆ ಬಗೆಹರಿಯುವುದಕ್ಕೆ ಸರ್ಕಾರದವರು ನ್ಯಾಯವಾದ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇದು ಅನಿವಾರ್ಯವಾದ ಕಾರಣ. ಈ ಸಮಸ್ಯೆಯನ್ನು ಕೇವಲ ನ್ಯಾಯ ಮಂಡಲಿಗೆ ಒಪ್ಪಿಸತಕ್ಕ ಸಾಹಸ, ಧೈರ್ಯವನ್ನು ಈ ಸರ್ಕಾರ ತಳೆಯಬೇಕಾಗುತ್ತದೆ, ಇಂದಲ್ಲ, ನಾಳೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Now, I call upon Sri M. C. Basappa to speak. Before he begins, I want to point out that the reply will commence at 5 p.m. All discussion must be over by 5 p.m.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಕೃಷ್ಣಾ, ಗೋದಾವರೀ ನೀರಿನ ಹಂಚಿಕೆ ವಿಷಯ ಬಹಳ ದಿವಸದಿಂದ ಅನೇಕ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರದ ಗಮನವನ್ನು ಸೆಳೆದಿದ್ದು ಇತ್ತೀಚೆಗೆ ಸಂಪೂರ್ಣವಾದ ಒಂದು ತೀರ್ಮಾನವನ್ನು ಕೊಡದೇ ಇದ್ದರೂ ಕೂಡ ತಾತ್ಕಾಲಿಕವಾದ ಒಂದು ತೀರ್ಮಾನವನ್ನು ಕೇಂದ್ರ ಸರ್ಕಾರದವರು ಕೈಕೊಂಡಿದ್ದಾರೆ. ಈ ತಾತ್ಕಾಲಿಕ ತೀರ್ಮಾನರಾದ ನಮ್ಮ ರಾಜ್ಯ ಸರ್ಕಾರದ ಹಿತಕ್ಕೆ ಏನಾದರೂ ಧಕ್ಕೆ ಬಂದಿದೆಯೇ ಅಥವಾ ಯಾವ ವಿಧವಾದ ಕ್ರಮವನ್ನು ಕೈಕೊಳ್ಳಬೇಕಾಗಿದೆ ಎಂಬ ವಿಚಾರದಲ್ಲಿ ಅನೇಕ ಸದಸ್ಯರು ಈಗಾಗಲೇ ಸಲಹೆಗಳನ್ನು ಕೊಟ್ಟಿದ್ದಾರೆ. ಕೇಂದ್ರದ ನೀರಾವರೀ ಮಂತ್ರಿಗಳು ಪಾರ್ಲಿಮೆಂಟ್ ಮುಂದೆ ಮಾಡಿರತಕ್ಕ ಒಂದು ಸ್ಟೇಟ್‌ಮೆಂಟ್ ನೋಡುವುದಾದರೆ ಮೊದಲನೆಯದಾಗಿ 1951ನೇ ಅಗ್ರಿಮೆಂಟ್ ವಿಚಾರದಲ್ಲಿ ಗಮನವನ್ನಿಟ್ಟು ಅವರ ತೀರ್ಮಾನವನ್ನು ಹೇಳಿದಂತೆ ಕಾಣುವುದಿಲ್ಲ. ಒಂದು ಕಡೆ ಈರೀತಿ ಹೇಳುತ್ತಾರೆ.—

"Briefly the advice of the Ministry of Law was that the agreement was legally wholly ineffective and unenforceable."

ಮಿನಿಸ್ಟರ್ ಆಫ್ ಲಾ ಅವರ ಒಪಿನೀಯನ್ ಹೇಳಿ ತಮ್ಮ ತೀರ್ಮಾನವನ್ನು ಹೇಳಿಲ್ಲ. ಇನ್ನೊಂದು ಕಡೆ, ಈ ಸಂಸ್ಥಾನಗಳಿಗೆ ಇಷ್ಟಿಷ್ಟು ಹಂಚಿಕೆ ಆಗಬೇಕೆಂದು ಹೇಳಿದ ಮೇಲೆ 15ನೇ ಕಲಂನಲ್ಲಿ ಈ ರೀತಿ ಹೇಳುತ್ತಾರೆ.—

"It will be seen that the above proposals will keep the States concerned fully occupied, so far as irrigation and power projects are concerned, till end of the fifth-five Year Plan, *i.e.*, 1976 and as I have indicated earlier, the 1951 Memorandum of Agreements was in any case due for revision in that year."

ಇದು ವಾಯ್ಡ್ ಎಂದು ಹೇಳಿದ ಮೇಲೆ 1976ರಲ್ಲಿ ಅದು ಬದಲಾವಣೆಯಾಗಬೇಕೇ, ವ್ಯತ್ಯಾಸ ಮಾಡಬೇಕೇ ಎಂದು ಆಲೋಚನೆ ಮಾಡತಕ್ಕ ಪ್ರಶ್ನೆ ಕೂಡ ಇದರಲ್ಲಿ ಇರಬಾರದಾಗಿತ್ತು. ಆ ಅಗ್ರಿಮೆಂಟ್ ಬಿಟ್ಟಿದ್ದೇವೆ ಅದು ಯೋಗ್ಯವಾದದ್ದಲ್ಲ ಎಂದು ಅಲ್ಲಿಗೇ ಬಹುಶಃ ನಿಲ್ಲಿಸಿದ್ದರೆ ಸಾಕಾಗಿತ್ತು ಎಂದು ನಾನು ಅಂದು ಕೊಂಡಿದ್ದೇನೆ. ಈಗ ತಾತ್ಕಾಲಿಕವಾಗಿ ಅವರು ಕೊಟ್ಟಿರತಕ್ಕ ಹಂಚಿಕೆಗಳನ್ನು ನೋಡುವುದಾದರೆ ಮೈಸೂರು ರಾಜ್ಯಕ್ಕೆ ಇದರಿಂದ ಏನಾದರೂ ಧಕ್ಕೆ ಬಂದಿದೆಯೇ ಎಂಬುದನ್ನು ಆಲೋಚನೆ ಮಾಡಬೇಕು. ಗುಲ್ಹಾಟಿ ಕಮೀಷನ್ ಅವರು ಕೊಟ್ಟಿರತಕ್ಕ ಸೂಚನೆಗಳನ್ನು ಕೂಡ ಅವರು ಯೋಚನೆಮಾಡಿ ಇಟ್ಟುಕೊಂಡಿದ್ದಾರೆಯೇ ಅಥವಾ ಬಿಟ್ಟು ಮಾಡಿದ್ದಾರೆಯೇ ಎಂಬುದು ಒಂದು ಜಟಿಲವಾದ ಪ್ರಶ್ನೆಯಾಗಿದೆ. ಗುಲ್ಹಾಟಿ ಕಮೀಷನ್ ಅವರ ಶಿಫಾರಸಿನಲ್ಲಿ 63ನೇ ಪ್ಯಾರಾಗ್ರಾಫ್‌ನಲ್ಲಿ ಈರೀತಿ ಹೇಳುತ್ತಾರೆ.—

"Immediate steps be taken to prepare an integrated plan incorporating the power and irrigation developments proposed by different States in the lower Godavari area........

As soon as this preliminary project report has been prepared, final decision can be taken in regard to :

(ಶ್ರೀ ಎಂ. ಸಿ. ಬಸಪ್ಪ)

(i) the scope of the Nagarjunasagar Project in the light of the diversions from the Godavari; (ii) sanction to or abandonment of the Nagarjunasagar Hydro-electric project, and (iii) the scope of the Srisailm Project."

[SRI M. SRINIVASA NAYAK (CHAIRMAN) in the Chair.]

ಈ ಮೂರು ವಿಚಾರಗಳಲ್ಲಿ ಸರ್ವೇ ಆದ ತಕ್ಷಣ ಸರ್ಕಾರದವರು ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಸಲಹೆಮಾಡಿದ್ದಾರೆ. ಆದರೂ ಕೂಡ ಇವತ್ತು ಕೇಂದ್ರ ನೀರಾವರಿ ಮಂತ್ರಿಗಳು 800 ಟಿ.ಎಂ.ಸಿ.ಎಫ್.ಟಿ. ನೀರು ಉಪಯೋಗಿಸಿಕೊಳ್ಳುವುದಕ್ಕೆ ಆಂದ್ರ ಸರ್ಕಾರದವರಿಗೆ ಅಧಿಕಾರ ಕೊಟ್ಟು ಅವರ ಶ್ರೀಶೈಲ, ನಾಗಾರ್ಜುನ ಸಾಗರದ ಕೆಲಸ ಪ್ರಾರಂಭಮಾಡಬಹುದು ಎಂದು ಹೇಳಿರುವುದರಿಂದ ಏನು ಪರಿಣಾಮವಾಗುತ್ತದೆ ಎಂಬುದನ್ನು ಯೋಚನೆಮಾಡಬೇಕು. ಈಗ ಕೃಷ್ಣಾ ನದಿ ನೀರು ಯಾವ ಯಾವ ಪರಿಯಾದಲ್ಲಿ ಬರುತ್ತದೆ ಎಂದು ಗಮನಿಸಿ total Krishna yield 75 ಪರ್‌ಸೆಂಟ್ ಅಂತ ಲೆಕ್ಕ ಹಾಕಿರುವ ಪ್ರಕಾರ ಮಹಾರಾಷ್ಟ್ರದವರಿಗೆ 955 ಟಿ.ಎಂ.ಸಿ ಎಫ್.ಟಿ. ನೀರು ಸಿಕ್ಕುತ್ತದೆ. ಮೈಸೂರಿನವರಿಗೆ 850 ಟಿ.ಎಂ.ಸಿ.ಎಫ್.ಟಿ. ನೀರು ಸಿಕ್ಕುತ್ತದೆ. ಆಂಧ್ರದವರಿಗೆ 412 ಟಿ.ಎಂ.ಸಿ.ಎಫ್.ಟಿ. ನೀರು ದೊರೆಯುತ್ತದೆ.

ಈಗ ಆ ಕೇಂದ್ರ ಸರ್ಕಾರದವರ ತೀರ್ಮಾನದ ಪ್ರಕಾರ ಆಂಧ್ರದವರು 800 T.M.C.ft. ನೀರನ್ನು ಉಪಯೋಗಿಸಿಕೊಳ್ಳಬಹುದೆಂದು ಹೇಳಿದ್ದಾರೆ. ಆದರೆ ಈಗ ಆ ಆಂಧ್ರಕ್ಕೆ ಕೊಟ್ಟಿರತಕ್ಕ 800 T.M.C. ft. ನೀರಿನಲ್ಲಿ 412 T.M.C. ft. ನೀರನ್ನು ಕಳೆದರೆ ಮೈಸೂರಿಗೆ 388 T.M.C. ft. ಕೊಟ್ಟೇ ಕೊಡಬೇಕಾಗಿ ಬರುತ್ತದೆಂಬ ತೀರ್ಮಾನವನ್ನು ಕೈಗೊಂಡ ಹಾಗೇ ಆಯಿತು. ಮೈಸೂರು ರಾಜ್ಯದ ಬೌಂಡ್ರಿಯ ಸ್ವಲ್ಪ ಕೆಳಗೆ ಹರಿಯತಕ್ಕ ಈ 388 T.M.C. ft. ನೀರಿಗೆ ಆಂಧ್ರದವರೀಗ ಆ ಶ್ರೀಶೈಲಂ ಪ್ರಾಜೆಕ್ಟನ್ನು ಕಟ್ಟಬೇಕೆಂದು ಸಕಲ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೆ ಆ ಗುಲ್ಹಾಟಿ ಸಮಿತಿಯವರು ಪೂರ್ಣ ಸರ್ವೇ ಆದನಂತರ ಆ ಶ್ರೀಶೈಲಂ ಪ್ರಾಜೆಕ್ಟಿನ ಸೈಟನ್ನು ಮತ್ತು ಸೈಜನ್ನು ಬದಲಾವಣೆ ಮಾಡುವುದಕ್ಕೆ ಅವಕಾಶವಿದೆ ಎಂತ ಆ ಸಮಿತಿಯವರು ಹೇಳಿದ್ದಾರೆ. ಆದಾಗ್ಯೂ ಆಂಧ್ರದವರು ಆ ಶ್ರೀಶೈಲಂ ಪ್ರಾಜೆಕ್ಟನ್ನು 884 T.M.C. ft. ನೀರಿನ ಕೃಪಾಸಿಟಿಗೆ ಸರಿಯಾಗೇ ಕಟ್ಟಬೇಕೆಂದು ನಿಷ್ಕರ್ಷೆ ಮಾಡಿಕೊಂಡಿದ್ದಾರೆ. ಈ ಒಂದು ಅವರ ನಿರ್ಧಾರದಿಂದ ಕೇಂದ್ರ ಸರ್ಕಾರದವರು ಅವರಿಗೆ ಈ ಶ್ರೀಶೈಲಂ ಪ್ರಾಜೆಕ್ಟ್‌ಗೆ 388 T.M.C. ft. ನೀರನ್ನು ಕೊಟ್ಟೇ ಕೊಡಬೇಕು. ಇನ್ನು ಆ ನಾಗಾರ್ಜುನ ಸಾಗರಕ್ಕೆ ಈಗಾಗಲೇ ಅವರು 800 T.M.C. ft ನೀರನ್ನು ಕೊಡಲು ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ಆ ಶ್ರೀಶೈಲಂ ಪ್ರಾಜೆಕ್ಟನ್ನು ಏಕೆ ಬದಲಾಯಿಸಬೇಕು ಎಂಬುದಾಗಿ ಅವರು ಲೆಕ್ಕ ಹಾಕುತ್ತಿದ್ದಾರೆ. ಹೀಗೆ ಈಗ ಒಂದು ಪ್ರಶ್ನೆ ಉದ್ಭವಿಸಿದೆ. ಆದರೆ ಆ ಗುಲ್ಹಾಟಿ ಸಮಿತಿಯವರು ಇನ್ನೂ ಒಂದು ಸಲಹೆಯನ್ನು ಕೊಟ್ಟಿದ್ದಾರೆ.—(i) ಒಂದು ಲಿಂಕ್ ಕೆನಾಲನ್ನು ಗೋದಾವರಿ ನದಿಯಿಂದ 40 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪೋಲಾವರಂನಿಂದ ವಿಜಯವಾಡದವರೆಗೂ ತೆಗೆದುಕೊಂಡು ಹೋದರೆ ಆ ನದಿಯಿಂದ ಸುಮಾರು 211 T.M.C. ft. ನೀರನ್ನು ಕೃಷ್ಣಾನದಿಗೆ ಬರುವಂತೆ ಮಾಡಿಕೊಳ್ಳಬಹುದೆಂದೂ, ಹಾಗೆ ಮತ್ತೊಂದು ಕಡೆಯಲ್ಲಿ ಆ ಗೋದಾವರಿ ನದಿಯಿಂದ ಮತ್ತೊಂದು ಲಿಂಕನ್ನು ಅಲ್ಲಾಬಕಾದಿಂದ ಪುಲಿಚಿಂತಲುವರೆಗೆ 10 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮತ್ತೆ 95 T.M.C. ft. ನೀರನ್ನು ಕೃಷ್ಣಾನದಿಗೆ ತಿರುಗಿಸಬಹುದು ಎಂತ ಸಲಹೆ ಮಾಡಿದ್ದಾರೆ. ಹೀಗೆ ಸ್ವಲ್ಪ ಹಣವನ್ನು ಖರ್ಚುಮಾಡಿದರೆ ಗೋದಾವರಿ ನದಿಯಿಂದ ಕೃಷ್ಣಾನದಿಗೆ 306 T.M.C. ft. ನೀರನ್ನು ತೆಗೆದುಕೊಳ್ಳಲು ಅವಕಾಶವಿರುತ್ತೆಂದು ಸಲಹೆ ಮಾಡಿದ್ದಾರೆ. ಈ ದಿವಸ ಕೇಂದ್ರ ಸರ್ಕಾರದವರಿಗೆ ಈ ಮೈಸೂರು ರಾಜ್ಯದ ಹಿತವನ್ನು ಬಯಸಬೇಕೆಂಬ ಅಭಿಪ್ರಾಯವಿದ್ದರೆ, ಈಗ ಕೇಂದ್ರದವರು ಆಂಧ್ರಕ್ಕೆ ಕೊಟ್ಟಿರತಕ್ಕ 800 T.M.C. ft. ನೀರಿನಲ್ಲಿ ಆ 800 T.M.C. ft. ನೀರನ್ನು ಪೂರ್ತಿಯಾಗಿ ಕೃಷ್ಣಾನದಿಯಿಂದ ಉಪಯೋಗ ಮಾಡಿಕೊಳ್ಳುವುದರ ಬದಲು ಆ ಗೋದಾವರಿ ನದಿಯಿಂದ ಆ ಗುಲ್ಹಾಟಿ ಸಮಿತಿಯವರ ಸಲಹೆ ಪ್ರಕಾರ 306 T.M.C. ft. ನೀರನ್ನು ಉಪಯೋಗಿಸಿಕೊಳ್ಳುವಂತೆ ಆಂಧ್ರಕ್ಕೆ ಸಲಹೆ ಮಾಡಿದರೆ ಅಲ್ಲಿ ಅವರ ಪ್ರಾಜೆಕ್ಟ್‌ಗಳೂ ಮುಂದುವರಿಯುತ್ತವೆ. ಇಲ್ಲಿ ನಮಗೂ ಅನುಕೂಲವಾಗುತ್ತದೆ. ಹಾಗಿಲ್ಲವಾದರೆ ಆ ಕೇಂದ್ರ ಸರ್ಕಾರಕ್ಕೆ ಈ ಮೈಸೂರು ರಾಜ್ಯದ ಹಿತಬಯಸುವ ಆಕಾಂಕ್ಷೆಯಿಲ್ಲವೆಂತಲೇ ಹೇಳಬೇಕಾಗುತ್ತದೆ. ಈ ದಿವಸ ಆ ಆಂಧ್ರದವರಿಗೆ 800 T.M.C. ft. ನೀರನ್ನು ಕೃಷ್ಣಾ

ನದಿಯಿಂದ ಕೊಟ್ಟಿರುವುದರಿಂದ ನಮಗೆ ಕೃಷ್ಣಾ ನೀರನ್ನು ಕೊಡಲು ಕೇಂದ್ರಕ್ಕೆ ತೊಂದರೆಯಾಗಿದೆ. ನಮಗೆ ಕೃಷ್ಣಾ ನದಿಯಿಂದ ದೊರೆಯಬೇಕಾದ ನ್ಯಾಯವಾದ ನೀರಿನ ಪಾಲು ಸಿಕ್ಕಬೇಕಾಗಿದ್ದರೆ ಆ ಗುಲ್ಹಾಟಿ ಸಮಿತಿಯವರು ಕೊಟ್ಟಿರತಕ್ಕ 306 T.M.C. ft. ನೀರಿಗೂ ಈ ಕೃಷ್ಣಾ ನದಿಯ 800 T.M.C. ft. ನೀರಿಗೂ ಒಂದ ಸಂಬಂಧವಿರುತ್ತೆ. ಈ ದಿವಸ ಆಂಧ್ರಕ್ಕೆ ಕೊಟ್ಟಿರತಕ್ಕ 800 T.M.C. ft. ನೀರನ್ನು 306 T.M.C. ft. ನೀರನ್ನು ಆಂಧ್ರದವರು ಗೋದಾವರಿಯಿಂದ ಬಳಸಿದರೆ ಆಗ ಕೃಷ್ಣಾ ನದಿಯಲ್ಲಿ 306 T.M.C. ft. ನೀರ ಉಳಿಯುತ್ತೆ, ಇದರಿಂದ ಮೈಸೂರಿನವರಿಗೆ ಅನುಕೂಲವಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಆ ಆಂಧ್ರದವರು ಈ ದಿವಸ ಆ ಶ್ರೀಶೈಲಂ ಡ್ಯಾಮಿನ ಎತ್ತರವನ್ನು ಕಡಮೆ ಮಾಡಬೇಕಂತ ಹೇಳಿದ್ದರೂ ಅವರು ಕೇಳುತ್ತಿಲ್ಲ. ಅವರ ಉದ್ದೇಶ ಈಗ ಕಟ್ಟುತ್ತಿರುವ ಶ್ರೀಶೈಲ ಪ್ರಾಜೆಕ್ಟ್ ಏನಿದ್ದರೂ ಅದು ಪವರ್ ಪ್ರಾಜೆಕ್ಟ್ ಮಾತ್ರ. ಅದಕ್ಕೆ ತೆಗೆದುಕೊಳ್ಳತಕ್ಕ ನೀರೆಲ್ಲ ಅಲ್ಲಿ ಬಿದ್ದು ಮುಂದೆ ಆ ನೀರೆಲ್ಲಾ ನಾಗಾರ್ಜುನ ಸಾಗರಕ್ಕೇ ಬರಬೇಕು. ಈಗ ಆ ಆಂಧ್ರ ದೇಶಕ್ಕೆ ಈ ಕೃಷ್ಣಾ ನದಿಯಿಂದ 800 T.M.C. ft. ನೀರನ್ನು ಕೊಡಬೇಕೆಂದೂ ಕೇಂದ್ರ ಸರ್ಕಾರ ತೀರ್ಮಾನ ಕೊಟ್ಟಿದ್ದಾರೆ. ಅಂದರೆ ಈಗ ಆ ನಾಗಾರ್ಜುನ ಸಾಗರದ ಎರಡನೇ ಸ್ಟೇಜಿನ ಕೆಲಸಗಳು ಮುಂದುವರಿಯಲಿ ಎಂತ ಕೇಂದ್ರ ಸರ್ಕಾರದ ಒಪ್ಪಿಗೆ ಇದ್ದ ಹಾಗಾಯಿತು. ಹಾಗೇ ಆ ಶ್ರೀಶೈಲ ಪ್ರಾಜೆಕ್ಟಿನ ಕೆಲಸವೂ ಸಹ ಮುಂದುವರಿಯಬಹುದೆಂಬ ಅಭಿಪ್ರಾಯ ಕೇಂದ್ರ ಸರ್ಕಾರಕ್ಕಿದ್ದ ಹಾಗೆ ಕಂಡುಬರುತ್ತಿದೆ. ಇದರಿಂದ ನಮ್ಮ ಮೈಸೂರಿನ ಹಿತಕ್ಕೆ ಪೂರಾ ಧಕ್ಕೆ ಬಂದಾಂತಾಗಿದೆ. ಈ ದಿವಸ ಕೇಂದ್ರ ಸರ್ಕಾರದವರು ಈ ತೀರ್ಮಾನವನ್ನು ಯಾವ ಆಧಾರದ ಮೇಲೆ ತೆಗೆದುಕೊಂಡರು ಅನ್ನುವುದನ್ನು ನೋಡುವುದಾದರೆ ಪ್ಯಾರಾ 16ರಲ್ಲಿ ಹೀಗೆ ಹೇಳಿದ್ದಾರೆ:—

"There is a clear case however for scarcity areas to be given a preference provided they are generally speaking within easy and economical reach of irrigation." ನನ್ನ ಅಭಿಪ್ರಾಯದಲ್ಲಿ ಇದು ಬಹಳ ಮುಖ್ಯವಾದ ವಿಷಯವೆಂದು ತಿಳಿದುಕೊಂಡಿದ್ದೇನೆ. ಆದರೆ ಅವರು ಈ ನದಿಗಳು ಹರಿಯತಕ್ಕ ಪ್ರದೇಶದಲ್ಲಿರತಕ್ಕ ಜನಸಂಖ್ಯೆ, ಕ್ಷಾಮಪೀಡಿತ ಪ್ರದೇಶಗಳು ಹೀಗೇ ನಾನಾ ವಿಚಾರಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆ. ಆದರೆ ಅವರ ಗಣನೆಯಲ್ಲಿ ಒಂದು ಬಹಳ ಕ್ಲಿಷ್ಟಕರವಾದ ಸಲಹೆಯೆಂದರೆ ಕಡಮೆ ಖರ್ಚಿನಲ್ಲಿ ಹೆಚ್ಚು ಅನುಕೂಲ ಬರುವಂಥ ಯೋಜನೆಗಳನ್ನು ಕೈಕೊಳ್ಳಬೇಕೆಂತ ಹೇಳಿದ್ದಾರೆ. ಈ ವಿಚಾರದಲ್ಲಿ ನಮ್ಮ ಮೈಸೂರು ರಾಜ್ಯದಮಟ್ಟಿಗೆ ಹೇಳುವುದಾದರೆ ಹೀಗೆ ಕಡಮೆ ಖರ್ಚಿನಲ್ಲಿ ಹೆಚ್ಚು ಆದಾಯ ತರತಕ್ಕ ಯೋಜನೆಗಳನ್ನೇ ಕೈಗೊಳ್ಳಿ ಎಂತ ಹೇಳುವುದಾದರೆ ನಾವು ನಮ್ಮ ರಾಜ್ಯದಲ್ಲಿ ಯಾವ ಪ್ರಾಜೆಕ್ಟ್‌ಗಳನ್ನೂ ಕಟ್ಟುವ ಹಾಗೇ ಇಲ್ಲ. ಈ ದಿವಸ ನಾವು ಕೈಗೊಳ್ಳಬೇಕೆಂದಿರುವ ನಮ್ಮ ಹಲವಾರು ಯೋಜನೆಗಳಲ್ಲಿ ಈ ದಿವಸ ಆ ಅಪ್ಪರ್ ಕೃಷ್ಣಾ ಯೋಜನೆಯೇ ಆಗಲೀ ಅಥವಾ ಬಿಜಾಪುರ ಲಿಫ್ಟ್ ಇರಿಗೇಷನ್ ಸ್ಕೀಂ ಈ ಯೋಜನೆಗಳಿಗೆಲ್ಲ ಖರ್ಚನ್ನು ಲೆಕ್ಕ ಹಾಕಿದರೆ ಎಕರೆಗೆ ಸಾವಿರ-ಸಾವಿರ ದೈನೂರು ಖರ್ಚು ಬೀಳುತ್ತದೆ. ಆದರೆ ಈ ದಿವಸ ಅವರ ಗಣನೆಯಲ್ಲಿ ಸ್ಕೇರ್ಸಿಟಿ ಏರಿಯಾ ಮುಖ್ಯವಾಗಿದ್ದಂತೆ ಕಾಣುವುದಿಲ್ಲ. ಕ್ಷಾಮಪೀಡಿತ ಪ್ರದೇಶದ ಜನರಿಗೆ ಅನುಕೂಲ ಕಲ್ಪಿಸಬೇಕೆಂಬುದೂ ಅವರಿಗೆ ಪ್ರಾಮುಖ್ಯವಾಗಿದ್ದಂತೆ ಕಾಣುತ್ತಿಲ್ಲ. ಅವರ ಒಂದೇ ದೃಷ್ಟಿ ಎಲ್ಲಿ ಕಮ್ಮಿ ಖರ್ಚಿನಲ್ಲಿ ಹೆಚ್ಚು ಅನುಕೂಲ ದೊರೆಯುತ್ತೆ ಅಲ್ಲಿ ಈ ಪ್ರಾಜೆಕ್ಟ್‌ಗಳು ಆಗಲೆಂಬುದಾಗಿ ಅವರ ಭಾವನೆ ಇದ್ದಂತೆ ಕಂಡುಬರುತ್ತಿದೆ. ಹೀಗೆ ಅವರಿಗೆ ಭಾವನೆಯಿರುವಾಗ ಮುಂದೆ ಅವರು ನಮಗೆ ಯಾವ ರೀತಿ ಅನುಕೂಲ ಮಾಡ್ಯಾರು ಎಂಬುದನ್ನು ನಾವು ತೀವ್ರವಾಗಿ ಗಮನಿಸಬೇಕಾಗಿದೆ. ಈ ವಿಚಾರವನ್ನು ನಾವೀಗ ಪ್ರಾಮುಖ್ಯವಾಗಿ ಕೇಂದ್ರ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಇದು ಅಷ್ಟು ಪ್ರಾಮುಖ್ಯವಾದ ವಿಷಯ ಅಂತ ನಾನು ತಿಳಿದುಕೊಂಡಿದ್ದೇನೆ. ಈಗಾಗಲೇ ನಮ್ಮ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಕಳೆದ ರಾಜ್ಯಪಾಲರ ಭಾಷಣದಲ್ಲಿ ನಮ್ಮ ರಾಜ್ಯ ಸರ್ಕಾರ 1952ನೇ ಇರಿಗೇಷನ್ ಆಕ್ಟ್ ಪ್ರಕಾರ ಒಂದು ಟ್ರೈಬ್ಯುನಲ್'ನ್ನು ಏರ್ಪಾಡು ಮಾಡಬೇಕು. ಎಂಬ ಇತ್ಯಾದಿ ವಿಚಾರಗಳನ್ನು ಹೇಳಿದ್ದಾರೆ. ಈ ವಿಚಾರವನ್ನು ಯಾವಾಗ ಒತ್ತಾಯ ಮಾಡುತ್ತೀರೆಂದು ಕೇಳಿದ್ದಕ್ಕೆ ಯಾವ ಕಾಲದಲ್ಲಿ ಇದನ್ನು ಒತ್ತಾಯ ಮಾಡುವುದು ಯೋಗ್ಯವೆಂದು ಕಂಡುಬರುತ್ತದೋ ಆ ಕಾಲಕ್ಕೆ ಈ ವಿಚಾರವನ್ನು ಒತ್ತಾಯ ಮಾಡುತ್ತೇವೆ ಎಂತ ಹೇಳಿದ್ದರು. ಆದರೆ ಈ ದಿವಸ ಆ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ತೀರ್ಮಾನದಿಂದ ನಮ್ಮ ರಾಜ್ಯದ ಹಿತಕ್ಕೆ ತುಂಬಾ ಧಕ್ಕೆ ಬಂದ ಹಾಗಾಗಿದೆ. ಬಹುಶಃ ಹಿಂದೆ ಕೇಂದ್ರ ಸರ್ಕಾರದವರು ಈ ವಿಚಾರದಲ್ಲಿ ಟೈಂ ಕೇಳಿದ್ದರೋ ಏನೋ. ಆದರೆ ಈಗ ಆ ಗುಲ್ಹಾಟಿ ಸಮಿತಿಯವರು ಅಂಕಿ ಅಂಶಗಳನ್ನೆಲ್ಲ ಶೇಖರಣೆ ಮಾಡಿಕೊಂಡು ಈ ನೀರಿನ ವಿಚಾರದಲ್ಲಿ ಒಂದು ವರದಿಯನ್ನು ಒಪ್ಪಿಸಿದ್ದಾರೆ. ಆದರೆ ಇಂಥ ಸಮಯದಲ್ಲಿ ನಾವು ಸುಮ್ಮನೆ ಕೈಕಟ್ಟಿ ಕುಳಿತರೆ ನಮ್ಮ ರಾಜ್ಯದ ಹಿತಸಾಧನೆಯನ್ನು ನಮ್ಮ ಸರ್ಕಾರ ಮಾಡಿದಂತಾಗುವುದಿಲ್ಲ. ಅನುಕೂಲ ಮಾಡುವುದಕ್ಕೆ ಪ್ರತಿಯಾಗಿ ಧಕ್ಕೆಯನ್ನು ತಂದ ಹಾಗೆ ಆಗುತ್ತದೆ, ಎಂಬುದಾಗಿ ನಮ್ಮ ಸರ್ಕಾರಕ್ಕೆ ನಾನು

(ಶ್ರೀ ಎಂ. ಸಿ. ಬಸಪ್ಪ)

ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ. ಈ ಕೂಡಲೆ ಈ ಟ್ರೈಬ್ಯುನಲ್ ರಚನೆಯಾಗಬೇಕಾದ್ದು ಅವಶ್ಯಕ. ಇದಕ್ಕೆ ಈ ದಿವಸ ಬೊಂಬಾಯಿ ಸರ್ಕಾರ, ಆಂಧ್ರ ಸರ್ಕಾರ ಒಪ್ಪಲಿ-ಒಪ್ಪದಿರಲಿ ನಾವು ಮಾತ್ರ ಒತ್ತಾಯ ಮಾಡಲೇಬೇಕಾಗಿದೆ. ಅದನ್ನು ಏರ್ಪಾಡು ಮಾಡದ ಹೊರತು ನಮಗೆ ನ್ಯಾಯ ದೊರೆಯುವುದಿಲ್ಲ. ನಮಗೆ ನ್ಯಾಯವಾಗಿ ಸಲ್ಲಬೇಕಾದ ನೀರು ನಮಗೆ ಸಿಕ್ಕುವುದಿಲ್ಲ. ಈ ದಿವಸ ನಾವು ಈ ಟ್ರೈಬ್ಯುನಲ್ಲನ್ನು ಮಾಡಲು ಒತ್ತಾಯಮಾಡದೆ ಹೋದರೆ ನಮಗೆಷ್ಟು ನೀರಿನ ಹಕ್ಕಿದೆ ಎಂಬುದೇ ಯಾರಿಗೂ ಗೊತ್ತಾಗುವುದಿಲ್ಲ. ಈ ದಿವಸ ಸಾಕಷ್ಟು ಗುಲ್ಹಾಟಿ ಸಮಿತಿಯವರು ಅಂಕೀ ಅಂಶಗಳನ್ನು ಶೇಖರಣೆ ಮಾಡಿದ್ದಾರೆ ಆ ಅಂಕೀ ಅಂಶಗಳ ಮೇಲೆ ಒಂದು ನ್ಯಾಯವಾದ ತೀರ್ಪನ್ನು ಕೊಡಲು ಒಂದು ಟ್ರೈಬ್ಯುನಲ್ ಮಾಡಲು ಈಗ ಒಂದು ಒಳ್ಳೇ ಅವಕಾಶವಿದೆ. ಈ ಬಗ್ಗೆ ನಮ್ಮ ಸರ್ಕಾರ ಕೇಂದ್ರಕ್ಕೆ ಒತ್ತಾಯ ಮಾಡಬೇಕೆಂದು ಹೇಳುತ್ತೇನೆ. ಇದು ಬಹಳ ಅಗತ್ಯವಾದ್ದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ನಿಮಗೆ ಬರಬೇಕಾದ್ದೆಷ್ಟು ?

ಶ್ರೀ ಎಂ. ಸಿ. ಬಸಪ್ಪ.—ಈಗಾಗಲೇ ಆ ವಿಚಾರವನ್ನು ಅನೇಕರು ಹೇಳಿದ್ದಾರೆ. ಅದು ಪುನರಾವರ್ತಿ ಆಗಬಾರದೆಂದು ನಾನು ಹೇಳಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ಕೇಂದ್ರ ಸರ್ಕಾರದವರು ಗೊತ್ತಿಲ್ಲದೆ ಹೀಗೆ ತೀರ್ಮಾನ ಮಾಡಿದ್ದಾರೆಂದು ಹೇಳಿದಿರಿ. ಅವರಿಗೆ ಗೊತ್ತಿಲ್ಲದೆ ಮಾಡಿಲ್ಲ—ಗೊತ್ತಿದ್ದೇ ಹೀಗೆ ಮಾಡಿದ್ದಾರೆಂಬುದು ತಮಗೆ ಗೊತ್ತಾಗಲಿಲ್ಲವೇನೋ ?

ಶ್ರೀ ಎಂ. ಸಿ. ಬಸಪ್ಪ. ನಾನು ಆ ರೀತಿ ಹೇಳಲಿಲ್ಲ. ಬಹುಶಃ ಮಾನ್ಯ ಸದಸ್ಯರಿಗೆ ನಾನು ಹೇಳಿದ್ದು ಸರಿಯಾಗಿ ಅರ್ಥವಾಗಲಿಲ್ಲವೆಂದು ಕಾಣುತ್ತಿದೆ. ನಾನು ಹೇಳಿದ್ದು ಈಗ ಕೇಂದ್ರ ಸರ್ಕಾರದವರ ತೀರ್ಮಾನದಿಂದ ನಮಗೆ ಬಹಳ ಅನ್ಯಾಯವಾಗಿದೆಯೆಂಬುದನ್ನು ತಿಳಿಸಿ ಕೂಡಲೆ ಟ್ರಿಬ್ಯುನಲ್ ರಚನೆ ಮಾಡುವಂತೆ ಅವರನ್ನು ಒತ್ತಾಯ ಮಾಡಿ ಎಂದು ಹೇಳಿದೆ.

ನಮ್ಮ ರಾಜ್ಯಕ್ಕೆ ಸ್ವಲ್ಪ ಬೇಕಾದ ನೀರಿನ ಪ್ರಮಾಣವನ್ನು ಕೂಡ ಒಬ್ಬ ಸದಸ್ಯರು ಕೇಳಿದರು. ಈಗಾಗಲೇ ಸುಮಾರು 600 T.M.C. ft. ಉಪಯೋಗಿಸಬಹುದೆಂದು ಅವರು ಹೇಳಿದ್ದಾರೆ. ನಾವು 1961ರಿಂದೀಚೆಗೆ ಪ್ರಾರಂಭ ಮಾಡಿರತಕ್ಕ ಕೆಲಸಗಳಿಗೆ ಸುಮಾರು 340 T.M.C. ft. ನೀರು ಬೇಕಾಗುತ್ತದೆ. ಮಲಪ್ರಭ, ತುಂಗಭದ್ರ, ಘಟಪ್ರಭ, stage II, upper Krishna stage I, medium projects ಎಲ್ಲದರಿಂದ 260 T.M.C. ft. ನೀರು ಬೇಕಾಗುತ್ತದೆ. Upper Krishna stage II, Bijapur lift irrigation, upper Tunga-bhadra, ಮತ್ತು remaining medium and minor irrigation projectsಗೆ ಸುಮಾರು 500 T.M.C. ft. ನೀರು ಬೇಕಾಗುತ್ತದೆ. ಒಟ್ಟು irrigation worksಗೆ 1,100 T.M.C. ft. ಬೇಕಾಗುತ್ತದೆ. Irrigation and drinking purposesಗೆ 100 + 50 T.M.C. ft. ನೀರು ಬೇಕಾಗುತ್ತದೆ. ಒಟ್ಟಿನಲ್ಲಿ ನಮ್ಮ ದೇಶಕ್ಕೆ 1,250 T.M.C. ft. ನೀರು ಬೇಕಾಗಿರುವುದು ನಿಜ. ಅದಕ್ಕೋಸ್ಕರವಾಗಿ ನಾವು ಹೊಡದಾಡುವುದಕ್ಕೆ ತಯಾರಾಗಿರಬೇಕು. ಇಷ್ಟು ನೀರನ್ನು ತೆಗೆದು ಕೊಳ್ಳದೆ ಇದ್ದ ಪಕ್ಷದಲ್ಲಿ ಮೈಸೂರು ಸಂಸ್ಥಾನಕ್ಕೆ ದೊಡ್ಡ ಅನ್ಯಾಯವಾಗುತ್ತದೆಂದು ಇಲ್ಲಿ ಹೇಳಿದರೆ ತಪ್ಪಾಗಲಾರದು. ಈ ದೃಷ್ಟಿಯಿಂದಲೇ ಆದಷ್ಟು ಬೇಗ ಒಂದು ಟ್ರಿಬ್ಯುನಲ್ ರಚನೆ ಮಾಡಬೇಕೆಂದು ಹೇಳುತ್ತಿದ್ದೇವೆ. ಈ ವಿಚಾರದಲ್ಲಿ ಬಹುಶಃ ಗುಲ್ಹಾಟಿ ಕಮಿಷನವರು ಒಂದು ವರ್ಷದಲ್ಲಿ ರಿಪೋರ್ಟ್ ಕೊಡುತ್ತೇವೆ ಎಂದು ಹೇಳಿದ್ದವರು ಒಂದೂವರೆ ವರ್ಷಕಾಲ ತೆಗೆದು ಕೊಂಡು ಇಂಥ ತೀರ್ಮಾನವನ್ನು ಕೊಟ್ಟಿದ್ದಾರೆ. ಅವರಾದರೂ ಹೇಳುತ್ತಾರೆ ನಮಗೆ ಸರಿಯಾದ guage ಇಲ್ಲ ಎಂದು. ಅವರಿಗೆ ಕೊಟ್ಟಿದ್ದ terms of reference ಬಹಳ ಚೆನ್ನಾಗಿದೆ. ಕೃಷ್ಣದಲ್ಲಿ ಎಷ್ಟು ನೀರು ಇದೆ. ವ್ಯವಸಾಯಕ್ಕೆ ಎಷ್ಟು ನೀರು ಬೇಕಾಗುತ್ತದೆ, ಗೋದಾವರಿಯಲ್ಲಿ ಎಷ್ಟು ನೀರಿದೆ ಅದರಿಂದ ವ್ಯವಸಾಯಕ್ಕೆ ಎಷ್ಟು ನೀರು ಬೇಕಾಗುತ್ತದೆ, ಗೋದಾವರಿಯಿಂದ ಕೃಷ್ಣ ಬೇಸಿನ್‌ಗೆ ಎಷ್ಟು ನೀರನ್ನು divert ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು terms of reference ನಲ್ಲಿ ಕೇಳಿದಾರೆ. ಗುಲ್ಹಾಟಿ ಕಮೀಷನವರು ಬಹಳ ಕಷ್ಟ ಪಟ್ಟಿದ್ದಾರೆ. Gauge ಇಲ್ಲ, ಎಷ್ಟು ನೀರು ಹರಿಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ, ಎಷ್ಟು ಸಾಧ್ಯವಾಗಿ ದೊರೆಯಿತೋ ಆ ಅಂಕಿ ಅಂಶಗಳ ಆಧಾರದ ಮೇಲೆ ಕೆಲವು ಶಿಫಾರಸುಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರದ ಮಂತ್ರಿಗಳು ಇವರ ರಿಪೋರ್ಟನ್ನು ಕೂಡ ಅಲ್ಲಗಳೆದಿದ್ದಾರೆ, ಕೈಬಿಟ್ಟಿದ್ದೀರೆಂದು ಹೇಳಿದರೂ ತಪ್ಪಾಗಲಾರದು.

63ನೆಯ ಪ್ಯಾರಾದಲ್ಲಿ ಒಂದು ಶಿಫಾರಸನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಏಕೆ ಹೇಳುತ್ತೇನೆ ಎಂದರೆ ಗೋದಾವರಿ ನೀರನ್ನು ಕೃಷ್ಣ ಬೇಸಿನ್‌ಗೆ divert ಮಾಡಿದರೆ ಅದರಿಂದ

ಮೈಸೂರಿಗೆ ಹೆಚ್ಚು ಅನುಕೂಲವಾಗುತ್ತದೆ. ಅದು ಯಾವ ರೀತಿ ಎಂದು ಪ್ರಶ್ನೆ ಮಾಡಬಹುದು. ಬಹುಶಃ ಶ್ರೀ ಶೈಲಂ ಪ್ರಾಜೆಕ್ಟಿಗೆ 284 T.M.C. ft. ನೀರು ಬೇಕು ಎಂದು ಏನು ಹೇಳಿದ್ದಾರೆ ಅದು ಕಡಿಮೆಯಾಗುತ್ತದೆ. ಯಾವಾಗ ಗೋದಾವರಿಯಿಂದ 306 T.M.C. ft. ನೀರನ್ನು ಶ್ರೀ ಶೈಲಂ ಪ್ರಾಜೆಕ್ಟಿಗೆ ತೆಗೆದುಕೊಳ್ಳುತ್ತಾರೆಯೋ ಆವಾಗ ಕೃಷ್ಣದಿಂದ ಬರತಕ್ಕ ನೀರನ್ನು ಅಷ್ಟು ಮಟ್ಟಿಗೆ ಕಡಮೆಮಾಡಬಹುದು. ಮತ್ತು ಆ ನೀರನ್ನು ಮೈಸೂರು ರಾಜ್ಯಕ್ಕೆ ನೀವು ಉಪಯೋಗಿಸಿ ಕೊಳ್ಳಿ, ಇದು ನಿಮ್ಮ ಉಪಯೋಗಕ್ಕಾಗಿ ಇದೆ ಎಂದು ಹೇಳಬೇಕು. ಆವಾಗ ನಮ್ಮ ಬೇಡಿಕೆ ಗಳನ್ನು ಪಟ್ಟಿಮಾಡಿ ಮೈಸೂರು ರಾಜ್ಯಕ್ಕೆ ಆಂಧ್ರದಿಂದ ಕೊಡಬೇಕಾದ ನೀರಿನ ಪ್ರಮಾಣವನ್ನು ಕೊಡಿ ಎಂದು ಕೇಳಬಹುದು. ಈ ನೀರು ನಮಗೆ ಬಂದರೆ ನಮ್ಮ ರಾಜ್ಯದಲ್ಲಿ ಅನೇಕ ಕಾಮಗಾರಿ ಗಳಿಗೆ ಉಪಯೋಗಿಸುವುದಕ್ಕೆ ಅವಕಾಶವಾಗುತ್ತದೆ. ಆದರೆ ಈಗ 800 T.M.C. ft. ನೀರನ್ನು ಉಪಯೋಗಿಸಿಕೊಳ್ಳಿ ಎಂದು ಆಂಧ್ರ ಪ್ರಾಂತಕ್ಕೆ ಕೇಂದ್ರದ ನೀರಾವರಿ ಮಂತ್ರಿಗಳು ಹೇಳಿರುವುದ ರಿಂದ ಈ ಶಿಫಾರಸುಗಳೆಲ್ಲ ಉಪಯೋಗವಿಲ್ಲದ ವಾಗುತ್ತವೆಂದು ನನಗನ್ನಿಸುತ್ತದೆ. ಒಂದು ಪಕ್ಷ ಅವರ ಸಿಫಾರಸುಗಳನ್ನು ನೋಡಿಕೊಂಡೇ ಮಾಡಿದ್ದೇವೆಂದು ಹೇಳುವುದಾದರೂ ಇದುವರೆಗೂ ಶ್ರೀ ಶೈಲಂ ಪ್ರಾಜೆಕ್ಟ್, ನಾಗಾರ್ಜುನಸಾಗರ first stage ಇವನ್ನು approve ಮಾಡಿದ್ದು, ಗೋದಾವರಿಯಿಂದ 306 T.M.C. ft. ನೀರು ತೆಗೆದುಕೊಳ್ಳುವುದನ್ನು ಯೋಚನೆ ಮಾಡಬಹುದು ಎಂದರೆ, ಅದರಿಂದ ಮೈಸೂರು ದೇಶಕ್ಕೆ ಆಗತಕ್ಕದ್ದೇನು ಎನ್ನುವುದು ಮುಖ್ಯವಾದ ಪ್ರಶ್ನೆ, ಆಂಧ್ರ ಪ್ರಾಂತದಲ್ಲಿ ಇನ್ನೂ ಅನೇಕ ಪ್ರಾಜೆಕ್ಟ್‌ಗಳನ್ನು ಕಟ್ಟಬೇಕೆಂದು ಯೋಚನೆ ಮಾಡಿಕೊಂಡಿದ್ದಾರೆ. ಅದು ಆಂಧ್ರ ಸರ್ಕಾರಕ್ಕೆ ಅನುಕೂಲವಾಗಬಹುದೇ ವಿನಾ ನಮಗೆ ಪ್ರಯೋಜನವಾಗುವುದಿಲ್ಲ. ಅವರು ಶ್ರೀ ಶೈಲಂ ಪ್ರಾಜೆಕ್ಟ್ ಕಟ್ಟಿ ನಾಗಾರ್ಜುನಸಾಗರ first stage ಕಟ್ಟಿ, ಗೋದಾವರಿ ನೀರನ್ನು ತೆಗೆದುಕೊಳ್ಳುವ ಪ್ರಶ್ನೆಯನ್ನು ಆಲೋಚನೆ ಮಾಡುತ್ತಿದ್ದಾರೆಂದು ಕೇಂದ್ರ ಸರ್ಕಾರ ದವರು ಹೇಳುವುದರಿಂದ ಮೈಸೂರು ರಾಜ್ಯಕ್ಕೆ ಯಾವ ಅನುಕೂಲವೂ ನಹ ಆಗುವುದಿಲ್ಲ. ಗೋದಾವರಿ ನೀರನ್ನು ಕೃಷ್ಣ ಬೇಸಿನ್‌ಗೆ ತಂದು, ಅದರಲ್ಲಿ ಉಳಿಯುವ ನೀರನ್ನು ನಮಗೆ ಕೊಟ್ಟು ಮೈಸೂರಿಗೆ ಅನುಕೂಲವನ್ನು ಹೆಚ್ಚು ಮಾಡಬೇಕೆಂಬ ದೃಷ್ಟಿಯಿದ್ದ ಪಕ್ಷ ಕೇಂದ್ರ ಸರ್ಕಾರದವರಿಗೆ ರಾಜ್ಯ ಸರ್ಕಾರ ಒಂದು ಅರಿಕೆಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಆಂಧ್ರಕ್ಕೆ ಈಗ ಕೊಟ್ಟಿರತಕ್ಕ 800 T.M.C. ft. ನೀರು ಏನಿದೆ ಇದು ಸರಿಯಿಲ್ಲ, ಗೋದಾವರಿಯಿಂದ ಕೃಷ್ಣ ಪಾತ್ರಕ್ಕೆ ತೆಗೆದು ಕೊಳ್ಳಬಹುದಾದ 306 T.M.C. ft. ನೀರನ್ನು 800 T.M.C. ft. ಸೇರಿಸಿಕೊಳ್ಳಬೇಕು ಮತ್ತು ಗೋದಾವರಿಯಿಂದ ಬರುವಷ್ಟು ನೀರಿನ ಪ್ರಮಾಣವನ್ನು ಕಡಮೆ ನೀರಾವರಿ ಪ್ರದೇಶವಿರುವ ಮೈಸೂರಿನಲ್ಲಿ ಉಪಯೋಗಿಸುವುದಕ್ಕೆ ಅವಕಾಶ ಕೊಡಬೇಕು ಮತ್ತು ನಾವು ತೆಗೆದುಕೊಂಡ ಪ್ರಾಜೆಕ್ಟ್‌ಗಳು ಮತ್ತು ಕಾಮಗಾರಿಗಳಿಗೆ ಸಾಕಾದಷ್ಟು ಹಣ ಸಹಾಯವನ್ನು ಕೇಂದ್ರ ಸರ್ಕಾರವು ಮಾಡತಕ್ಕ ಮನೋಭಾವವನ್ನು ತಾಳಬೇಕು. ಆ ರೀತಿ ಮಾಡುವುದರಿಂದ ನಮಗೆ ನ್ಯಾಯವಾಗಿ ದೊರಕಬೇಕಾದ ಹಕ್ಕು ಏನಿದೆ ಅದನ್ನು ದೊರಕಿಸಿಕೊಟ್ಟ ಹಾಗೆ ಆಗುತ್ತದೆ ಮತ್ತು ಇದರಿಂದ ನಮ್ಮ ರಾಜ್ಯಕ್ಕೂ ದೊರದಂತಾಗುತ್ತದೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಮೈಸೂರು ಸರ್ಕಾರ ದವರು ನಿಜವಾಗಿಯೂ ಕೂಡ ಕೇಂದ್ರಕ್ಕೆ ಅರಿವಾಗುವ ರೀತಿಯಲ್ಲಿ ಅವರು ಕೊಟ್ಟಿರತಕ್ಕ ತೀರ್ಮಾನ ಸರಿಯಾದುದಲ್ಲ ಅದನ್ನು ಪುನರ್ಪರಿಶೀಲನೆ ಮಾಡಬೇಕು ಎಂದು ತಿಳಿಸಿ ಸರಿಯಾದ ರೀತಿಯಲ್ಲಿ ಮೈಸೂರು ರಾಜ್ಯಕ್ಕೆ ಹೆಚ್ಚು ಅನುಕೂಲವಾಗುವ ಅವಕಾಶವನ್ನು ಕಲ್ಪಿಸಿ ಕೊಡಬೇಕಾಗುತ್ತದೆ. ಅನುಕೂಲವೆಂದು ಹೇಳದೆ ಇದ್ದರೂ ಕೂಡ ಅವರಿಗೆ ಇರತಕ್ಕ ಹಕ್ಕನ್ನು ಅವರಿಗೆ ಉಳಿಸಿಕೊಡ ಬೇಕು ಎಂದು ಕೇಂದ್ರ ಸರ್ಕಾರದವರು ಈಗ ಕೊಟ್ಟಿರತಕ್ಕ ತೀರ್ಮಾನವನ್ನು ಬದಲಾವಣೆ ಮಾಡಿ ಆಂಧ್ರಕ್ಕೆ 800 T.M.C. ft. ಏನು ಕೊಟ್ಟಿದ್ದಾರೆ. ಅದನ್ನು ಕೃಷ್ಣ ಬೇಸಿನ್‌ನಿಂದಲೇ ಎಂದು ತೆಗೆದುಕೊಳ್ಳದೆ, ಗೋದಾವರಿಯಿಂದ ತೆಗೆದುಕೊಳ್ಳತಕ್ಕ ನೀರೂ ಸೇರಿ ಪರಿಗಣಿಸಬೇಕು ಎಂದು ಸಲಹೆ ಮಾಡಿರತಕ್ಕ ಗುಲ್ಹಾಟಿ ಕಮಿಷನ್ ವರದಿಯ ಪ್ರಕಾರ ಗೋದಾವರಿಯಿಂದ ತೆಗೆದುಕೊಳ್ಳ ಬಹುದಾದ 306 T.M.C. ft. ಸೇರಿ 800 T.M.C. ft. ಎಂದು ಕೇಂದ್ರ ಸರ್ಕಾರದವರು ಆದಷ್ಟು ಬೇಗ ತೀರ್ಮಾನ ಮಾಡಿ ಕಳಿಸಿಕೊಡುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

ಈ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ನಮ್ಮ ಸರ್ಕಾರದವರೂ ಸ್ವಲ್ಪ ನಿಧಾನ ಮಾಡಿದ್ದಾರೆಂದು ಅಲ್ಲಲ್ಲ ಜನ ಹೇಳಿಕೊಳ್ಳುತ್ತಾರೆ. ಇದರಲ್ಲಿ ಒಂದು ವಿಚಾರವನ್ನು ಘಂಟಾ ಘೋಷವಾಗಿ ಹೇಳಬೇಕಾಗಿದೆ. ಗುಲ್ಹಾಟಿ ಕಮಿಷನ್ ನೇಮಕವಾದಾಗ ಕೇಂದ್ರ ಸರ್ಕಾರ ಎಲ್ಲ ರಾಜ್ಯ ಸರ್ಕಾರಗಳಿಗೂ ಆದೇಶವನ್ನು ಕೊಟ್ಟಿತ್ತು. ಈಗಾಗಲೇ ಮಂಜೂರಾಗಿರತಕ್ಕ ಪ್ರಾಜೆಕ್ಟ್ ಗಳೇನಿವೆ ಅವುಗಳನ್ನು ಬಿಟ್ಟು ಹೊರಗೆ ಹೋಗಕೂಡದು, ನಾವು ಒಂದು ತೀರ್ಮಾನ ಕೊಡುವ ತನಕ ಬೇರೆ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡಕೂಡದು ಎಂದು ಆದೇಶವನ್ನು ಕೊಟ್ಟಿದ್ದರೂ, ಇವೊತ್ತಿನ ದಿವಸ ಮಹಾರಾಷ್ಟ್ರ ಹಾಗೂ ಮೈಸೂರು ಸರ್ಕಾರಗಳು ಕೇಂದ್ರ ಸರ್ಕಾರ ಏನು ಹೇಳಿತ್ತೋ

(ಶ್ರೀ ಎಂ. ಪಿ. ಬಸಪ್ಪ)

ಅದಕ್ಕೆ ಬದ್ಧರಾದರು, ಆದರೆ ಆಂಧ್ರ ಸರ್ಕಾರ ಏನು ಮಾಡಿತೆಂದರೆ, ನೀವು clearance ಕೊಡಿರಿ. ಬಿಡಿರಿ, ನಾವು ಏನಾದರೂ ಮಾಡಿ ಶ್ರೀ ಶೈಲಂ ಪ್ರಾಜೆಕ್ಟ್ ಕಟ್ಟುತ್ತೇವೆ. ಇನ್ನೊಂದನ್ನು ಕಟ್ಟುತ್ತೇವೆ, ಕೇಂದ್ರ ಸರ್ಕಾರದವರು ಏನೇ ಮಾಡಲಿ, ಮೈಸೂರು ಸರ್ಕಾರದವರು ಏನೇ ಮಾಡಲಿ, ನಾವು ಏನು ಪ್ಲಾನ್ ಮಾಡಿದ್ದೇವೆ ಅದರಂತೆ ಕಟ್ಟುತ್ತೇವೆ, ನಾಗಾರ್ಜುನಸಾಗರ first stage ಕಟ್ಟುತ್ತೇವೆಂದು ಕೆಲಸ ಮಾಡಿದರು. ಈ ಮನೋಭಾವವನ್ನು ಕೇಂದ್ರ ಸರ್ಕಾರದವರು ಯೋಚನೆ ಮಾಡಬೇಕು, 800 T.M.C. ft. ನೀರನ್ನು ಆಂಧ್ರಕ್ಕೆ ಕೊಡುವಾಗಲೇ, ಕೇಂದ್ರ ಸರ್ಕಾರದ ಆದೇಶವನ್ನು ಉಲ್ಲಂಘನೆಮಾಡಿ ಪ್ರಾಜೆಕ್ಟ್‌ಗಳನ್ನು ಕಟ್ಟತಕ್ಕದ್ದು ಯೋಗ್ಯವಾದುದಲ್ಲ, ಈ ತರಹ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೀರಿ, ಆ ಕೆಲಸವನ್ನು ಮಾಡಬಾರದಾಗಿತ್ತು ಎಂದು ಹೇಳುವುದರ ಬದಲು ನೀವು ಪ್ರಾರಂಭವಾಡಿರುವುದನ್ನು ಮುಗಿಸಿಕೊಳ್ಳಿ ಎಂದು green signal ಕೊಟ್ಟಿದ್ದಾರೆ. ಬಹುಶಃ ಇದು ಕೇಂದ್ರ ಸರ್ಕಾರದ ಯೋಗ್ಯವಾದ ತೀರ್ಮಾನವಲ್ಲವೆಂದನ್ನಿಸುತ್ತದೆ. ಇದರಿಂದ ಏನಾಗುತ್ತದೆಂದರೆ ಇತರೇ ಪ್ರಾಂತ್ಯಗಳಿಗೂ ಕೂಡ ನೀವೂ ಸ್ವಲ್ಪ ಉಚಾಯಿಸಿ ನಿಮ್ಮಲ್ಲಿ ಪ್ರಾಜೆಕ್ಟ್‌ಗಳನ್ನು ಮಾಡಿದ್ದರೆ ಅದನ್ನು ratify ಮಾಡುತ್ತಿದ್ದೇವು ಎಂದು ದಾರಿ ತೋರಿಸಿಕೊಟ್ಟಂತಾಗಿದೆ ಎಂದು ನನಗನ್ನಿಸುತ್ತದೆ. ಆದುದರಿಂದ ಕೇಂದ್ರ ಸರ್ಕಾರ ತನ್ನ ತೀರ್ಮಾನವನ್ನು ಪುನರ್ವಿಮರ್ಶೆ ಮಾಡಿ, ನಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿ, ನಮಗೆ ಕೊಟ್ಟಿರುವ ತೀರ್ಮಾನ ನ್ಯಾಯವಾಗಿಲ್ಲದೇ ಇರುವುದರಿಂದ ಅದನ್ನು ಸರಿಪಡಿಸುವ ರೀತಿಯಲ್ಲಿ ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರಬೇಕೆಂದು ಅರಿಕೆ ಮಾಡಿಕೊಂಡು ನನಗೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—The House will now adjourn to meet half an hour later.

The House adjourned for recess at Three of the Clock and reassembled at Thirty Minutes past Three of the Clock.

[MR. DEPUTY SPEAKER in the Chair].

†ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಈಗ್ಗೆ ಮೂರು ದಿವಸಗಳಿಂದಲೂ ನಾವು ಈ ಸಭೆಯಲ್ಲಿ ಒಂದೇ ಅಭಿಪ್ರಾಯದಿಂದ ಕೇಳುತ್ತಾ ಇರತಕ್ಕ ನದಿ ನೀರಿನ ಪ್ರಶ್ನೆ. ನಮ್ಮ ಮೈಸೂರಿನ ಮಟ್ಟಿಗೆ ಈಗ ಕೇಂದ್ರ ಸರಕಾರದವರು ಕೊಟ್ಟಿರತಕ್ಕ ಒಂದು ತೀರ್ಮಾನ ಎಂದು ಹೇಳದೇ ಹೋದರೂ ಅವರೇನು ಹೇಳಿದ್ದಾರೋ ಅದರಿಂದ ಬಹಳ ಅನ್ಯಾಯವಾಗುತ್ತದೆ, ಮತ್ತು ಇದನ್ನು ಈ ಮಟ್ಟದಲ್ಲಿಯೇ ಪರಿಷ್ಕಾರಮಾಡಿ ಸರಿಮಾಡಿಕೊಳ್ಳದೇ ಹೋದರೆ ನಾಳೆ ನಮ್ಮ ದೇಶಕ್ಕೆ ಬಹಳ ತೊಂದರೆ ಅನುಭವಿಸಬೇಕಾಗುವಂತಹ ಪರಿಸ್ಥಿತಿ ಬರುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

1951ನೇ ಇಸವಿಗಿಂತ ಹಿಂದೆ ಈ ನದೀ ನೀರಿನ ಹಂಚಿಕೆಯ ವಿಚಾರದಲ್ಲಿ ತಪ್ಪುಗಳು ನಡೆದಿದ್ದರೂ ಕೂಡ ನಿನ್ನೆಯಿಂದ ಈ ಸಭೆಯಲ್ಲಿ ಮಾತನಾಡಿದಂತಹ ನನ್ನ ಮಿತ್ರರನೇಕರು ಒಂದೇ ದೃಷ್ಟಿಯಿಂದ ಇಲ್ಲಿ ಮಾತನಾಡಿದ ಹಾಗೆ ನನಗೆ ತೋರುತ್ತದೆ. ಇದರಲ್ಲಿ ಅಧಿಕಾರಿಗಳು ಮತ್ತು ಅಧಿಕಾರೇತರರು ಇಬ್ಬರೂ ಇದ್ದಾರೆ. ನಮ್ಮಲ್ಲಿ ಬಹಳ ಮೇಧಾವಿಗಳಾದ ಇಂಜನಿಯರುಗಳ ಕೊರತೆ ಎಳ್ಳಷ್ಟು ಇಲ್ಲ. ಹಾಗಿದ್ದರೂ ಕೂಡ ನ್ಯಾಯವಾದ ಜನ ಪ್ರತಿನಿಧಿಗಳಿಗೆ ನಮ್ಮ ಇಂಜನಿಯರುಗಳು ಈ ವಿಚಾರದಲ್ಲಿ ಎಚ್ಚರಿಕೆಯ ಸಲಹೆಗಳನ್ನೂ ಕೊಡಲಿಲ್ಲವೋ ನನಗೆ ಅರ್ಥವಾಗುತ್ತಿಲ್ಲ. 1956ನೇ ಇಸವಿಗೆ ಮೊದಲು ಈ ದೇಶ ಬೇರೆ ಬೇರೆ ಭಾಗಗಳಿಗೆಸೇರಿತ್ತು. ಈಗ ಬೊಂಬಾಯಿ ಪ್ರಾಂತದಿಂದ ಬಂದಿರತಕ್ಕ ಪ್ರದೇಶಕ್ಕೆ ಆಗಿನ ಮಹಾರಾಷ್ಟ್ರ ಸರಕಾರವಾಗಲೀ, ಹೈದರಾಬಾದು ಭಾಗದಿಂದ ಬಂದಿರತಕ್ಕ ನಮ್ಮ ಕನ್ನಡ ಭಾಗಗಳಿಗೆ ಆಗಿನ ಹೈದರಾಬಾದು ಸರಕಾರವಾಗಲೀ, ಇದರಬಗ್ಗೆ ಯಾವ ಏರ್ಪಾಡನ್ನೂ ಮಾಡಿದಂತೆ ನಮಗೆ ಕಾಣಬರುವುದಿಲ್ಲ. ಅವರೂ ಪೂರ್ಣವಾಗಿ ಕನ್ನಡ ಜನವನ್ನೂ ಕೈಬಿಟ್ಟಿದ್ದಾರೆಂದು ಹೇಳಲು ನನಗೆ ಬಹಳ ವ್ಯಸನವಾಗುತ್ತದೆ. 1959 ರಿಂದ ಇಲ್ಲಿಯ ವರೆಗೂ ನಮ್ಮ ಸರಕಾರ ಏನು ಮಾಡುತ್ತಿತ್ತು ಎಂದರೆ

ಅದೂ ಕೂಡ ಬಹಳ ಅಲಕ್ಷ ಮಾಡಿದೆ. ಈ ವಿಚಾರದಲ್ಲಿ ಏನು ಗಮನ ತೆಗೆದುಕೊಳ್ಳಬೇಕೋ ಅಷ್ಟು ಮಟ್ಟಿನ ಮುತುವರ್ಜಿ ವಹಿಸಲಿಲ್ಲ ಎಂಬುಹೇಳತಕ್ಕದ್ದು ಸ್ಪಷ್ಟವಾಗಿದೆ, ಎರಡನೇ ಪಂಚ ವಾರ್ಷಿಕ ಯೋಜನೆ ಹಾಕಿ ಕೊಂಡನಂತರ ರಾಜ್ಯ ಪುನರ್ವಿಂಗಡನೆಯಾಯಿತು. ನಮ್ಮ ಸರಕಾರ ಆ ವೇಳೆಯಲ್ಲಿ ಎಚ್ಚತ್ತುಕೊಳ್ಳಬೇಕಾಗಿತ್ತು. ಅಣ್ಣಾರಾಯರು ಶರಣಪ್ಪನವರು ಕೃಷ್ಣಾ ಅವರು ಮಾತನಾಡುವಾಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ವಲ್ಪ ಮುಖ ಗಂಟುಹಾಕಿಕೊಂಡಿದ್ದನ್ನು ನಾನು ನೋಡಿದೆ. ಅಪ್ರಿಯವಾದ ಮಾತನ್ನು ಕೇಳಬೇಕಾದ ಸಂದರ್ಭ ಬಂದರೆ ಅದಕ್ಕೆ ಬೇಜಾರು ಪಟ್ಟುಕೊಂಡರೆ ಈ ಸಮಸ್ಯೆ ಬಗೆ ಹರಿಯುವುದಿಲ್ಲ. ನಮಗೆ ಅನ್ಯಾಯವಾಗಿದೆ ಅದನ್ನು ಸರಿಮಾಡತಕ್ಕಂಥ ಕಾಲ ಇವತ್ತು ಸನ್ನಿಹಿತವಾಗಿದೆ. ಹೆಚ್ಚು ಗಲಾಟೆ ಮಾಡಿದರೆ ತಮ್ಮ ಕೆಲಸ ಸುಲಲಿತವಾಗುತ್ತದೆಂದು ಆಂಧ್ರ ಸ್ನೇಹಿತರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಈಗಿನ ಕಾಲದಲ್ಲಿ ಒಳ್ಳೆಯತನಕ್ಕೆ ಕಾಲವಿಲ್ಲ. ನಮ್ಮ ಹಕ್ಕುಬಾಧ್ಯತೆ ಸ್ಥಾಪನೆ ಮಾಡಲು ಏನೇ ಕಷ್ಟ ವಾಗಲಿ, ತೊಂದರೆ ಬರಲಿ ಅದನ್ನು ಕಡ್ಡಾಯವಾಗಿ ಹೇಳಬೇಕು. ಇಲ್ಲದಿದ್ದರೆ ನಮಗೆ ನ್ಯಾಯ ದೊರಕು ವುದಿಲ್ಲ, ಗುಲ್ಹಾಟಿ ಸಮಿತಿಯವರು ಕಷ್ಟಪಟ್ಟು ಅಂಕಿ ಅಂಶ ಗಳನ್ನು ಒದಗಿಸಿಕೊಟ್ಟಿದ್ದಾರೆ. ಪದೇ ಪದೇ ಕ್ಷಾಮ ಬರತಕ್ಕಂಥ ಪ್ರದೇಶ ಮೈಸೂರು ರಾಜ್ಯದಲ್ಲಿದೆ ಎಂದು ಹೇಳಿದ್ದಾರೆ. 19 ತಾಲ್ಲೂಕುಗಳು ಅಭಾವ ಪ್ರದೇಶ ಬಹಳ ಕಷ್ಟಕ್ಕೊಳಗಾದ ಪ್ರದೇಶ ಎಂದು ಕಮಿಟಿಯವರು ಹೇಳುತ್ತಾರೆ. ಕ್ಯಾಚ್‌ಮೆಂಟ್ ಏರಿಯಾ ಕೂಡ ಬಹಳ ವಿಸ್ತೀರ್ಣವಾಗಿದೆ. ಆದರೂ ಕೂಡ 600 T.M.C. ನೀರು ಕೊಡುತ್ತೇವೆಂದು ಹೇಳುತ್ತಾರೆ. ಅಷ್ಟು ನೀರು ನಮಗೆ ಸಾಕಾಗುವುದಿಲ್ಲ. ನ್ಯಾಯವಾಗಿ ಬರಬೇಕಾದುದರಲ್ಲಿ ಕನಿಷ್ಟ 900 T.M.C. ನೀರು ನಮಗೆ ಬಂದೇ ಬರಬೇಕು, 1,200 T.M.C. ನೀರು ಬಂದರೂ ಕೂಡ ಅಷ್ಟು ಏನೇನೂ ಸಾಕಾಗುವುದಿಲ್ಲ ಎಂದು ಹೇಳಲು ಇಷ್ಟಪಡುತ್ತೇನೆ. ಹೊಸ ರಾಜ್ಯ ರಚನೆಯಾದ ನಂತರ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಅನೇಕ ಯೋಜನೆಯ ಕೆಲಸವನ್ನು ಸೇರಿಸಿಕೊಳ್ಳಲು ಏಕೆ ಏರ್ಪಾಡು ಮಾಡಲಿಲ್ಲ ? ನಾನು ಒಂದು ವರ್ತಮಾನ ಕೇಳಿದ್ದೇನೆ. ನಮ್ಮ ಎಂಜಿನಿಯರುಗಳು ಎಗ್ಸಿಕ್ಯುಟಿವ್ ಕೆಲಸಕ್ಕೆ ಬೇಕಾದರೆಹೋಗುವುದಕ್ಕೆ ತಯಾರಾಗಿದ್ದಾರೆ. ಆದರೆ ಇನ್‌ವೆಸ್ಟಿಗೇಷನ್ ಮಾಡಲು ಅವರು ಇಷ್ಟಪಡುವುದಿಲ್ಲ ಎಂದು ಕೇಳಿದ್ದೇನೆ. ಈ ರೀತಿ ಪರಿಸ್ಥಿತಿಯಿದ್ದರೆ ಅದು ಶೋಚನೀಯವಾದುದು. ದೇಶದ ಉತ್ಪತ್ತಿಯಲ್ಲಿ ಅರ್ಧದಷ್ಟು ಹಣವನ್ನು ಖರ್ಚುಮಾಡತಕ್ಕ ಈ ಇಲಾಖೆಯನ್ನು ಇಟ್ಟುಕೊಳ್ಳುವುದು ಸರಿಯಲ್ಲ ಎಂದು ನನಗೆ ಅನಿಸುತ್ತದೆ. ನಾಲ್ಕು ಜನ ಚೀಫ್ ಎಂಜಿನಿಯರ್ಸ್ ಇದ್ದಾರೆ, ಅವರು ಏನು ಕೆಲಸ ಮಾಡುತ್ತಾರೆ ಎಂದು ಕೇಳಬೇಕಾದ ಪರಿಸ್ಥಿತಿ ಬಂದಿದೆ. ಜನರ ಕಷ್ಟ ಪರಿಹಾರ ಮಾಡತಕ್ಕಂಥ ವಿಪತ್ಕಾಲದಲ್ಲಿ ದೇಶಪ್ರೇಮದಿಂದ ಕಷ್ಟಪಟ್ಟು ಕೆಲಸ ಮಾಡದೇ ಹೋದರೆ ನಮ್ಮ ದೇಶತೊಂದರೆ ಅನುಭವಿಸಬೇಕಾಗುತ್ತದೆ ಎಂದು ಹೇಳುತ್ತೇನೆ. ಈಗ ಕೇಂದ್ರ ಮಂತ್ರಿಗಳು ಹೇಳಿಕೆಕೊಟ್ಟಿರುವುದು ಖಾಜಿ ನ್ಯಾಯದಂತೆ ಆಗಿರುವುದರಿಂದ ಯಾರನ್ನೂ ತೃಪ್ತಿಪಡಿಸಲು ಆಗುವು ದಿಲ್ಲ. ಹಿಂದಿನಮಂತ್ರಿಮಂಡಲದಲ್ಲಿದ್ದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಈ ವಿಚಾರದಲ್ಲಿ ಬಹಳ ಆಸಕ್ತಿ ವಹಿಸಿ ತೊಂದರೆಪಟ್ಟು ಹೋರಾಡಿದ್ದಾರೆ. ಅವರ ಈ ಹೋರಾಟವನ್ನು ನಾವು ಈಗ ಮುಂದುವರಿಸಬೇಕಾಗಿದೆ. ಅದರಲ್ಲಿಯೂ ಈ ಇಲಾಖೆಯ ಮಂತ್ರಿಗಳಾದ ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಇನ್ನೂ ಯುವಕರು, ಹೋರಾಡುವುದಕ್ಕೆ ಶಕ್ತಿ ಸಾಮರ್ಥ್ಯ ಅವರಿಗಿದೆ ಎಂದು ನನಗೆ ಭಾಸವಾಗುತ್ತದೆ. ಈ ಸಮಯದಲ್ಲಿ ಅವರು ನಮ್ಮ ಕೈ ಬಿಡಬಾರದು. ಶ್ರೀ ಮಾನ್ ನಿಜಲಿಂಗಪ್ಪನವರ ವಿಚಾರ ಬೇರೆ, ಅವರಿಗೆ 60ವರ್ಷ ವಯಸ್ಸು ಆಯಿತು; ಅವರಲ್ಲಿ ಧರ್ಮ ಬುದ್ಧಿ ಬಹಳ ಇದೆ. ಆದರೆ ಧರ್ಮ ಬುದ್ಧಿ ಎಳ್ಳಷ್ಟು ಪ್ರಯೋಜನವಾಗುವುದಿಲ್ಲ. ನಮಗೆ ಒಂದುಸಮಯ ದೊರಕದೆ ಹೋದರೆ ಬಹಳಕಷ್ಟ ಬರುತ್ತದೆ. ನ್ಯಾಯವಾಗಿ ದೊರಕಬೇಕಾಗಿರುವುದನ್ನು ಕೇಳುವುದರಲ್ಲಿ ತಪ್ಪೇನಿಲ್ಲ. ಇಂಥ ಸಮಸ್ಯೆ ಬಂದಾಗ್ಗೆ ಮೀನ ಮೇಷ ಮಾಡುವುದು ಸರಿಯಲ್ಲ. ನೋಡೋಣ ಮುಂದೆ ಮಾಡೋಣ ಎಂಬುದನ್ನು ಬಿಟ್ಟುಕೊಟ್ಟು ಇವತ್ತು ನ್ಯಾಯವಾದ ಮಾರ್ಗ ಅನುಸರಿಸುವುದು ಸೂಕ್ತ ಎಂದು ನನಗೆ ಅನಿಸುತ್ತದೆ.

ಮತ್ತೆ ಇನ್ನೊಂದು ಮಾತು ಹೇಳಬೇಕಾಗಿದೆ. ನಮ್ಮ ಹತ್ತಿರ ಹಣವಿಲ್ಲ. ಕೆಲಸಕಾರ್ಯ ಗಳನ್ನು ಹೇಗೆ ತೆಗೆದುಕೊಳ್ಳುವುದು ! ಎಂದು ಹೇಳುವುದು ಸರಿಯಲ್ಲ. ಒಂದು ಯೋಜನೆ ಗೊತ್ತು ಮಾಡಿ ಕೆಲಸತೆಗೆದುಕೊಂಡ ಮೇಲೆ ಹಣವನ್ನು ಯಾವರೀತಿಯಿಂದಲಾದರೂ ಸಲ್ಲಿಸಬೇಕು. ಅನೇಕ ಕಡೆ ರೈತರು ಮುಂದೆ ಬಂದು ಕೆರೆಕಟ್ಟುವುದಕ್ಕೆ ಹಣಕೊಟ್ಟಿದ್ದಾರೆ. ಅದೇ ರೀತಿಯಾಗಿ ವಿಜಾಪುರ, ರಾಯಚೂರ, ಗುಲ್ಬರ್ಗ. ಪ್ರದೇಶದಲ್ಲಿಯ ಜನರಿಗೆ ಮನವಿ ಮಾಡಿಕೊಳ್ಳೋಣ. ನಾಳೆ ಕೊಡತ ಕ್ಕಂಥ ಕಾಂಟ್ರಿಬ್ಯೂಷನ್ ಹಣವನ್ನು ದೇಶದ ಹಿತದೃಷ್ಟಿಯಿಂದ ಕಂತಿನ ರೂಪದಲ್ಲಿ ಮೊದಲೇಕೊಡತ ಕ್ಕಂಥ ಏರ್ಪಾಡು ಮಾಡುವುದು ಸೂಕ್ತ ಎಂದು ನನಗೆ ಅನ್ನಿಸುತ್ತದೆ.

(ಶ್ರೀ ಟಿ. ಎಸ್. ಮಾದಪ್ಪ ಗೌಡ)

ಹಾಗೆಯೇ ಒಂದು ಪಕ್ಷ ಮಾಡುವುದಾದರೆ ನಮ್ಮ ಜನ ಬಹಳ ಸಂತೋಷದಿಂದ ಹಣವನ್ನು ಕೊಡುತ್ತಾರೆ ಎಂದು ನನಗೆ ಹೊಳೆಯುತ್ತದೆ. ಈ ವಿಚಾರದಲ್ಲಿ ಹಣದ ಸಬೂಬು ಹೇಳತಕ್ಕಂಥಾದ್ದನ್ನು ಇನ್ನು ಮೇಲಾದರೂ ನಮ್ಮ ಸರ್ಕಾರ ನಿಲ್ಲಿಸಿ, ತರಾತುರಿಯಿಂದ ಕಟ್ಟುನಿಟ್ಟಾಗಿ ಕೆಲಸಕಾರ್ಯಗಳನ್ನು ತೆಗೆದುಕೊಂಡು, ನೀರಿನ ಸರಿಯಾದ ಭಾಗಕ್ಕೆ ಹೊಡೆದಾಡಲಿ. ಹೀಗೆ ಹೊಡೆದಾಡುವ ಸಂದರ್ಭದಲ್ಲಿ ಈ ಸಭೆಯ ಸದಸ್ಯರು ಹಾಗೂ ನಮ್ಮ ಸಂಸ್ಥಾನದ ಎಲ್ಲಾ ಜನತೆ ಸರ್ಕಾರದ ಹಿಂದೆ ಇರುತ್ತಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಂಕಿ ಅಂಶಗಳ ಬಗ್ಗೆ ಈ ಸಭೆಯ ಅನೇಕ ಮಾನ್ಯ ಸದಸ್ಯರುಗಳ ಸೊಗಸಾದ ಅಂಶಗಳನ್ನು ಕೊಟ್ಟಿದ್ದಾರೆ; ಮತ್ತೆ ಈ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಹಿಂದೆ ಮಾಡಿಕೊಂಡು ಬಂದಂಥದ್ದರಲ್ಲಿ ಏನೋ ರಾಜಕೀಯ ಎಂದು ಹೇಳಿ, ಹಿಂದಿನವರ ಮೇಲೆ ಈಗಿನವರು ಆರೋಪ ಮಾಡುವುದು, ಅವರ ಮೇಲೆ ಇವರು ಆರೋಪ ಹಾಕುವುದು ಇದನ್ನು ಎಷ್ಟು ಬೇಗನೆ ಬಿಟ್ಟುಬಿಟ್ಟರೆ ಅಷ್ಟು ಒಳ್ಳೆಯದು. ನಮಗೆ ಅನ್ನ ಕೊಡತಕ್ಕಂಥ ನೀರಿನ ಪ್ರಶ್ನೆಗೆ ಯಾವ ಒಂದು ಕಾರಣವೂ ಅಡ್ಡಿಯಾಗಬಾರದು. ಈ ರೀತಿ ದೇವರು ನಿಮಗೆಲ್ಲಾ ಒಳ್ಳೆಯ ಬುದ್ಧಿ ಕೊಟ್ಟು ಈಗ ಆಗಿರತಕ್ಕಂಥ ಅನ್ಯಾಯವನ್ನು ಹೋಗಲಾಡಿಸಿ ನಮ್ಮ ರಾಜ್ಯಕ್ಕೆ ಅನುಕೂಲವಾಗುವಂತೆ ಕೆಲಸ ಕಾರ್ಯಗಳನ್ನು ತಾವು ಮಾಡಿಕೊಂಡು ಹೋಗುತ್ತೀರೆಂದು ನಂಬಿ ಈ ವಿಚಾರದಲ್ಲಿ ನಮಗೆ ಒಂದೆರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

Sri KADIDAL MANJAPPA (Sringeri).—Mr. Speaker, Sir. I feel it is my sacred duty to voice my dis-satisfaction against the inequitable allocation of Krishna Godavari waters to Mysore State. At the out set I must submit that the report of Krishna-Godavari Commission is based on inadequate data and therefore it is vogue. I must also submit that the decision of Central Government is equally vague. I would like to submit that the Central Government should have considered thoroughly the just claims of Mysore before giving their decision. The Gulhati Commission has admitted that they are not posted with adequate data with regard to the flow of either rivers or the requirements of the projects which have come into existence already. In the absence of this data, I do not know how the Central Government took a decision to allocate the waters. Even assuming that the allocation is rough, I once again repeat that the Government of India should have considered all the claims thoroughly and properly.

Coming to the Report of the Commission, I would like to point out that recommendations are somewhat conflicting. I do not want to go to the details. I want to submit one para where they have said that there is no objection for taking up the Srisailam Project because it fits in with any scheme. In another breath they say that the scope of the project would; however, have to be reviewed as soon as the preliminary plan has been prepared. I do not know how they are able to reconcil these two views. They say that the project can be taken up. That is they give a signal to the Andhra Government to take up the project. Immediately they say that the scope of the project has to be examined in the light of the plans to be prepared with regard to the feasibility of diverting the Godavari waters to Krishna river. I am citing one instance to show that the recommendations of the Commission are conflicting.

Sri VEERENDRA PATIL.—Sir, I do not think there is any conflict? With regard to the recommendation. In the last sentence they say:

"The scope of the project would, however have to be reviewed as soon as the preliminary plan mentioned above has been prepared."

They have been all along maintaining that although they have no objection to go ahead with the Srisailam Project, with regard to the scope of the project that should be decided after the preliminary details are gone through.

Sri KADIDAL MANJAPPA.—If the Hon'ble Minister is satisfied, I am satisfied.

Sri VEERENDRA PATIL.—Sir, there is no question of my being satisfied. It is clearly laid down here that the project should be cleared only after the preliminary report is received.

Sri KADIDAL MANJAPPA.—I know Sri Hafiz Mohamed Ibrahim who is a God fearing gentleman is a very decent man. I do not want to blame him; I want to blame his Advisors. If he had been properly advised, I do not think he would have allocated the waters in this fashion. I agree with him when he says that at a time when emergency is prevailing in the country we should not kindle these disputes. The dispute is kindled by the Central Government. However much we may refrain from talking loud, we must voice our grievances at this purtinent movement. He has said that the Krishna-Godavari rivers are mighty rivers. These rivers have been made mighty on account of the rainfall in the catchment area of Mysore State. That he should not forget. After all, nature is bountiful to certain regions and therefore there is plenty of rainfall in those areas. So we have a natural right to demand that our claim is more than those in the lower areas. While allocating waters, it is not the loud protests or it is not once one right too much that should count. On definite principles waters will have to be allocated. We may be new to these disputes. But in western countries they have got definite laws and definite principles to resolve such disputes. It is admitted by the Gulhati Commission that in Mysore State nineteen talukas are frequently subjected to scarcity condition. I was a Minister in charge of Revenue and I had to tackle distress problem frequently. Roughly, one-third area of the State is frequently subjected to scarcity conditions. I have seen the areas subjected to scarcity conditions in Bijapur, Dharwar, Gulbarga and Raichur.

The Commission has admitted that Mysore's claim with regard to some projects require sympathetic consideration. It has to be admitted that the development so far achived with regard to irrigation is much more in Andhra than in Mysore. It has to be admitted also that Andhra is a surplus State. So far food production is concerned, taking into account all these factors, we deserve more than what has been allotted to us now. I feel that the decision of the Central Government is a bit hasty. They did not consider all the aspects. Some times people who are vociferous, and who make much of their claims snatch away more than what they deserve. In the case of Krishna-Godavari waters this has happened. Some how Andhra is in an advantageous position; some

(SRI KADIDAL MANJAPPA)

of our friends in Andhra wield influence in certain quarters in Delhi and they managed to get some of their projects included in the plans. The Planning Commission obliged them and now we are in a helpless position.

4-00 P.M.

SRI C. J. MUCKANNAPPA.—All the while, you were quarrelling for power and they were intelligent.

SRI KADIDAL MANJAPPA.—They are also quarrelling for power. My friend Shri Muckannappa also quarrels for power. He has been recently elevated to the position of Deputy Leader of a party (laughter).

Merely because we were silent and we did not protest it should not be the ground for rejecting our legitimate claim. My friend, the Minister for Forests, while speaking on the Budget, was trying to point out that because of the fault of the previous administrators in the State, we had to face the present situation. I do not know why he made such a statement. I wish he had not made it. I was in-charge of the Public Works Department from 1952-56 after the so-called 1951 Agreement came into being and I am glad that has been held to be invalid and void. There was too much pressure in those days to persuade us to ratify that Agreement. All along, consistently, we have refused to ratify that Agreement. We have been saying that we are not bound by that Agreement. Both Sri Hanumanthaiah and Sri K. C. Reddy refused to sign that Agreement. Therefore, I must point out to my friend Sri Rachaiah that the previous Chief Ministers and Ministers have taken the trouble to safeguard the interests of Mysore State. Prior to 1st November 1956 we were not directly interested in the river basins in the Hyderabad and Bombay Karnatak regions. Sri Rachaiah is not here, in 1953 or 1952, when I was Minister for P.W.D. I impounded the waters of the Cauvery in Krishnarajasagar and incurred the wrath of the then Chief Minister of Madras, Sri Rajaji. I did so on the ground that Madras violated the 1924 Agreement.

SRI V. M. DEO (Gubbi).—Would not my friend talk of the matter now before the House?

ಕೈಲಿ ದುಡ್ಡಿಲ್ಲ ಎಂತ ಹೇಳುತ್ತ ದೇಶದ ಜನರ ಕುತ್ತಿಗೆಯನ್ನು ಕೊಯ್ಯು ಹಾಕತಕ್ಕ ಕೆಲಸ ಮಾಡಿದ್ದಾರೆ. ಈ ಬಾಬುಗಳನ್ನೆಲ್ಲ ಈ ಕೂಡಲೇ ರದ್ದುಮಾಡಿ ಈ ಪ್ರಾಜೆಕ್ಟುಗಳ ಕೆಲಸಕ್ಕೆ ಆ ಹಣವನ್ನು ಉಪಯೋಗಿಸಬೇಕೆಂದು ಹೇಳುತ್ತೇನೆ. ಆದರೆ ಈ ದಿವಸ ನಮ್ಮ ಈ ಮಹಾರಾಷ್ಟ್ರ ಏಕೀಕರಣ ಸಮಿತಿಯವರು—ನಾವೂ ಈ ವಿಚಾರದಲ್ಲಿ ಒಂದಾಗಿ ಹೋಗೋಣವೆಂದರೆ ಇವರು ಮಾತೆತ್ತಿದರೆ ಈ ಅಸೆಂಬ್ಲಿಯಲ್ಲಿ ನಾವು ನಿಮ್ಮನ್ನು ಬಿಟ್ಟು ಹೋಗಲು ಸಿದ್ಧವಾಗಿದ್ದೇವೆ ಎಂತ ಹೇಳುತ್ತಿರುವಾಗ ಓಡಿ ಹೋಗುವ ಬಡ್ಡಿ ಹಾಲಿಗೆ ಹೆಪ್ಪು ಹಾಕುತ್ತಾಳೇ ? ಎಂಬ ಅನುಮಾನ ಬಂದಿದೆ. ಆದರೆ, ಈ ನಮ್ಮ ಸ್ನೇಹಿತರನ್ನು ನಾವು ಮಹಾರಾಷ್ಟ್ರಕ್ಕೆ ಓಡಿಸಬೇಕೆಂಬ ಇಷ್ಟವಾಗಲೀ, ಮನಸ್ಸಾಗಲೀ ನಮಗಿಲ್ಲ. ಅವರೀದಿವಸ ಈ ನದಿಗಳ ನೀರನ್ನು ಸಮುದ್ರಕ್ಕೆ ಬಿಟ್ಟರೂ ಚಿಂತೆಯಿಲ್ಲ, ನಮ್ಮ ಪಾಲನ್ನು ನಮಗೆ ಕೊಡಿ ಎಂತ ಕೇಳುತ್ತಿದ್ದಾರೆ. ಆದರೆ, ಅವರು ಹಾಗೆ ನೀರನ್ನು ಸಮುದ್ರದ ಪಾಲು ಮಾಡುವ ಬದಲು ನಮಗೆ ಬಿಟ್ಟುಕೊಡಲಿ—ನಾವು ಅವರಿಗೆ ನಮ್ಮಲ್ಲಿ ತಯಾರಾಗತಕ್ಕ ವಿದ್ಯುಚ್ಛಕ್ತಿಯನ್ನು ಅವರಿಗೂ ಸರಬರಾಯಿ ಮಾಡೋಣ. ಅವರು ನಮ್ಮನ್ನು ಎಂದೂ ಬಿಟ್ಟು ಹೋಗಬೇಕಾಗಿಲ್ಲ. ಅವರು ನಮ್ಮಲ್ಲಿ ಇರಲಿ—ಬಿಡಲಿ—ಅದು ಬೇರೆ ವಿಚಾರ. ಆದರೆ ನಾವು ಯಾವತ್ತೂ ನಮ್ಮ ಕಾಲು ಮೇಲೆ ನಿಲ್ಲಲು ನಾವು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದ್ದು ಅತ್ಯಗತ್ಯ. ಆದರೆ, ನಾಳೆ ದಿವಸ ಆ ಕೇಂದ್ರ ಸರ್ಕಾರದವರು ನೀವು ಯಾರನ್ನೂ ಬೈಯ್ಯಬೇಡಿ—ನಾಳೆ ದಿವಸ ಮೈಸೂರು ರಾಜ್ಯಕ್ಕೆ ಬೇಕಾದ ಆಹಾರ ಧಾನ್ಯಗಳನ್ನು ಆಂಧ್ರದವರು ಸರಬರಾಯಿ ಮಾಡುತ್ತಾರೆ ಎಂತ ಹೇಳಿದರೂ ಹೇಳಬಹುದು. ನಮಗೆ ಆ ರೀತಿ ಭಿಕ್ಷ ಎತ್ತಿ ಒಬ್ಬರ ಮುಲಾಜಿನಲ್ಲಿ ಹೊಟ್ಟೆ ಹೊರೆಯುವುದು ಬೇಡವೇ ಬೇಡ. ನಾವು ಈ ದಿವಸ ಆಹಾರ ಉತ್ಪತ್ತಿಯಲ್ಲಿ ಸ್ವಲ್ಪ ಕೆಳಗಿದ್ದರೂ ಈ ದಿವಸ ಆ ಆಂಧ್ರದಿಂದ ಬಂದಿರತಕ್ಕ ಸಹಸ್ರಾರು ಜನರಿಗೆ ಜೀವನೋಪಾಯವನ್ನು ಕಲ್ಪಿಸಿಕೊಟ್ಟು ನಾವು ಅವರನ್ನು ಇಲ್ಲಿ ಸಾಕುತ್ತಿದ್ದೇವೆ. ಹೀಗಿರುವಾಗ ನಮಗೆ ಅವರಿಂದ ಅನ್ನವನ್ನು ಬೇಡಿ ತರತಕ್ಕ ಕಾಲ ಬಾರದಿರಲಿ. ನಮ್ಮ ಮಂತ್ರಿಗಳು ಈ ದಿವಸ ಡೆಲ್ಲಿಗೆ ಹೋಗಿ ಆ ನಮ್ಮ ನೀರಿನ ಪೂರ್ಣ ಹಕ್ಕನ್ನು ಪಡೆದೇ ತೀರಬೇಕು. ಅಲ್ಲಿಗೆ ಹೋಗುವಾಗ ನಾನಾಗಲೇ ಹೇಳಿದಂತೆ ಇವರು ಇವರ ರಾಜೀನಾಮೆಗಳನ್ನು ಸಿದ್ಧಪಡಿಸಿಟ್ಟುಕೊಂಡು ಹೋಗಬೇಕು. ನಮಗೆ ಆ ರೆಸಿಗ್ನೇಷನ್ ಅರ್ಜಿಗಳನ್ನು ಟೈಪ್ ಮಾಡತಕ್ಕವರು ಸಿಗಲಿಲ್ಲ ಅಂತ ಕಳ್ಳಾಟ ಆಡಬಾರದು, ಇವರಿಗೆ ಈ ದಿವಸ ಈ ಮಂತ್ರಿ ಪದವಿಗಳು ಹೋದರೆ ನಾಳೆ ದಿವಸ ಇವರಿಗೆ ನಾವು ಇದಕ್ಕಿಂತಲೂ ದೊಡ್ಡ ಹುದ್ದೆಗಳನ್ನು ಕೊಡಿಸುತ್ತೇವೆ.

ನೀವು ಅಸೆಂಬ್ಲಿ ಸದಸ್ಯರಿಗೆ ಕೊಟ್ಟ ಭರವಸೆಗಳನ್ನೂ ಗಮನದಲ್ಲಿಡಬೇಕು. ಕೇಂದ್ರದಿಂದ 1,250 T.M.C. ft. ನೀರನ್ನೂ ಪಡೆಯದೆ ಯಾವ ಕಾರಣದಿಂದಲೇ ಆಗಲೀ, ವಾಪಸು ಬರಬೇಡಿ. ನಮ್ಮ ದೇಶದ ಜನ ಅಭಿಮಾನದಿಂದ ನಿಮ್ಮ ನೆರವಿಗೆ, ನಿಮ್ಮ ಬೆಂಬಲಕ್ಕೆ ಬರುವುದಕ್ಕೆ ಸಿದ್ಧರಾಗಿದ್ದಾರೆ. ಈ ಕೆಲಸವನ್ನು ಧಿಟ್ಟತನದಿಂದ ಮಾಡಿಕೊಂಡು ಬರಬೇಕು. ನೀವು ಮಾಡುವ ಒಳ್ಳೆಯ ಕೆಲಸಗಳಿಗೆ ನಮ್ಮ ಸರ್ವ ಬೆಂಬಲ ಯಾವಾಗಲೂ ಇದ್ದೇ ಇದೆ. ಮೈಸೂರು ದೇಶದ ಸರ್ವ ಜನರ ಬೆಂಬಲವೂ ಈ ವಿಷಯದಲ್ಲಿ ಸರ್ಕಾರಕ್ಕೆ ಇದೆ. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಮಾಡುತ್ತೇನೆ. ವಿರೋಧ ಪಕ್ಷದ ನಾಯಕರನ್ನೂ ನಿಮ್ಮ ಜೊತೆಯಲ್ಲಿ ಬೇಕಾದರೆ ಕರೆದುಕೊಂಡು ಹೋಗಿ...

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಪಕ್ಷದಲ್ಲಿ ಸೇರಿಸಿಕೊಳ್ಳಬೇಕೆಂದು ಹೇಳುತ್ತೀರಾ ! (ನಗು)

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ಜಗಳ, ಆ ಗಂಟುನ್ಯಾಯ ನಮಗೆ ಬೇಡ ಮಾರಾಯ(ನಗು)

Ex-Minister, ಹೊರಗಡೆ ಹೇಳಿಕೆ ಕೊಡುತ್ತಿರುವವರನ್ನೂ ನಿಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ, ಮನಸ್ಸಿನಲ್ಲಿ ಏನಾದರೂ ಇರಲಿ, ಅವರನ್ನು ಬೇಕಾದರೆ ಒಂದು ಕಮಿಟಿಗೆ ಚೇರ್‌ಮನ್ ಮಾಡಿ ಯಾವುದಾದರೂ ಒಂದು ತಪ್ಪು ಅಭಿಪ್ರಾಯ ಕೊಡುತ್ತಾರೆಂದು ಹೇಳುವಾಗ ಅಂಥ ಮನುಷ್ಯನನ್ನೂ ಇದರಲ್ಲಿ ನೇಮಿಸುವುದರಿಂದ ಅವರ ಮೇಲೆಯೂ ಜವಾಬ್ದಾರಿ ಹೊರಿಸಿದಂತಾಗುತ್ತದೆ. ಒಟ್ಟಿನಲ್ಲಿ ನಾನು ಹೇಳುವುದೆಂದರೆ ಮೈಸೂರು ದೇಶಕ್ಕೆ ನ್ಯಾಯವಾಗಿ ಸಲ್ಲಬೇಕಾದ ನೀರಿನ ಪಾಲು ಸಲ್ಲಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

‡ Sri A. R. PANCHAGAVI (Gokak II).—Sir, since a wrong impression seems to have been created in the minds of some of the members by the speech of Sri V. S. Patil that the Ghatapraba irrigators are not willing to use waters, I have to take this opportunity to speak. The whole Ghatapraba scheme may be said to consist of two parts—the old Gokak canal area and the new area. So far as the old Ghatapraba area is concerned, it is eight months irrigation and I may say that there is not a single acre which can easily avail of water but which has not used the water

(SRI A. R. PANCHAGAVI)

and all the cultivators are getting maximum benefit that they can. On the other hand, there is a scramble or actually a fight for more water. As regards the new area, anybody having a knowledge of the irrigation system may be knowing that it requires 20-30 years to bring full irrigation benefits under any system for the whole area to be covered. But on account of field channels and other things, there is less use of water than it ought to be. Moreover, we have been fighting to change the irrigation rules. The Bombay are very rigid and people are subjected to very heavy fines also in that area. That is one of the reasons why the people are not using much water. Even the very fact that they are paying heavy fines every year shows that they are irrigation-minded and they want to take the maximum use of irrigation benefit that is being given to them.

Moreover, agriculture in that area is only seasonal irrigation. It is only during the riany season-four months that water is being supplied to them. This will make it clear how the entire area is suffering from scarcity of water for irrigation. The point is the crop pattern has to be changed. Only jawar and other crops are to be grown normally and if there is heavy rainfall, the whole crop may go away. That is the difficulty. That is why the crop pattern has to be changed. Only when there is supply of water during the rainy season, it becomes very difficult for the cultivators. It is only when this system is changed......

Sri B. D. JATTI.—Without that dam, how can they get the water ?

Mr. SPEAKER.—The idea was canvassed by one of the previous speakers that the raiyats were unwilling to take water. The Hon'ble Member is now on his legs to show that it is not so. On the other hand, he is trying to say that they are anxious to get water.

Sri B. D. JATTI.—During the rainy season, they get water, but whenever they want, they cannot get water. The dam has not yet been constructed. It has to be constructed.

Sri A. R. PANCHAGAVI.—If there is rain, irrigation water will be surplus and crops may be spoiled. That is why the crop pattern that is now enforced permits only of jawar and bajra being cultivated. it is only when the dam is constucted and water is stored, at least for 8 months to 12 months, irrigation facilities are provided. Then only it will be beneficial to cultivators. That is the reason why some of the irrigators are not able to take the benefit of the irrigation facilities.

Moreover, as I explained earlier, it takes a long time to make lands fit for cultivation for being brought under irrigation. That is the usual course that is taken under any system. On the contrary, Ghataprabha people are irrigation-minded. There are wells which are being sunk and so many people are really applying for more irrigation wells and they want more water. Even now, in the rainy season, when there is water flow in that area, wells are full and cultivators are getting most benefit out of this. In Mudaligi and other villages, there are 300 to 400 wells coming up. That shows that people there are more irrigation-minded. So,

the impression that has been created about the cultivators of Ghataprabha would not be correct in the light of this and people should not be misled into believing that the people either under the Ghataprabha or in other areas are not desirous of having more water for irrigation. On the other hand, they are more irrigation-minded. We are more irrigation-minded. And we have been suffering more than any other area on account of scarcity. That is why we press more for the villagers and more allocation from the Krishna waters. That is what I wanted to say, Sir.

ಶ್ರೀ ವೀರೇಂದ್ರ ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಮೂರು ದಿವಸಗಳಿಂದ ಗುಲ್ಹಾಟಿ ಕಮಿಷನ್ ವರದಿ ಮತ್ತು ಆ ವರದಿಯನ್ನು ಆಧಾರವಾಗಿಟ್ಟುಕೊಂಡು ಕೇಂದ್ರ ಸರ್ಕಾರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳಾದ ಶ್ರೀ ಹಾಫೀಜ್ ಮಹಮದ್ ಇಬ್ರಾಹಿಂ ಅವರು ಪಾರ್ಲಿಮೆಂಟಿನಲ್ಲಿ ಕೊಟ್ಟ ಒಂದು ಹೇಳಿಕೆ ಇವುಗಳ ಮೇಲೆ ವಿಪುಲವಾಗಿ ಈ ಸಭೆಯಲ್ಲಿ ಚರ್ಚೆಯಾಗಿದೆ. ಅನೇಕ ಮಾನ್ಯ ಸದಸ್ಯರು ಈ ಕಡೆ ಮತ್ತು ಆ ಕಡೆಯಿಂದ ಕೇಂದ್ರ ಮಂತ್ರಿಗಳ ಹೇಳಿಕೆಯ ಬಗ್ಗೆ ಮತ್ತು ಈ ಸಮಸ್ಯೆಯ ಬಗ್ಗೆ ತಮ್ಮ ತಮ್ಮ ವಿಚಾರಗಳನ್ನು ವ್ಯಕ್ತಮಾಡಿದಾರೆ. ಈ ಸಮಸ್ಯೆಯ ಮೇಲೆ ಮಾತನಾಡಿದಂಥ ಎಲ್ಲ ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಕೇಳುವಂತೆ ಅವಕಾಶ ನನಗೆ ಸಿಕ್ಕಿದ್ದು ಬಹಳ ಸಂತೋಷ. ಎಲ್ಲ ಮಾನ್ಯ ಸದಸ್ಯರೂ ನಮ್ಮ ಮುಂದೆ ಇರುವಂತ ಈ ಜಟಿಲವಾದ ಸಮಸ್ಯೆಯನ್ನೂ ಸಂಪೂರ್ಣವಾಗಿ ತಿಳಿದುಕೊಳ್ಳುವಂತ ಪ್ರಯತ್ನ ಮಾಡಿದ್ದಾರೆನ್ನುವಂತಾದ್ದು ಅವರ ಭಾಷಣದಿಂದ ವ್ಯಕ್ತವಾಗುತ್ತಿತ್ತು. ಅದೂ ಅಲ್ಲದೆ ಈಗ ನೀರಿನ ಹಂಚಿಕೆ ಬಗ್ಗೆ ಕೇಂದ್ರ ಸರ್ಕಾರದವರು ಯಾವ ಒಂದು ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ, ಅದನ್ನೂ ನಾವು ಒಪ್ಪಿಕೊಂಡದ್ದೇ ಆದರೆ ಅದರ ಪರಿಣಾಮ ನಮ್ಮ ರಾಜ್ಯದಲ್ಲಿರುವಂತ ಜನರ ಮೇಲೆ ಮತ್ತು ನಮ್ಮ ಮೇಲೆ ಏನಾಗುತ್ತದೆ ಎನ್ನುವಂತಾದ್ದನ್ನು ಕೂಡ ಕೂಲಂಕಷವಾಗಿ ಅವರು ಹೇಳಿದ್ದಾರೆ.

5-30 P.M.

ಈ ಒಂದು ಸಮಸ್ಯೆಯಲ್ಲಿ ಅನೇಕ ಮಾನ್ಯ ಸದಸ್ಯರುಗಳು ಮಾತನಾಡುವಾಗ ಬಹಳ ತೀವ್ರವಾಗಿ ಮಾತನಾಡಿದ್ದಾರೆ ಈ ಭಾಗದಲ್ಲಿ ಇರತಕ್ಕ ಮಾನ್ಯ ಸದಸ್ಯರುಗಳೂ ಯಾವಾಗಲೂ ಸ್ವಾಭಾವಿಕವಾಗಿ ಮಾತನಾಡುವವರೂ ಕೂಡ ಅಷ್ಟೇ ತೀವ್ರತೆಯಿಂದ ಮಾತನಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿ ಎಲ್ಲ ಮಾನ್ಯ ಸದಸ್ಯರೂ ಕೂಡ ತೀವ್ರತೆಯಿಂದ ಈ ಸಮಸ್ಯೆಯ ಬಗ್ಗೆ ತಮ್ಮ ನಿರ್ಣಯವನ್ನೂ ವ್ಯಕ್ತಮಾಡಿದ್ದಾರೆ. ಇದು ಬಹಳ ಸಂತೋಷದ ಸಂಗತಿ. ಮತ್ತು ಇಷ್ಟೆಲ್ಲಾ ಮಾನ್ಯ ಸದಸ್ಯರು ಭಾಷಣ ಮಾಡುವುದನ್ನು ನಾನು ಸರಿಯಾಗಿ ಕೇಳಿ ತಿಳಿದುಕೊಂಡಿರುವಂತೆ ಬಹುಶಃ ಯಾರೂ ಈ ನಿರ್ಣಯದ ಬಗ್ಗೆ ಅವರು ಈ ಸಮಸ್ಯೆಯ ಪರಿಹಾರದ ಬಗ್ಗೆ ಕೇಂದ್ರ ಸರಕಾರದವರ ಮಾತನ್ನೂ ಒಪ್ಪಿಕೊಳ್ಳುವ ಮಾತು ಎಂದು ಯಾರೂ ಹೇಳಲಿಲ್ಲ, ಕೆಲವು ಮಾನ್ಯ ಸದಸ್ಯರು ಹೇಳಿದರು ಇದು ಒಪ್ಪಿಕೊಳ್ಳುವ ಹಾಗಿಲ್ಲ. ಇದನ್ನು ಸರ್ವಥಾ ಒಪ್ಪಿಕೊಳ್ಳಬೇಡಿ ಎಂದು, ಇನ್ನು ಕೆಲವರು ಸ್ವಲ್ಪ ಕಠಿಣವಾಗಿ ಕೇಂದ್ರ ಸರಕಾರಕ್ಕೆ ಇದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇದಕ್ಕಾಗಿ ಟ್ರೈಬ್ಯುನಲ್ಲಿಗೆ ಹೋಗಿ ಅಲ್ಲಿ ಅವರು ಏನು ನಿರ್ಣಯ ಕೊಡುತ್ತಾರೋ ಅದರಂತೆ ಒಪ್ಪಿಕೊಳ್ಳೋಣ ಎಂದು ಸ್ಪಷ್ಟವಾಗಿ ಕೆಲವು ಮಾನ್ಯ ಸದಸ್ಯರೂ ಹೇಳಿದರು. ಕೆಲವು ಮಾನ್ಯ ಸದಸ್ಯರು ಮಹಾರಾಷ್ಟ್ರದಂತೆ straightaway ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಸೂಚಿಸಿದ್ದಾರೆ. ಆದರೆ ಅಂಥದವರು ಒಪ್ಪಿಕೊಳ್ಳುವಾಗ under protest ಎಂದು ಆ ರೀತಿ ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಆದರೂ ಇನ್ನಷ್ಟು ಕೂಲಂಕಷವಾಗಿ ವಿಚಾರ ಮಾಡಿ ಇದರಲ್ಲಿ ಅನೇಕ ಶಂಕೆಗಳು, ಸಂಶಯಗಳು ಬಂದಿವೆ. ಇದರ ಬಗ್ಗೆ ಸಮಾಧಾನವಾಗುವುದರ ಬಗ್ಗೆ ಕೇಂದ್ರ ಸರಕಾರದಿಂದ ಕ್ಲಾರಿಫಿಕೇಷನ್ನಿಗಾಗಿ ಕೇಳಿ, ಅದು ಬಂದ ಮೇಲೆ ಇನ್ನೂ ದೀರ್ಘವಾಗಿ ವಿಚಾರ ಮಾಡಿ ಒಂದು ಯೋಗ್ಯವಾದ ನಿರ್ಣಯವನ್ನು ತೆಗೆದುಕೊಳ್ಳಿ, ಎಂದು ಹೇಳಿದರು. ಅಂತೂ ಒಟ್ಟಾರೆ ಕಣ್ಣು ಮುಂದೆ ಒಪ್ಪಿಕೊಳ್ಳುವಂತಹ ನಿರ್ಣಯ ಕೊಟ್ಟಿಲ್ಲ ಎನ್ನುವ ಅಭಿಪ್ರಾಯವನ್ನು ಸರ್ವಸಾಮಾನ್ಯವಾಗಿ ಎಲ್ಲ ಮಾನ್ಯ ಸದಸ್ಯರುಗಳೂ ಇದರ ಮೇಲೆ ಮಾತನಾಡುವಾಗ ಹೇಳಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಮುಖ್ಯ ಮಂತ್ರಿಗಳೂ ತಮ್ಮ ಮುಂದೆ ಈ ನಿರ್ಣಯವನ್ನು ಇಡುವ ಮುಂದೆ ಎಲ್ಲಿಯೂ ಅವರು ಇದನ್ನು ಒಪ್ಪಿಕೊಳ್ಳುತ್ತೇವೆನ್ನುವ ಮಾತನ್ನು ಹೇಳಲಿಲ್ಲ. ಅಲ್ಲದೇ ಅವರು ಈ ನಿರ್ಣಯ ಕೊಡಲಿಕ್ಕೆ ಯಾವ ರೀತಿ ಹಂಚಿಕೆ ಮಾಡಬೇಕು ಎನ್ನುವ ಸಲಹೆ ಕೊಟ್ಟಿದ್ದಾರೆಯೋ ಎಂದರೆ ಅದೂ ಇಲ್ಲ, ಅಲ್ಲದೆ ಇದು ಸಮಾಧಾನಕರವಾಗಿದೆ ಎಂದು ಈಗಲೇ ನಾವು ಒಪ್ಪಿಕೊಳ್ಳುತ್ತೇವೆ ಎನ್ನುವ ಮಾತನ್ನು

(ಶ್ರೀ ವೀರೇಂದ್ರ ಪಾಟೀಲ್)

ಹೇಳಲಿಲ್ಲ. ಇವೊತ್ತಿನ ದಿವಸ ಈ ವರದಿಯಂತೆ ನಮಗೇನು ಈಗ 600 T.M.C. ಎಂದು ಕೊಟ್ಟಿದ್ದಾರೆ ಎಂದರೆ ಸುಮಾರು ಐವತ್ತು ಪರ್ಸೆಂಟಿನಷ್ಟು ಬೇಡಿಕೆಯನ್ನು ಕೊಟ್ಟಿದ್ದಾರೆ, ಇನ್ನೂ ಹೆಚ್ಚು ನೀರು ನಮಗೆ ಬರಬೇಕಾಗಿತ್ತು ಎಂದು ಅವರು ಆಂಧ್ರಕ್ಕೆ 800 T.M.C. ಯಷ್ಟು ಕೊಟ್ಟು, ನಮಗೆ 600 T.M.C. ಎಂದು ಕೊಡುವುದಕ್ಕೆ ಬದಲಾಗಿ ನಮಗೇನೇ 800 T.M.C. ಯಷ್ಟನ್ನು ಕೊಟ್ಟು ಆಂಧ್ರಕ್ಕೆ 600 T.M.C. ಯಷ್ಟು ಕೊಟ್ಟು 1976 ನಂತರ ಇದನ್ನು ವಿಚಾರ ಮಾಡುವ ಆಶ್ವಾಸನೆ ಕೊಟ್ಟಿದ್ದಾರೆ. ಬಹುಶಃ ಇದರ ಬಗ್ಗೆ ಏನಾದರೂ ಸ್ವಲ್ಪ ವಿಚಾರ ಮಾಡಬಹುದಾಗಿತ್ತು ಎಂದು ಹೇಳಿದರು. ನಮಗೆ 600 T.M.C. ಎಂದು ಕೊಟ್ಟು ಆಂಧ್ರಕ್ಕೆ 800 T.M.C. ಎಂದು ಕೊಟ್ಟರೆ ಮುಂದೆ ಇನ್ನ್ಯಾವರಿಂದಲೂ ಒಂದು T.M.C. ನೀರನ್ನು ಪಡೆಯುವಂತೆಯೇ ಇಲ್ಲ ಎಂದು ಎಲ್ಲಿಯೂ ಹೇಳಲಾಗಿಲ್ಲ. 800 T.M.C. ಯಷ್ಟನ್ನು ಮೈಸೂರು ಸರಕಾರಕ್ಕಾಗಿ ಕೊಟ್ಟಿದ್ದರೆ ಇಲ್ಲಿಯ ಜನಕ್ಕೆ ಅನುಕೂಲವಾಗುತ್ತಿತ್ತು ಎಂದು ಯಾರಾದರೂ ತಿಳಿದು ಕೊಂಡಿದ್ದರೆ ಅದು ತಪ್ಪಾಗುತ್ತದೆ ಎಂದು ಮತ್ತೊಮ್ಮೆ ನಾನು ಸ್ಪಷ್ಟ ಪಡಿಸುತ್ತೇನೆ. ಈಗ ಅವರು ನಮಗೆ 600 T.M.C. ಆಂಧ್ರಕ್ಕೆ 800 T M.C. ft. ಮತ್ತೆ ಮಹಾರಾಷ್ಟ್ರಕ್ಕೆ 400 T.M.C. ft. ಎಂದು ಕೊಟ್ಟಿದ್ದಾರೆ. 1961ರಲ್ಲಿ ಮಾಡಿದ ಒಂದು ಅಂದಾಜನ್ನು ಇಲ್ಲಿ ಹೇಳುತ್ತೇವೆ. ನಾವೇನು ವಾಟರು ಯೂಟಿಲೈಸೇಷನ್ ಅಥವಾ ಯೂಟಿಲೈಸು ಮಾಡಲು ಪ್ರಾಜೆಕ್ಟು ಕಟ್ಟಿದ್ದರೆ ಎಷ್ಟು ಮಟ್ಟಿಗೆ ಬರುತ್ತಿತ್ತು ಎನ್ನುವ ಒಂದು ಲೆಕ್ಕವನ್ನು ತೆಗೆದು ಕೊಂಡರೆ, ಆಂಧ್ರದವರು ಈಗಾಗಲೇ 714 T.M.C. ft. ಯಷ್ಟು ನೀರನ್ನು ಯೂಟಿಲೈಸು ಮಾಡಿದ್ದಾರೆ. ಈಗ ಕೊಟ್ಟಿರುವಂತೆ 800 T.M.C. ಎಂದು ಇಟ್ಟುಕೊಂಡರೆ ಇದರಲ್ಲಿ ಬ್ಯಾಲೆನ್ಸು ಎಂದು ಉಳಿಯುವುದು 86 T.M.C. ಯಷ್ಟು, ಮೈಸೂರಿಗೆ ಕೊಟ್ಟಿರುವುದು 600 T.M.C. ಯಷ್ಟು ಇದರಲ್ಲಿ ಯೋಜನೆಗಳಿಗಾಗಿ ಈಗಾಗಲೇ 330 T.M.C.ಯಷ್ಟು ಯೂಟಿಲೈಸು ಮಾಡಿದ್ದೇವೆ. ಇನ್ನು ಉಳಿದಿರುವುದು 270 T.M.C.ಯಷ್ಟು ನೀರನ್ನು ಮೂರನೇ, ನಾಲ್ಕನೇ ಹಾಗೂ ಐದನೇ ಪಂಚವಾರ್ಷಿಕ ಯೋಜನೆಗಳಲ್ಲಿ ಕೆಲವು ಪ್ರಾಜೆಕ್ಟುಗಳಿಗಾಗಿ ಈ ನೀರು ಉಳಿಯುತ್ತದೆ, ಹೀಗೆ ಆಂಧ್ರದವರಿಗೆ 86 T.M.C. ft. ಮೈಸೂರು 270 T.M.C. ft. ಉಳಿಯುತ್ತದೆ, ಮಹಾರಾಷ್ಟ್ರಕ್ಕಾಗಿ 400 T.M.C. ಎಂದು ಕೊಟ್ಟಿರುವುದರಲ್ಲಿ ಈಗಾಗಲೇ 223 T.M.C.ಯಷ್ಟು ನೀರನ್ನು ಯೂಟಿಲೈಸು ಮಾಡಿದ್ದಾರೆ, ಇನ್ನು ಮುಂದೆ ಅವರ ಪ್ರಾಜೆಕ್ಟುಗಳಿಗಾಗಿ ಉಳಿಯುವುದು 177 T.M.C. ಯಷ್ಟು. ಇದಿಷ್ಟು ವಿವರವನ್ನು ಹೇಳಿ 1976ರವರೆಗೆ ಯೂಟಿಲೈಸು ಮಾಡಿಕೊಂಡು ಆ ಮೇಲೆ ಇನ್ನೂ ಹೆಚ್ಚಿನ ಪ್ರಗತಿಗಾಗಿ ನೀರನ್ನು ಕೇಳಿದರೆ ಅದನ್ನು ನಮ್ಮ ಅಂಕಿ ಅಂಶಗಳಿಂದ ನೋಡಿ ಕೊಡಬಹುದು ಎನ್ನುವ ವಿಚಾರವನ್ನು ಕೇಂದ್ರದವರು ಸೂಚಿಸಿದ್ದಾರೆ. ಇದನ್ನು ನಾವು ವಿಚಾರ ಮಾಡೋಣ. ಇದು ಎಷ್ಟರ ಮಟ್ಟಿಗೆ ಸಾಧ್ಯ ಎನ್ನುವುದನ್ನು ನೋಡಿ ತಪ್ಪು ಮಾಡಿದ್ದರೆ ಅವರೇ ಮಾಡಿದ್ದಾರೆ ಎಂದು ನಾನು ಇಲ್ಲಿ ಹೇಳುವುದಕ್ಕೆ ನಿಂತಿಲ್ಲ. ಇವೊತ್ತು ನಮ್ಮ ಮೇಲೆ ನ್ಯಾಯವನ್ನು ಸಾಕಷ್ಟು ದೊರಕಿಸಿ ಕೊಟ್ಟಿಲ್ಲ ಎನ್ನುವ ಮಾತನ್ನೂ ಆಗಲೇ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಎನ್ನುವುದನ್ನು ನಾನೂ ಸ್ಪಷ್ಟಪಡಿಸುತ್ತೇನೆ. ನಮಗೆ ಸಮಾಧಾನಕರವಾಗಿಲ್ಲ, Disappointment ಆಗಿದೆ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಏಕೆಂದರೆ, ಯಾರೂ ಆಂಧ್ರದವರಂತೆ ನಾವು, ಮುಂದೆ ಹೋಗುತ್ತಿಲ್ಲ ಅವರು ಹೋಗುತ್ತಿದ್ದಾರೆ ಎಂದು ಹೇಳಿದ ಮೇಲೆ ಗಲ್ಹಾಟಿ ಮಂಡಲಿಯು ನೇಮಕವಾಗಿ ಅವರ ರಿಪೋರ್ಟು ಬಂದ ಮೇಲೆ ನಾವು ನಿರ್ಣಯವನ್ನು ಯಾವ ಸ್ಟೇಜಿನಲ್ಲಿ ಮಾಡಬೇಕಾಗಿತ್ತು ಅಲ್ಲದೆ ಆಂಧ್ರದವರ ಕೆಲಸವನ್ನು ಮುಂದುವರಿಸುತ್ತಿರುವಾಗ ಅದನ್ನು ತಡೆಯುವುದಕ್ಕೆ ಹೇಗೆ ಸಾಧ್ಯ? ಆದರೆ ಆಂಧ್ರದವರು ಮುನ್ನುಗ್ಗಿ ಮಾಡುತ್ತಿದ್ದಾರೆನ್ನುವ ವರದಿಗಳು ತಮಗೂ ಬರುತ್ತಿವೆ, ನಮಗೂ ಬರುತ್ತಿವೆ. ಅವರು ಕೇಂದ್ರದವರು, ಕ್ಲಿಯರೆನ್ಸು ಕೊಡಲಿಲ್ಲ, ಹಾಗಿದ್ದೂ ಈ ಕೆಲಸಗಳನ್ನು ಮಾಡುತ್ತ ಹೋಗುತ್ತೇನೆ ಎನ್ನುವ ಧೈರ್ಯಸಾಹಸ ಮಾಡುತ್ತಿದ್ದಾರೆ ಎಂದರೆ ಬಹುಶಃ ಕೇಂದ್ರದವರು ತಮಗೆ yield ಆಗುವ ನೆಪದಿಂದ ಇರಬಹುದು ಎಂದೆನಿಸುತ್ತದೆ. ಅದಕ್ಕೆ ಈಗ ತಾನೇ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಸಿ. ಬಸಪ್ಪನವರು ಹೇಳಿದಂತೆ ಈ ರೀತಿಯ ಒಂದು ವಾತಾವರಣ ಹುಟ್ಟುತ್ತಿದ್ದರೆ, ಮುಂದಕ್ಕೆ ಕೇಂದ್ರದ ಆದೇಶವನ್ನು ಎಲ್ಲ ಸ್ಟೇಟಿನವರೂ Deputy ಮಾಡಬಹುದು. ಆದರಿಂದ ಕೇಂದ್ರ ಸರಕಾರದವರು ಈ ಬಗ್ಗೆ ಜಾಗರೂಕರಾಗಿರಬೇಕು.

Mr. SPEAKER.—Which funds are they spending? Are they spending the funds provided by the Planning Commission or from their Budget?

Sri VEERENDRA PATIL.—I do not know from what funds they are spending. But, according to the report that we are receiving, they are going ahead with the Srisailam project.

SRI B. D. JATTI.—Sir, I am told that they have made an internal arrangement between the Ministers that out of the provisions made for the different departments, five per cent would be saved from the various departments and that money would be spent towards these projects.

ಶ್ರೀ ವೀರೇಂದ್ರ ಪಾಟೀಲ್.—ಅದೇನೇ ಇರಲಿ, ಇವೊತ್ತಿನ ದಿವಸ ಯಾರಾದರೂ ಆ ತರಹ ಮುಂದೆ ಹೋದರೆ ಅವರಂತೆ ನಮ್ಮಲ್ಲಿ ಆಗುತ್ತದೆ. ಒಂದೊಂದು ಸಲ ನಾವು ಕೂಡ in anticipation ಎಂದು ಕೆಲಸವನ್ನು ಮಾಡಿ ಅನಂತರ ರೆಗ್ಯುಲರೈಸು ಮಾಡುತ್ತೇವೆ. ಆ ರೀತಿ ಮಾಡಬಹುದು ಎನ್ನುವ ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದರೂ ಅದು ಏನೂ ಈ ದೇಶಕ್ಕೆ ಸಮಾಧಾನಕರ ವಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

MR. SPEAKER.—So, it is clear that the expenditure incurred in that manner is not authorised or sanctioned or approved by the Planning Commission.

ಶ್ರೀ ವೀರೇಂದ್ರ ಪಾಟೀಲ್.—ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದನ್ನೇ ನಾನೂ ಹೇಳಬೇಕಾಗಿದೆ. ಈ ಗುಲ್ಹಾಟಿ ಕಮೀಷನ್ನಿನ ವರದಿಯ ಪ್ರಕಾರ ಇಲ್ಲಿಯವರೆಗೂ ನಾವು ಕೇಳದೆ ಇರತಕ್ಕ ಹೊಸ ಪದ ಎಂದರೆ intergrid ಎನ್ನುವುದನ್ನು ಕೇಳುತ್ತಿದ್ದೇವೆ. ಇಲ್ಲಿಯವರೆಗೂ powergrid ಎಂದು ಕೇಳಿದ್ದೆವು. ಈ ಎರಡು ಬೇಸಿನ್‌ಗಳನ್ನು ನೋಡಿಕೊಂಡು ಒಂದು Comprehensive Planನ್ನು ತಯಾರು ಮಾಡಿಲ್ಲ ಎಂದರೆ ಬಹುಶಃ ಎರಡೂ ಬೇಸಿನ್‌ಗಳಲ್ಲಿರುವ yieldನ್ನು ಗಣನೆಗೆ ತೆಗೆದುಕೊಳ್ಳಬೇಕು. ಈ yieldನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅವರ ಹಂಚುವಿಕೆಯಿಂದ ಸುಮಾರು 1,100 ಆಂಧ್ರಕ್ಕೆ 600 T.M.C. ನಮಗೆ 400 T.M.C. ಮಹಾರಾಷ್ಟ್ರಕ್ಕೆ ಬರುತ್ತೆ ಎಂದು ಅವರು ನಂಬಿಕೊಂಡಿದ್ದಾರೆ. ಹೀಗೆ ಅವರು ಪೋಲಾವರಂ ಮತ್ತು ಈ ಚಂಪಲ್ಲಿ ಯೋಜನೆಗಾಗಿ 306 T.M.C. ಯಷ್ಟು ಗುಲ್ಹಾಟಿ ಕಮಿಷನ್ನಿನವರು ರೆಕಮೆಂಡು ಮಾಡಿ indirect ಆಗಿ ಹೇಳಿದ್ದಾರೆ. ಒಂದು ವೇಳೆ ನೀರನ್ನು ಉಪಯೋಗಿಸಿಕೊಳ್ಳಬಹುದು ಎಂದು ಪ್ರಯತ್ನ ಮಾಡಬಹುದು.

ಗೋದಾವರಿ ನದಿಯ ಆ ಎಲ್ಲ ನೀರು ಆಂಧ್ರಕ್ಕೆ ಮೀಸಲಾಗಿದೆ 306 T.M.C. ನೀರನ್ನು ಡೈವರ್ಟ್ ಮಾಡಲು ಶಿಫಾರಸು ಮಾಡಿದ್ದಾರೆ ಆದರೆ ಇಷ್ಟು ನೀರು ಸರ್ಪ್ಲಸ್ ಆಗಿದೆಯೆಂದು ಹೇಳಿಲ್ಲ. ಅಂಕಿ ಅಂಶಗಳನ್ನು ಮಾತ್ರ ಕೊಟ್ಟಿದ್ದಾರೆ. ಕೃಷ್ಣ ಬೇಸಿನ್‌ದಲ್ಲಿ 12 ಸಬ್ ಬೇಸಿನ್ಸ್ ಮಾಡಿ ವಿಭಾಗ ಮಾಡಿದ್ದಾರೆ. ಗೋದಾವರಿ ನದಿ ಪ್ರದೇಶವನ್ನು ವಿಭಾಗಮಾಡಿ ಬೇಸಿನ್‌ನ ಉತ್ಪತ್ತಿ ಎಷ್ಟು ಬೇಡಿಕೆ ಎಷ್ಟು ಎನ್ನುವುದನ್ನು ಲೆಕ್ಕ ಹಾಕಿದ್ದಾರೆ. ನಮ್ಮ ಎಂಜಿನಿಯರರ ಅಭಿಪ್ರಾಯದಲ್ಲಿ ಒಂದು ಸಾವಿರ T.M.C. ನೀರನ್ನು ಡೈವರ್ಟ್ ಮಾಡಬಹುದು ಎಂದು ಮತ್ತು ಅದು ಸರ್ಪ್ಲಸ್ ಆಗಿದೆ ಎಂದು ಸಿದ್ಧವಾಗುತ್ತದೆ ಅಂದರೆ ಒಟ್ಟು ಅವರಿಗೆ 800 ಮತ್ತು 1000 ಅಂದರೆ 1,800 T.M.C. ನೀರು ಅವರಿಗೆ ಬರುತ್ತದೆ. ದಕ್ಷಿಣ ಹಿಂದುಸ್ಥಾನದಲ್ಲಿ ಆಹಾರ ಉತ್ಪಾದನೆಯಲ್ಲಿ ಆಂಧ್ರವು ಸರ್ಪ್ಲಸ್ ರಾಜ್ಯವಾಗಿದೆ. ಇದು ವಿಚಾರ ಮಾಡತಕ್ಕ ವಿಷಯ.

306 T.M.C. ನೀರನ್ನು ಡೈವರ್ಟ್‌ಮಾಡಿ ಎಂದು ಅವರು ಹೇಳಿದ್ದಾರೆ. ಆದರೆ ನಮ್ಮ ಎಂಜಿನಿಯರರ ಅಭಿಪ್ರಾಯದಲ್ಲಿ 1000 T.M.C. ಆಗುತ್ತದೆಂದು ಸಿದ್ಧಮಾಡಿ ಕೊಡುತ್ತಾರೆ. ಇದು ಕೇಂದ್ರ ಸರಕಾರದ ಸ್ಟೇಟ್‌ಮೆಂಟಿನಲ್ಲದೆ. ಕೃಷ್ಣಾ ಮತ್ತು ಗೋದಾವರಿ ಎರಡು ಬೇಸಿನ್ ಗಣನೆಗೆ ತೆಗೆದುಕೊಂಡು ನೀರು ಹಂಚಿಕೆ ಮಾಡಿದರೆ 1,800 T.M.C. ಅವರಿಗೆ ಬರುತ್ತದೆ. 400 T.M.C. ನೀರು ನಮಗೆ ದೊರೆಯುತ್ತದೆ. 400 T.M.C. ನೀರು ಮಹಾರಾಷ್ಟ್ರಕ್ಕೆ ದೊರೆಯುತ್ತದೆ. ಎಲ್ಲಕ್ಕೂ ಹೆಚ್ಚು ಆಂಧ್ರದಲ್ಲಿ ಆಹಾರ ಧಾನ್ಯ ಬೆಳೆಯುತ್ತಾರೆ. ಈಗಾಗಲೇ ಶೇಕಡ 30ರಷ್ಟು ನೀರಾವರಿಯಾಗಿದೆ. ಆಂಧ್ರದವರು ಹೆಚ್ಚು ಬೆಳೆಯುವದರಿಂದ ದೇಶಕ್ಕೆಲ್ಲಾ ಲಾಭವಾಗುತ್ತದೆಂದು ಅವರು ಹೇಳುತ್ತಾರೆ. ಆದರೆ ಅವರು ಬೆಳೆದದ್ದನ್ನು ಕೊಂಡು ಕೊಳ್ಳುವ ಶಕ್ತಿ ನಮಗೆ ಬೇಕಾಗುತ್ತದೆ. ಅದಲ್ಲದೆ 400-500 ಮೈಲಿ ಅಂತರವಿರುವ ದೂರ ಪ್ರದೇಶದಿಂದ ವ್ಯಾಗನ್ನಿನಲ್ಲಾಗಲಿ ಟ್ರಕ್ಕಿನಲ್ಲಾಗಲಿ ತೆಗೆದುಕೊಂಡು ಬಂದು ವಿಜಾಪುರ ಗುಲಬುರ್ಗ ಜಿಲ್ಲೆಗೆ ಪೂರೈಸುವ ಯೋಗ್ಯತೆ ಕ್ಯಾಪಾಸಿಟಿ ನಮಗೆ ಬೇಕಾಗುತ್ತದೆ. ಪ್ಲಾನಿಂಗ್ ಕಮೀಷನ್ ಅವರ ಉದ್ದೇಶವೇನೆಂದರೆ regional imbalance ಹೋಗಬೇಕು ಎಲ್ಲ ಪ್ರದೇಶ ಸಮಾನವಾಗಿ ಡೆವಲಪ್ ಆಗಬೇಕು ಎಂದಿದೆ, ಆದರೆ ಅದು ಹೇಗೆ ಸಾಧ್ಯ? ಉದ್ಯೋಗವಿರುವ ಕಡೆ ಜನ ಬರುವದಕ್ಕಿಂತ ಜನ ಇರುವ ಕಡೆಯಲ್ಲಿಯೇ ಉದ್ದಿಮೆಗಳನ್ನು ಪ್ರಾರಂಭಿಸುವುದು ಒಳ್ಳೆಯದು. ಅದಕ್ಕಾಗಿಯೇ rural industrialisation ಗಾಗಿ ಕೋಟ್ಯಾಂತರ ರೂಪಾಯಿ ಖರ್ಚುಮಾಡಲಾಗುತ್ತಿದೆ. ಆದ್ದರಿಂದ ಜನ ಇದ್ದಲ್ಲಿ ಉದ್ಯೋಗ ಹೋಗಬೇಕು ಎಂಬ ನೀತಿ ಒಳ್ಳೆಯದು. ನಮ್ಮ ದೇಶದಲ್ಲಿ ನೂರಕ್ಕೆ 80ರಷ್ಟು ಜನ ಹಳ್ಳಿಗಳಲ್ಲಿ

(ಶ್ರೀ ವೀರೇಂದ್ರ ಪಾಟೀಲ್)

ದ್ದಾರೆ. ಒಕ್ಕಲತನ ಅವರ ಮುಖ್ಯ ಉದ್ಯೋಗವಾಗಿದೆ. ಆದುದರಿಂದ ಜನ ಇರುವಲ್ಲಿ ನೀರು ಒದಗಿಸಿ ಒಕ್ಕಲತನಕ್ಕೆ ಅನುಕೂಲ ಮಾಡಿಕೊಡಬೇಕಾಗುತ್ತದೆ. ಒಂದು ಕಡೆ ಮಾತ್ರ ಡೆವಲಪ್ ಮಾಡುತ್ತೇವೆ ಎಂದು ಹೇಳಿದರೆ ಯಾರೂ ಆ ತತ್ವಕ್ಕೆ ಒಪ್ಪುವುದಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ.

ಈ ಸಂದರ್ಭದಲ್ಲಿ ಒಂದೆರಡು ಮಾತು ಹೇಳುತ್ತೇನೆ. ನೀರು ಉಪಯೋಗಿಸುವುದು ಇದೊಂದು ದೊಡ್ಡ ಕಾಂಟ್ರವರ್ಸಿಯಾಗಿದೆ. ಅನೇಕ ಸದಸ್ಯರು ಅನೇಕ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈ ಅಂಕಿ ಅಂಶ ಎಲ್ಲಿಂದ ದೊರೆಯಿತು ಗೊತ್ತಿಲ್ಲ. ಈ ರೀತಿ ಅಂಕಿ ಅಂಶಗಳನ್ನು ಕೊಡುವದರಿಂದ ಆಂಧ್ರ ಮತ್ತು ಮಹಾರಾಷ್ಟ್ರದವರು ಈ ಅಂಕಿ ಅಂಶಗಳ ಲಾಭ ಪಡೆಯಲು ಪ್ರಯತ್ನ ಮಾಡುತ್ತಾರೆ ಎನ್ನುವುದನ್ನು ಎಲ್ಲರೂ ಮೊದಲು ತಿಳಿದುಕೊಳ್ಳಬೇಕು. ಕೃಷ್ಣ ಬೇಸಿನ್‌ನಲ್ಲಿಯ ನೀರು 1745 T.M.C. ಎಂದು ಆಂಧ್ರದವರು ಹೇಳುತ್ತಾರೆ. ಕಡಿಮೆ ನೀರು ತೋರಿಸುವುದರಲ್ಲಿ ಅವರಿಗೆ ಲಾಭವಿದೆ ಯಾಕೆಂದರೆ ಅವರು ನದಿಯ ಕೆಳಗಡೆ ಪ್ರದೇಶದಲ್ಲಿದ್ದಾರೆ. ನೀರು ಉಳಿದಿಲ್ಲವೆಂದು ಅವರು ಹೇಳಬಹುದು. ಆದರೆ ನೀರು ಉಪಯೋಗಿಸಿಕೊಳ್ಳುತ್ತಾರೆ. ಆದಷ್ಟು ಹೆಚ್ಚು ಲಾಭ ಪಡೆಯುವುದಕ್ಕೆ ಅವರು ಪ್ರಯತ್ನಮಾಡುತ್ತಾರೆ ನಮಗೆ ದೊರೆಯಬೇಕಾದ ನೀರನ್ನು ನಾವು ಕೇಳೋಣ ಮತ್ತು ಪಡೆಯುವದಕ್ಕೆ ಪ್ರಯತ್ನಮಾಡೋಣ. ನಾವು ಇಲ್ಲಿ ಕೊಡುವ ಅಂಕಿ ಅಂಶಗಳಿಗೂ, ಮಾತುಗಳಿಗೂ ಜನ ಬೆಲೆಕೊಡುತ್ತಾರೆ. ನಮ್ಮ ಮಾತುಗಳನ್ನು ಜನ ಕೇಳುತ್ತಾರೆ. ಆದುದರಿಂದ ನಾವು ಈ ರೀತಿ ಅಂಕಿ ಅಂಶಗಳನ್ನು ಕೊಡುವುದರಲ್ಲಿ ಎಚ್ಚರಿಕೆಯಿಂದ ಇರಬೇಕು. ಇದಲ್ಲದೆ 15 T.M.C. ನೀರು ಮದ್ರಾಸ್ ನಗರಕ್ಕೆ ಕುಡಿಯುವ ನೀರಿಗಾಗಿ ಕೊಡುತ್ತೇವೆ ಎಂಬುದನ್ನು ಹೇಳಿ ಕೆಲವು ಮಾನ್ಯ ಸದಸ್ಯರು ಲೆಕ್ಕ ಹಾಕಿದರು. ಪ್ರತಿಯೊಬ್ಬರೂ ಈ ಮಾತನ್ನು ಹೇಳಿ ನಾವು 15 T.M.C. ನೀರು ಕೊಡುತ್ತೇವೆಂಬುದನ್ನು ಸಿದ್ಧಮಾಡುವುದಕ್ಕೆ ಹೊರಟಿದ್ದಾರೆ. ನಾವೇ ಇದನ್ನು ಈ ರೀತಿ ಸಿದ್ಧಮಾಡಲು ಹೊರಟಿದ್ದೇವೆ ನಮ್ಮ ಕೈಕಟ್ಟಿಹಾಕಲು ನಮ್ಮವರೇ ಪ್ರಯತ್ನಮಾಡುತ್ತಿದ್ದಾರೆ ; ಇದು ಸರಿಯಲ್ಲ.

Sri S. M. KRISNA (Maddur).—Is it not a fact that the Chief Minister has assured that 15 T M.C. ft. will be given ?

ಶ್ರೀ ವೀರೇಂದ್ರ ಪಾಟೀಲ್.—ಈ ಮಾತನ್ನು ನಾನು ಏತಕ್ಕೆ ಹೇಳುತ್ತೇನೆಂದರೆ ಇದರಿಂದ ನಮಗೆ ಪೊಡೆತ ಬೀಳುತ್ತದೆ. ನಿಜವಲ್ಲದ ಮಾತನ್ನು ಹತ್ತು ಸಲ ನಿಜವೆಂದು ಎಲ್ಲರೂ ಹೇಳಿದರೆ ಅದು ನಿಜ ಆಗುತ್ತದೆ. ಈ ಉದಾಹರಣೆ ನಮ್ಮ ಮುಂದೆ ಇಟ್ಟುಕೊಳ್ಳೋಣ. 15 T.M.C. ನೀರು ಕೊಡುವ ವಾಗ್ದಾನ ಮಾಡಿದ್ದೇವೆಂದು ಪುನಃ ಪುನಃ ಅದನ್ನೇ ಹೇಳಿದರೆ ಅದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು, ಎಲ್ಲಿಂದ ಕೊಡಬೇಕು, ಯಾರು ಕೊಡಬೇಕು ಎಂದು ಕೇಂದ್ರದವರು ಹೇಳುತ್ತಾ ಇಲ್ಲ. ಅವರು ನಮ್ಮ ಕೈ ಕಟ್ಟುತ್ತಾ ಇಲ್ಲ, ಆದರೆ ನಮ್ಮವರೇ ಕೈ ಕಟ್ಟುತ್ತಿದ್ದೀರಿ. ಮುಖ್ಯ ಮಂತ್ರಿಗಳ ಹೇಳಿಕೆಯಲ್ಲಿ ಅಧಿಕೃತವಾಗಿ ನಾವೇ ನೀರು ಕೊಡುತ್ತೇವೆಂದು ವಾಗ್ದಾನಮಾಡಿಲ್ಲ.

The Union Minister for Irrigation and Power says :—

> "I was happy to know during the course of my discussions that all the States concerned were very sympathetic to the requirements of Madras for drinking water and readily agreed to provide 15 TMC ft. from Krishna. All the States concerned readily agreed to give 15 TMC ft."

ಆದರ ಅರ್ಥ ಒಬ್ಬೊಬ್ಬರೂ 15 TMC ಕೊಡಬೇಕು ಅನ್ನುವುದು ಅಲ್ಲ, ಮುಂದೆ ಅದನ್ನು ಹೇಗೆ ತೆಗೆದುಕೊಳ್ಳಬೇಕು ಅನ್ನುವುದನ್ನೂ ಹೇಳಿಲ್ಲ. ಈ 15 TMC ಯನ್ನು ಎಲ್ಲಿಂದ ಒಯ್ಯಬೇಕು? ಯಾವ ಪಾಯಿಂಟಿನಿಂದ ಒಯ್ಯಬೇಕು, ಅನ್ನುವುದನ್ನು ಹೇಳುವುದಕ್ಕೆ ಅವರಿಗೂ ಸಾಧ್ಯವಾಗಿಲ್ಲ. ಕುಡಿಯುವುದಕ್ಕೆ ನೀರು ಬೇಕು ಅಂತ ಹೇಳಿದರು. ಅದಕ್ಕೆ ಅಡ್ಡಿ ಬರುವುದಿಲ್ಲ ಅನ್ನುವುದನ್ನು ಸ್ಪಷ್ಟ ಮಾಡಿದ್ದೇವೆ. ಹೋದ ಸಲವೂ ಇದನ್ನು ಹೇಳಿದ್ದೇನೆ. ಕಾವೇರಿ ಬ್ಲೂಪ್ರಿಂಟ್ ಮಾಡಿ ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗಿ, ಕಾವೇರಿಯಿಂದ 60 million gallons per day ನಾವು ಎಳೆಯುತ್ತೇವೆ ಎಂದು ಹೇಳುವುದರಲ್ಲಿ ಎಲ್ಲಿಯೂ ಇದರ ಚಕಾರ ಶಬ್ದ ಬಂದಿಲ್ಲ. ನಾವು 5 TMC ಎಳೆಯುತ್ತಾ ಇದ್ದೇವೆ, ಕಾವೇರಿ ಸ್ಕೀಮ್ ಸಲುವಾಗಿ 15 TMC ನಮ್ಮ ಬಾರ್ಡರ್‌ನಿಂದ ಮದ್ರಾಸ್ ಬಾರ್ಡರಿಗೆ ಹೋಗಬೇಕೆಂದು ಅವರು ಕೇಳುತ್ತಾರೆ ಅನ್ನುವುದೂ ಇಲ್ಲ. ಮದ್ರಾಸಿನ

ವರಿಗೆ ಕುಡಿಯುವ ನೀರು ಬೇಕು ಎಂದು ಕೇಳಿದಾಗ, ಅವರ nearest point ಎಲ್ಲಿ ಎಂದು ನೋಡಬೇಕಾಗುತ್ತದೆ. ಅವರು ಕೃಷ್ಣಾನದಿಯ ನೀರೇ ಬೇಕೆಂದು ಕೇಳಿಲ್ಲ. ಅವರಿಗೆ ನೀರು ಎಲ್ಲಿಂದಲಾದರೂ ಸಿಕ್ಕಿದರೆ ಆಯಿತು ಎಂದು ನಾನು ತಿಳಿದುಕೊಂಡಿದ್ದೇನೆ. ಕುಡಿಯುವ ನೀರಿಗೆ ಅಡ್ಡಿ ಬರುವುದಿಲ್ಲ ಅನ್ನುವುದು ಮಾತ್ರ ತಿಳಿಸಿದ್ದೇವೆ. ಪದೇ ಪದೇ 15 TMC—15 TMC ಅಂತ ಜಪ ಮಾಡಿ ನಮ್ಮ ಕೈ ಕಟ್ಟಿಸುವ ಹಾಗೆ ಇಲ್ಲ. ನೀರು ಕೊಡಲು ಇನ್ನೂ ಯಾರೂ ಸ್ಪಷ್ಟವಾಗಿ ಹೇಳಿಲ್ಲ.

Sri GANJI VEERAPPA (Harihar).—It is stated that all the States have agreed. Perhaps they may mean all the three States have to share in it.

ಶ್ರೀ ವೀರೇಂದ್ರ ಪಾಟಿಲ್.—ಅದು clear ಆಗಿದೆ—all the three have to share. ಶ್ರೀ ಸಂಜೀವರೆಡ್ಡಿಯವರು ಮಹಾರಾಷ್ಟ್ರ 5 TMC, ಮೈಸೂರಿನವರು 5 TMC, ಅವರು 5 TMC ಕೊಡಬೇಕು ಎಂದು ಅಸೆಂಬ್ಲಿಯಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ವಿಚಾರ ಮೂರು ರಾಜ್ಯಗಳಿಗೆ ಸೇರಿದ್ದರೂ, ನಾವು 15 TMC ಕೊಡುತ್ತೇವೆಂದು ವಾದ ಮಾಡುತ್ತಾ ಇದ್ದಾರೆ.

ಈಗ ಇನ್ನೊಂದು ವಿಷಯವನ್ನು ಶ್ರೀ ಗೋಪಾಲಗೌಡರು ಹೇಳಿದರು. ನಮ್ಮ ಹತ್ತಿರ ಡೇಟಾ ಇಲ್ಲ ಎಂದು ಅಪಾದಿಸಿದರು. "ನಮ್ಮನ್ನೆಲ್ಲಾ ಕತ್ತಲನಲ್ಲಿ ಇಟ್ಟಿದ್ದರು, ಈಗ ಸರ್ಕಾರದ ಹತ್ತಿರ ಅಂಕಿಅಂಶವಿಲ್ಲವೆಂಬುದು ಹೊರಬೀಳುತ್ತಿದೆ" ಎಂದು ಹೇಳಿ, "ಇದುವರೆಗೆ ಏನು ಮಾಡುತ್ತಾ ಇದ್ದಿರಿ, ಏಕೆ ಡೇಟಾ ಕಲೆಕ್ಟ್ ಮಾಡಲಿಲ್ಲ" ಎಂದು ಪ್ರಶ್ನಿಸಿದರು. ಗುಲ್ಹಾಟಿ ಕಮಿಷನ್ನಿನವರು ನಮ್ಮ 50 ವರ್ಷದಿಂದ ಖಚಿತವಾಗಿ ವಾಟರ್ ಡಿಸ್‌ಚಾರ್ಜ್ ಬಗ್ಗೆ ಅಂಕಿಅಂಶ ಬೇಕೆಂದು ಕೇಳಿದರು. ನಾನು ಒಪ್ಪುತ್ತೇನೆ—ನಮ್ಮ ಹತ್ತಿರ insufficient data ಇದೆ. ನಮ್ಮಲ್ಲಿಯೇ ಅಲ್ಲ, ಮಹಾರಾಷ್ಟ್ರದಲ್ಲಿ ಮತ್ತು ಆಂಧ್ರದಲ್ಲಿಯೂ ಅದೇ ಸಂದರ್ಭವಿದೆ. ಅಲ್ಲಿಯೂ ಅಗತ್ಯವಾದ ಎಲ್ಲ ಅಂಕಿ ಅಂಶ ಸಿಕ್ಕುವುದಿಲ್ಲ. ಅದಕ್ಕೋಸ್ಕರವೇ ಕೇಂದ್ರ ಸರ್ಕಾರದವರು ಒಂದು ಮೆಷಿನರಿ ಎಸ್ಟಾಬ್ಲಿಷ್ ಮಾಡುತ್ತಾ ಇದ್ದಾರೆ. ಕರೆಕ್ಟ್ ಗೇಜ್ ಮಾಡಿ ಒಂದು ಸೈಂಟಿಫಿಕ್ ಮೆಥೆಡ್ಡಿನಲ್ಲಿ, yield ಅಸೆಸ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ.

ಈಗ ಕೇಂದ್ರ ಸರ್ಕಾರದವರೂ ಒಪ್ಪಿಕೊಂಡಿದ್ದಾರೆ.

Sri Hafiz Mohamed Ibrahim, Union Minister for Irrigation and Power has said :

"The Commission have drawn specific attention to the fact that in the entire Krishna basin and in the upper part of the Godavari Valley, water is a scarce natural resource."

ಅಂದರೆ ನೀರು ಸಾಕಷ್ಟು ಇಲ್ಲವೆಂದು ಕಮಿಷನ್ನಿನವರು ಹೇಳಿದ್ದಾರೆ, ಅವರೂ ಒಪ್ಪಿಕೊಂಡಿದ್ದಾರೆ. ಅಂದ ಮೇಲೆ ಎಲ್ಲಿ ನೀರು ಇಲ್ಲ ಅಲ್ಲಿ ನೀರನ್ನು ಎಷ್ಟು ಉಳಿಸುವುದಕ್ಕೆ ಸಾಧ್ಯವೋ ಅಷ್ಟನ್ನೂ ಉಳಿಸಿಕೊಳ್ಳಲು ಪ್ರಯತ್ನ ಮಾಡಬೇಕು. ನೀರು ಎಲ್ಲಿದೆಯೋ ಅಲ್ಲಿಗೇ ಬಿಟ್ಟುಬಿಟ್ಟರೆ, ಸ್ಕೇರ್ಸಿಟಿ ಏರಿಯಾಗಳು ಯಾವಾಗಲೂ ಇರುತ್ತವೆ. Scarcity areaಗೆ ಪ್ರಯಾರಿಟಿ ಕೊಡಬೇಕು. ಅದರ ಸಲುವಾಗಿ ಈಗ ಮೊದಲು ಅಪ್ಪರ್ ಗೋದಾವರಿ ಮತ್ತು ಅಪ್ಪರ್ ಕೃಷ್ಣ ನೀರನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಅವರೂ ಸಹಾಯ ಮಾಡಬೇಕು. ನಾನು ಸ್ಟೇಟ್‌ಮೆಂಟ್ ಓದಿದ ಕೂಡಲೆ ನನಗೆ ಅನ್ನಿಸಿತು, ನಮ್ಮ ಮೈಸೂರಿಗೆ ಬಹಳ ಹಾನಿ ಆಗಿದೆ ಎಂದು. ನಾಗಾರ್ಜುನ ಸಾಗರ ಸೆಕೆಂಡ್ ಸ್ಟೇಜಿಗೆ ಪರ್ಮಿಷನ್ ಕೊಡಬಾರದು. ಕ್ಲಿಯರೆನ್ಸ್ ಕೊಡಬಾರದು, ಶ್ರೀ ಶೈಲಂ ಯೋಜನೆಗೆ ನಾವು ಒಪ್ಪುವುದಕ್ಕಾಗುವುದಿಲ್ಲ ಅಂತ ಹೇಳಿದ್ದೆವು. ಅವರು ಈ ಎರಡು ಮಾತುಗಳನ್ನೂ ಒಪ್ಪಿಕೊಂಡಿದ್ದಾರು. ಪ್ರಿಲಿಮಿನರಿ ರಿಪೋರ್ಟ್ ಪ್ರಕಾರ ಎಷ್ಟು ನೀರು ಬರುತ್ತದೆ ಎಂದು ನೋಡಿಕೊಂಡೆವು. ನೋಡಿಕೊಂಡ ಮೇಲೆ ನಾವು ನಮ್ಮ ನಿಲುವನ್ನು ಸ್ಪಷ್ಟ ಮಾಡಿದೆವು. ಶ್ರೀಶೈಲಂ ಯೋಜನೆಯನ್ನು ಮಾಡಿಫೈ ಮಾಡುತ್ತಾರೆಂದು ನಾನು ತಿಳಿದುಕೊಂಡೆ. ಅವರು 264 TMC ಬೇಸಿಸ್ ಹಿಡಿದುಕೊಂಡಿದ್ದಾರೆ. ಬಹುಶಃ ಬಹಳ ಚತುರತೆಯಿಂದ ಈ 264ರ ಫಿಗರ್ ಹಾಕಿದ್ದಾರೆ. ಏಕೆಂದರೆ ಇತ್ತೀಚೆಗೆ ಆಂಧ್ರದವರು ಒಂದು ವಾದ ಹೂಡಿದ್ದಾರೆ.

ಅದೇನೆಂದರೆ ನಾಗಾರ್ಜುನ ಸಾಗರಕ್ಕೆ ಫೇಸೆಸ್ ಇಲ್ಲ, ಸ್ಟೇಜಸ್ ಇಲ್ಲ ಅನ್ನುವುದು. Nagarjuna sagar is one stage ಎಂದು ಹೇಳುತ್ತಾರೆ. ಆದರೆ 264 TMC ಮೈನಸ್ ಗೋದಾವರಿ ಡೈವರ್ಷನ್—ಇಷ್ಟು ನೀರು ಬರುತ್ತದೆ. ಗೋದಾವರಿ ನೀರಿನಿಂದ ನಾಗಾರ್ಜುನ ಸಾಗರದ 50 ಪರ್ಸೆಂಟ್ ಕಮ್ಯಾಂಡ್ ಏರಿಯಾ ಇರ್ರಿಗೇಟ್ ಮಾಡಬಹುದು. 264ನ್ನು ಅರ್ಧ ಮಾಡಿ

(ಶ್ರೀ ವೀರೇಂದ್ರ ಪಾಟೀಲ್)

ದರೆ 132 ಉಳಿಯುತ್ತದೆ; ಇದರಲ್ಲಿ minus, (yield between Sri Saila and Nagarjun sagar Dam) 30 ಬರಬಹುದು. ಅಂದರೆ 102 ರಲ್ಲಿ ಕೊಳ್ಳುವುದಕ್ಕೆ ಪರ್ಮಿಷನ್ ಕೊಡಬಹುದು ಅಂದಾಗ ನನಗೆ ಸಮಾಧಾನವಾಯಿತು. ಇದನ್ನು ಸ್ಪಷ್ಟಮಾಡಿದ್ದೇನೆ. ಈಗ ಎಲ್ಲರಿಗೂ ತಾನೇ ತಾನಾಗಿ ಕ್ಲಿಯರೆನ್ಸ್ ಸಿಕ್ಕಿ ಹೋಯಿತು. ಕೇಂದ್ರ ಮಂತ್ರಿಗಳ ಸ್ಟೇಟ್‌ಮೆಂಟಿನಲ್ಲಿ ಹೀಗಿದೆ:

"I consider that the projects mentioned below in the various States should be cleared, subject of course to such technical examination and scrutiny as are normally carried out by the Central Water and Power Commission and the Planning Commission."

ನನಗೆ ಏನು ಒಂದು ಸಮಾಧಾನವಾಯಿತು ಅಂದರೆ Modified Sri Sailam Projectಗೆ ಡೈರೆಕ್ಟಿವ್ ಕೊಟ್ಟಿದ್ದಾರೆ. ಈ ರೀತಿ ಶ್ರೀಶೈಲಂ ಪ್ರಾಜೆಕ್ಟಿಗೆ ಕೊಡುವುದಕ್ಕೆ ಅಭ್ಯಂತರವಿಲ್ಲ. PWD ಕ್ಲಿಯರೆನ್ಸ್ ಕೊಡುವುದಕ್ಕೆ ಮುಂಚೆ 102 ರಿಸರ್ವಾಯರ್ ಸಲುವಾಗಿ ಕೊಡುತ್ತಾರೆಂದು ನಾವು ಸಮಾಧಾನಪಟ್ಟುಕೊಂಡಿದ್ದೆವು. ಈಗ ಏನಾಗಿದೆಯೆಂದರೆ ಅವರಿಗೆ 800 TMC Krishna flows ನಿಂದ ಕೊಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಬಸಪ್ಪನವರು ಹೇಳಿದ ಹಾಗೆ ಮಹಾರಾಷ್ಟ್ರ ಸಬ್ ಬೇಸಿನ್‌ದು 725 TMC ಈಲ್ಡ್ ಇದೆ. ನಮ್ಮ ಸಬ್ ಬೇಸಿನ್ ಕ್ಯಾಚ್‌ಮೆಂಟ್ ಏರಿಯಾದು 690 TMC ಈಲ್ಡ್ ಇದೆ; ಆಂಧ್ರದಲ್ಲಿ 335 TMC ಸಬ್ ಬೇಸಿನ್ ಈಲ್ಡ್ ಇದೆ. ಈಗಿನ ಕೇಂದ್ರದ ಆದೇಶದಂತೆ ಕೃಷ್ಣಾ ನದಿಯಲ್ಲಿ 800 TMC ನೀರನ್ನು ಆಂಧ್ರತೆಗೆದುಕೊಳ್ಳಬಹುದು. ಈ ಅಂದಾಜಿನ ಮೇಲೆ ನಮ್ಮ ರಾಜ್ಯದ ಗಡಿ ಮೇಲೆ 800—335 = 465 TMC ನೀರನ್ನು ಅವರು ಎಳೆಯಬಹುದು. ಈಗ 388 TMC ನೀರನ್ನು ಅವರು ಎಳೆಯಬಹುದೆಂದು. ಈಗ 465 TMC ಶ್ರೀ ಶೈಲಮ್ಮಿಗೆ ಹೋಗಬಹುದು. ಆದರೆ ಈಗ ಇಂಡೈರೆಕ್ಟಾಗಿ ಗ್ಯಾರಂಟಿ ಮಾಡಿದ್ದಾರೆ. ಇದರಲ್ಲಿಂದ 102—465 TMC ನೀರು ಶ್ರೀ ಶೈಲಾ ಯೋಜನೆ ಮುಖಾಂತರವೇ ನಾಗಾರ್ಜುನ ಸಾಗರಕ್ಕೆ ಹೋಗುವುದು. ಹೀಗಿರುವಾಗ ಆಂಧ್ರ ಸರ್ಕಾರದವರು 465—102 =363 TMCಯನ್ನು ಶ್ರೀ ಶೈಲಮ್ಮನಲ್ಲಿ ಸ್ಟೋರ್ ಮಾಡಿ, ಸಂಗಮೇಶ್ವರ ಟನಲ್ ಮತ್ತು ಸೋಮ ಶೀಲ ರಿಜರ್ವಾಯರ್ ಹಾಕಿಕೊಂಡು, ಅವುಗಳ ಮುಖಾಂತರ ನೆಲ್ಲೂರು ಇರ್ರಿಗೇಟ್ ಮಾಡುವ ವಿಚಾರ ಇಟ್ಟುಕೊಂಡಿದ್ದಾರೆ. ಅದನ್ನು ಕೇಂದ್ರ ಸರ್ಕಾರದವರು ಸಮರ್ಥನೆ ಮಾಡಿದ್ದಾರೆ. ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ನಾವು ಹೇಳಿದ್ದೇವೆ; ಮುಂದೆ ಹೇಳುವುದಕ್ಕೂ ತಯಾರು ಇದ್ದೇವೆ. ಈ ಮಾತನ್ನು ಏಕೆ ಹೇಳುತ್ತಾ ಇದ್ದೇನೆಂದರೆ, "ನೀವು ಬನ್ನಿ, 1976 ರಲ್ಲಿ ನಿಮಗೆ ಬೇಕಾದಷ್ಟು ನೀರು ಕೊಡುತ್ತೇವೆ" ಎಂಬ ಮಾತನ್ನು ಹೇಳಿದ್ದಾರೆ. ಈ ಮಾತನ್ನು ನೋಡಿ:

"I am advised by my technical experts that there will still be sizeable supplies available in the two river systems to accommodate the requirements of suitable irrigation and power projects of the various States in the subsequent Plans"

ಅವರ ಜೇಬಿನಲ್ಲಿ ಎಷ್ಟು ಇದೆ ಎಂಬುದನ್ನು ನೋಡಬೇಕು. ಒಂದು ಸಾವಿರದ ಎಂಟು ನೂರು ಟಿ.ಎಂ.ಸಿ. ಫೀಟ್ ನೀರು ಬುಕ್ ಮಾಡಿದ್ದಾರೆ. ಕೃಷ್ಣಾ ನದಿಯಲ್ಲಿ ಗುಲ್ಹಾಟಿ ಕಮೀಷನ್ ಅವರು ಸಬ್‌ವೇಸ್ ಈಲ್ಡ್ ತೆಗೆದಿದ್ದಾರೆ. ಅದನ್ನು ಲೆಕ್ಕಹಾಕಿದರೆ 2,217 ಟಿ.ಎಂ.ಸಿ.ಫೀಟ್. ಬರುತ್ತದೆ. ಈಗ ಅವರು ನಮಗೆ 1976ಕ್ಕೆ ನಮ್ಮ ಹತ್ತಿರ ಬನ್ನಿ ಎಂದು ಹೇಳಿದ್ದಾರೆ. ಹೋದಾಗ ಏನು ಸಿಗುತ್ತವೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಒಂದು ಸಾವಿರದ ಎಂಟು ನೂರು ಟಿ. ಎಂ. ಸಿ. ಫೀಟ್. ಹಂಚಿದರೆ ಕೃಷ್ಣಾನದಿಯಲ್ಲಿ ಉಳಿಯುವುದು ಏನು? ಆದ್ದರಿಂದ ಇವತ್ತಿನ ದಿವಸ 300 ಅಥವಾ 350 ಟಿ. ಎಂ. ಸಿ. ಫೀಟ್ ನೀರು ಇಟ್ಟುಕೊಂಡು ಬೇಕಾದಷ್ಟು ನೀರು ಕೊಡುತ್ತೇವೆ ಬನ್ನಿ ಎಂದು ಹೇಳುತ್ತಿರುವುದನ್ನು ನೋಡಿದರೆ ಸಂಶಯ ಬರುತ್ತಾ ಇದೆ. ಇದು ಸ್ಪಷ್ಟವಾಗಬೇಕು. ಶ್ರೀಶೈಲದ ಮಾಡಿಫಿಕೇಷನ್ ಅರ್ಥ ಏನಾಗುತ್ತದೆ? ನಾವು ಲೆಕ್ಕಾಚಾರ ಹಾಕಿದ ವರ್ಷದಲ್ಲಿ ಅವರಲ್ಲಿರುವಷ್ಟು ನೀರನ್ನು ಹಂಚುವುದಕ್ಕೆ ಆಗಬಾರದು. ಅಪಾರ್ಥವಾಗುತ್ತದೆ.

ಮುಂದೆ ಬನ್ನಿ ಕೊಡುತ್ತೇವೆ ಎಂದು ಆಶ್ವಾಸನೆ ಕೊಡುತ್ತಾರೆ. ಏನು ಕೊಡುವವರು ಎಂದು ಕೇಳಬೇಕಾಗುತ್ತದೆ ? ಇದರಲ್ಲಿ ಈ ರೀತಿ ಹೇಳಿದ್ದಾರೆ:—

6-00 P.M.

"There is a clear case, however, for scarcity areas to be given a preference provided they are, generally speaking, within easy and economical reach of irrigation. On this ground, Mysore has pressed for their Upper Krishna Stage-II, the Bhima Irrigation Project and the Bijapur Lift Irrigation Scheme for the scarcity areas in Bijapur and the neighbourhood. I am sure that these schemes will be considered sympathetically after their project reports are available."

Scarcit condition ಇದೆ, ಒಪ್ಪುತ್ತೇವೆ. ಈ ಮೂರು ಪ್ರಾಜೆಕ್ಟ್‌ಗಳಿಗೂ sympathetic consideration ಕೊಡುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳುತ್ತಾರೆ. ಇದಕ್ಕೆ ಎಷ್ಟು ಬೇಕು ಎಂದು ಲೆಕ್ಕಹಾಕಬೇಕು. ಇದಕ್ಕೆ ಅಪ್ಪರ್ ಕೃಷ್ಣಾಕ್ಕೆ 116 ಟಿ. ಎಂ. ಸಿ. ಫೀಟ್. ಭೀಮಾ ಪಾಜೆಕ್ಟ್‌ಗೆ 32 ಟಿ. ಎಂ. ಸಿ. ಫೀಟ್. ಬಿಜಾಪುರ left irrigation projectಗೆ 130 ಟಿ. ಎಂ. ಸಿ. ಫೀಟ್. ಈ ಪ್ರಕಾರ ನಮಗೆ 278 ಟಿ. ಎಂ. ಸಿ. ಫೀಟ್. ಬೇಕು.

Sri GANJI VEERAPPA.—After the projects are over, there is no clear case for more water ಎಂದರೆ 1976ರವರೆಗೂ wait ಮಾಡಬೇಕೇ ? ಅದು ಅರ್ಥವಾಗಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ವಿವರಣೆ ಕೇಳುತ್ತೇವೆ. ಅದೂ ಅಲ್ಲದೆ 5ನೇ ಪ್ಲಾನ್ ಮುಗಿಯುವವರೆಗೂ ಎಷ್ಟು ಪ್ರಾಜೆಕ್ಟುಗಳಿಗೆ ಎಷ್ಟು ನೀರು ಬೇಕೆಂಬುದನ್ನು ಸಿದ್ಧಮಾಡಿದ್ದಾರೆ. ಈಗಾಗಲೇ ಪ್ರಾರಂಭವಾಗಿರುವ ಕೆಲಸಗಳು ಪೂರೈಸುವವರೆಗೂ 5th plan ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎಂದ ಮೇಲೆ 6th, 7th, 8th planಗಳ ವಿಚಾರ ಏನು ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

Sri S. M. KRISHNA.—Is it also not a fact that we have revised the first phase of Upper Krishna project, that according to the revised estimates of Upper Krishna, we need 170 T.M.C. of water ?

Sri VEERENDRA PATIL.—It is about 110. 278 ಟಿ. ಎಂ. ಸಿ. ಫೀಟ್ ನೀರು ಈ ಪ್ರಾಜೆಕ್ಟುಗಳಿಗೆ ಕೊಡಬಹುದು. Sympathertic ಆಗಿ condition ಮಾಡಿಕೊಡುತ್ತೇವೆ ಎಂದು ಬರೆದಿದ್ದಾರೆ. ಅಷ್ಯೂರೆನ್ಸ್ ಕೊಟ್ಟಿದ್ದಾರೆ. ಅವರ ಹತ್ತಿರ 300 ಟಿ. ಎಂ. ಸಿ. ಫೀಟ್ ಇದ್ದಾಗ ನಮಗೂ ಬನ್ನಿ ಎಂದು ಹೇಳುತ್ತಾರೆ. ಆಂಧ್ರದವರಿಗೂ ಬನ್ನಿ ಎಂದು ಅನ್ನುತ್ತಾರೆ. Accommodate ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತು ಈಗ ಬರಬೇಕು. ಆದರೆ ಆ ರೀತಿ ಬರದೇ sympathetic consideration ಮಾಡುತ್ತೇವೆ ಎನ್ನುವ ಮಾತು ಹೇಳುತ್ತಾರೆ. ಅವರು ಆ ರೀತಿ ಹೇಳಿದರೂ ಕೂಡ ಪ್ರಶ್ನೆ ಬರುವುದು ಏನೆಂದರೆ ಅವರ ಹತ್ತಿರ 300-350 ಟಿ. ಎಂ. ಸಿ. ಫೀಟ್ ಇಟ್ಟುಕೊಂಡು 278 ಟಿ. ಎಂ. ಸಿ. ನಮಗೆ ಕೊಟ್ಟಮೇಲೆ ಏನು ಉಳಿಕೆಯವರಿಗೆ ಕೊಡುತ್ತಾರೆ ಎನ್ನುವ ಸಂಶಯ ಬರುತ್ತದೆ. ಗೋದಾವರಿಯಿಂದ ರಿಲೀಸ್ ಆಗುವ ನೀರನ್ನು ಇಟ್ಟುಕೊಂಡಿಲ್ಲ. ಎಂಟು ನೂರು ಟಿ.ಎಂ.ಸಿ. ಆಂಧ್ರದವರಿಗೆ ಕೊಡುತ್ತಾರೆ ಎಂದ ಮೇಲೆ ಏನು ಉಳಿಯುತ್ತದೆ ಎಂದು ಪರಿಶೀಲನೆ ಮಾಡಬೇಕಾಗಿದೆ. ಈ ವಿಷಯದಲ್ಲಿ ವಿವರಣೆ ಕೇಳಬೇಕಾಗಿದೆ. ನಾಳೆ ದಿವಸ ಬಿಜಾಪುರ ಲಿಫ್ಟ್ ಇರಿಗೇಷನ್‌ಗೆ ನೀರು ಕೊಡುವುದು extra ಆಗುತ್ತದೆ. ಬೇಡ ಎಂದರೆ ಏನು ಮಾಡುವುದು. ಆದ್ದರಿಂದ ಈ ವಿಚಾರದಲ್ಲಿ ಗ್ಯಾರಂಟಿ ಹೇಳಬೇಕಾಗಿದೆ. ಈಗ ಏನಾಗಿದೆ ಎಂದರೆ ಜಡ್ಜ್‌ಮೆಂಟ್ ಬರೆದದ್ದು ಆಯಿತು. ಕೊನೆಯವರೆಗೂ ವಾದ ಮಾಡಿಕೊಂಡು ಬಂದು ನಾವು ಒಪ್ಪಿದ್ದೇವೆ. ನೀವು ಒಪ್ಪಿದ್ದೀರಿ ಎಂದು ಹೇಳಿ ಕೊನೆಯಲ್ಲಿ ಎರಡು ಕಂಡೀಷನ್ ಪೂರ್ಣವಾಗಲಿಲ್ಲ, ಆದ್ದರಿಂದ ಕೊಡುವುದಕ್ಕಾಗುವುದಿಲ್ಲ ಎಂದರೆ ಮತ್ತೆ ಎಲ್ಲ ಕೆಲಸಗಳೂ ನಿಂತುಹೋಗುತ್ತದೆ. ಆದ್ದರಿಂದ econmically safe ಎಂದು prove ಮಾಡಬೇಕು ಎಂದು clear ಆಗಿ ಹೇಳಿದ್ದೇವೆ. ಅವರೂ ಹೇಳಿದ್ದಾರೆ. ಅಪ್ಪರ್ ಕೃಷ್ಣ ಸ್ಟೇಜ್ ಎರಡು ಭೀಮಾ ಪ್ರಾಜೆಕ್ಟು ಎರಡು ಇನ್ನೊಂದು ಬಿಜಾಪುರ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ಇವುಗಳಲ್ಲದೆ ಅನೇಕ ಮೀಡಿಯಂ ಮತ್ತು

(ಶ್ರೀ ವೀರೇಂದ್ರ ಪಾಟೀಲ್)

ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳು ಇವೆ ಎಂದು ಹೇಳಿದ್ದಾರೆ. ಇದಕ್ಕೆಲ್ಲಾ ವಿಚಾರ ಮಾಡಿತ್ತೀವೆ ಎನ್ನುವಂಥಹದು ಬರೆಯಬಹುದಾಗಿತ್ತೇ. ಅಥವಾ ಈ ಮೂರರ ಬಗ್ಗೆ ಮಾತ್ರ ಬರೆದಿದ್ದಾರೆಯೇ ಎಂದು ಸಂಶಯ ಬರುತ್ತದೆ. ಈ ಬಗ್ಗೆ ವಿವರಣೆ ಕೇಳಬೇಕಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಇಂಡಿಯಾ ಸರ್ಕಾರದ ಇರಿಗೇಷನ್ ಮಿನಿಸ್ಟರ್ ಹಫೀಜ್ ಮಹಮದ್ ಇಬ್ರಾಹಿಂ ಅವರು ಇದು firm decision ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದಕ್ಕೇನು ಹೇಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಏನು ಹೇಳಲಿ, ಬಿಡಲಿ, ಒಪ್ಪುವುದು ಬಿಡುವುದು ನಮಗೆ ಸೇರಿದ್ದು ಇದೆಯಲ್ಲಾ! ಈಗ್ಗೆ ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿದರು. 86% dependability ಗಣನೆಗೆ ತೆಗೆದುಕೊಂಡಿದ್ದರೆ ಕಡಿಮೆ ಯಾಗುತ್ತಿತ್ತು. 75 % dependability ತೆಗೆದುಕೊಂಡಿದ್ದರೂ ಕೂಡ ಕಡಮೆ ಮಾಡಿದ್ದಾರೆ. ಅಥವಾ ಹೆಚ್ಚಾಗಿಲ್ಲ ಎಂದು ಹೇಳಿದರು. ಆ ರೀತಿಯಿಂದ ಅಲ್ಲ 75.1 dependability ಯಾವುದರ ಸಲುವಾಗಿ ಎಂಬುದನ್ನು ತಮ್ಮ statement ನಲ್ಲಿ ಅವರು ಹೇಳಿದ್ದಾರೆ.—

"In the matter of availability of supplies from a overall consideration, the criterion based on 75 per cent dependability has been found suitable and for the purpose of projects that were under contemplation, this criterion of dependability may be adopted."

ಇದರ ಮೇಲೆ ನೀರು ಎಷ್ಟಿದೆ ಎಂಬ ಲೆಕ್ಕ ಹೇಳಿಲ್ಲ. ಇನ್ನು 300 ಅಥವಾ 400 T.M.C.ft. ಇರಬಹುದಾದರೆ, ಒಟ್ಟು 2,200 T.M.C ಆಗುತ್ತದೆ. ಆ ಮಾತು ಅವರು ಹೇಳಿಲ್ಲ. ಆಂಧ್ರದವರು 86% 2,200ರಿಂದ dependability ಬೇಕು ಎಂದು ಹೇಳುತ್ತಾರೆ. ಏಕೆಂದರೆ, ಅದರಿಂದ ನಮ್ಮ ಸ್ಟೋರೇಜ್ capacity ಕಡಿಮೆಯಾಗುತ್ತದೆ. ಉಳಿದ ನೀರು ತಾನಾಗಿಯೇ ಹರಿದು ಆಂಧ್ರಕ್ಕೆ ಬರುತ್ತದೆ ಎಂದು. ಅಲ್ಲೂ 75% ಅಂತ ಮಾಡಿ ಸ್ಟೋರೇಜ್ ಮಾಡಿದ್ದರೆ ಪರವಾಗಿರಲಿಲ್ಲ. ಚೆನ್ನಾಗಿರುತ್ತಿತ್ತು. ಆಗಲೂ ಒಂದು ಪಕ್ಷ ನೀರು ಬರದೆ ಇದ್ದಿದ್ದರೆ ನಮ್ಮ ಹಣೇಬರಹ ಎಂದು ತಿಳಿದುಕೊಳ್ಳಬಹುದಾಗಿತ್ತು. ಕಡಮೆ ತೆಗೆದುಕೊಂಡ ಇಷ್ಟರಲ್ಲೇ ಸಂತೃಪ್ತರಾಗುವುದು ಬೇಡ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಇನ್ನೊಂದು ಮಾತು ನ್ಯಾಯವಾಗಿದೆ. ಟ್ರೈಬ್ಯೂನಲ್‌ಗೆ ಹೋಗಬೇಕು. ಹೋಗುವುದು ಬಹಳ ಅವಶ್ಯಕ. ಈಗ ಏನು ಮಾಡಬೇಡಿ ಎಂದು ಹೇಳಿದರು. ಅವನ್ನು ಪರಿಶೀಲನೆ ಮಾಡಬೇಕಾಗಿದೆ. ಇದು ಬಹಳ ಗಹನವಾದ ವಿಚಾರ. ಜಟಿಲವಾದ ಸಮಸ್ಯೆ. ಪೇಪರ್‌ನಲ್ಲಿ ಓದಿರಬಹುದು. ಮಹಾರಾಷ್ಟ್ರದವರು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದರೂ ಕೂಡ, ಮಹಾರಾಷ್ಟ್ರ ಇರಿಗೇಷನ್ ಮಿನಿಷ್ಟರ್ ಆದ ಚವ್ಹಾಣ್‌ರವರು ಕೇಂದ್ರಕ್ಕೆ ಹೋಗಿ ಬಂದ ನಂತರ ಹೇಳುವಂಥ ಮಾತು ಬಹಳ cautious ಆಗಿ ಹೇಳಿದ್ದಾರೆ.

ಇವೊತ್ತು ನಾವು ಆ ತೀರ್ಮಾನವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎನ್ನುವುದು ಅವರಿಗೆ ನಿಸ್ಸಂಶಯವಾಗಿ ಹೇಳಿಬಿಟ್ಟಿದ್ದೇವೆ. ನಮಗೆ ಅವರ ತೀರ್ಮಾನದ ವಿಚಾರದಲ್ಲಿ ಅನೇಕ ಸಂಶಯಗಳು ಬಂದಿರುತ್ತವೆ ; ನಮ್ಮ ಪ್ರಾಜೆಕ್ಟುಗಳ ಗತಿಯೇನು, ನಮ್ಮಲ್ಲಿರತಕ್ಕ ಇರಿಗೇಷನ್ ಪೊಟೆನ್ಷಿಯಾಲಿಟಿ ವೇಸ್ಟಾಗುವುದಿಲ್ಲವೇ, ಎಂತ ವಿಚಾರಗಳನ್ನೆಲ್ಲ ಅವರಿಗೆ ತಿಳಿಸಿ ನಮಗೆ ಈ ಕೃಷ್ಣಾನದಿಯಿಂದ ಕೇಳತಕ್ಕ ನೀರನ್ನು ಕೊಡದೆ ಹೋದರೆ ನಮ್ಮ ರಾಜ್ಯಕ್ಕೆ ನೀವು ಬಹಳ ಅನ್ಯಾಯ ಮಾಡಿದಂತಾಗುತ್ತದೆ ಎಂಬ ಸಂಗತಿಯನ್ನು ನಾವು ಅವರಿಗೆ ಘಂಟಾಘೋಷವಾಗಿ ತಿಳಿಸಿದ್ದೇವೆ. ಈ ದಿವಸ ಈ ನೀರಿನ ಹಂಚಿಕೆ ವಿಚಾರದಲ್ಲಿ ನಮಗೆ ಅನ್ಯಾಯವಾಗಿದೆ ಎನ್ನತಕ್ಕ ವಿಚಾರದಲ್ಲಿ ಈ ಮಾನ್ಯ ಸಭೆಯ ಮತ್ತು ಸರ್ಕಾರದ ಅಭಿಪ್ರಾಯಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ಆದರೆ, ಈ ಟ್ರೈಬ್ಯುನಲ್‌ನ ವಿಚಾರ ಏನಿದೆ ಈ ದಿವಸ ನಾವು ಇದನ್ನು ಹೊಸದಾಗೇನೂ ಹೇಳಬೇಕಾದ್ದಿಲ್ಲ. ಈ ವಿಚಾರದಲ್ಲಿ ನಾವು 1961ರಲ್ಲೇ ನಮ್ಮ ಲಾ ಡಿಪಾರ್ಟ್‌ಮೆಂಟಿನವರಿಂದ ಸೆಕ್ಷನ್ 3ರ ಪ್ರಕಾರ ಯಾವ ರೀತಿ ನಾವು ನಮ್ಮ ಪ್ರೋಫಾರ್ಮ ಅಪ್ಲಿಕೇಷನ್ ತಯಾರಿಸಬೇಕು, ಹೇಗೆ ಅದನ್ನು ಹಾಕಬೇಕು ಎಂಬುದೆಲ್ಲಾ ಸಿದ್ಧಪಡಿಸಿಕೊಳ್ಳಲಾಗಿತ್ತು. ಆದರೆ ಆಗ ಈ ಗುಲ್ಹಾಟಿ ಕಮಿಷನ್ನನ್ನು ನೇಮಕ ಮಾಡಲಾಗಿತ್ತು. ಆದರೆ, ಇದರ ವರದಿ ಯಾವಾಗ ಬರುತ್ತದೆಯೋ, ಅದರ ಸ್ವರೂಪ ಯಾವ ರೀತಿ ಇರುತ್ತದೆಯೋ, ನಾವು ನಮ್ಮ ನಿಲುವನ್ನು ಭದ್ರಪಡಿಸಿಕೊಳ್ಳೋಣ ಅಂತ ಆಗಲೇ ಈ ಎಲ್ಲ ಪ್ರಯತ್ನಗಳನ್ನೂ ನಡೆಸಲಾಗಿತ್ತು. ಆದರೆ ಇದರಲ್ಲಿ ಒಂದು ವಿಷಯ-ನಾವು ಆ

ಕೇಂದ್ರ ಸರ್ಕಾರದ ಅನುಮತಿ ಪಡೆಯದ ವಿನಾ ನಾವು ಆ ಟ್ರಿಬ್ಯೂನಲ್ ಮುಂದೆ ಹೋಗುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರೇ ಈ ಟ್ರಿಬ್ಯೂನಲ್ಲನ್ನು ಫಾರಂ ಮಾಡಬೇಕು—when they come to the conclusion that the issue cannot be decided or settled by negotiations.

ನಾವು ಕೇಂದ್ರದವರಿಗೆ ಎಷ್ಟೋ ಹಟ ತೊಟ್ಟು ಈ ವಿಚಾರವನ್ನು ಯಾವಾಗ ಪ್ರಶ್ನಿಸಿದರೂ ಅವರು ಇನ್ನೂ ಸ್ವಲ್ಪ ತಡೀರಿ, ನಾವು ನೆಗೋಷಿಯೇಟ್ ಮಾಡುತ್ತೇವೆ ಅಂತಲೇ ಹೇಳುತ್ತಿದ್ದಾರೆ. ಆದರೆ, ಅವರು ಈ ಬಗ್ಗೆ ಇನ್ನೂ ವಿಚಾರ ಮಾಡಬೇಕಾಗಿದೆ. ನಾವು ಟ್ರಿಬ್ಯೂನಲ್ ಮುಂದೆ ಹೋಗಬೇಕಾದರೆ ಅಗತ್ಯವಾದ ಎಲ್ಲ ವಿಷಯಗಳನ್ನು ಅಂಕೀ ಅಂಶಗಳನ್ನು ಶೇಖರಿಸಿಕೊಂಡು ಹೋಗಬೇಕು. ಆದರೆ ನಾವು ಈ ವಿಚಾರದಲ್ಲಿ ಟ್ರಿಬ್ಯೂನಲ್ ಮುಂದೆ ಹೋದರೆ ಹೆಚ್ಚಿನ ಅನುಕೂಲವಿದೆಯೇ, ಅಥವಾ ಈ ವಿಚಾರವನ್ನು ಮತ್ತೆ ಕೇಂದ್ರ ಸರ್ಕಾರದವರ ಪುನರ್ ಪರಿಶೀಲನೆಗೆ ಬಿಟ್ಟರೆ ಒಳ್ಳೆಯದೇ ಎಂಬುದನ್ನೆಲ್ಲಾ ತೀವ್ರವಾಗಿ ಆಲೋಚಿಸಬೇಕಾಗಿದೆ. ಆದರೆ ಇಲ್ಲಿಯತನಕ ಈ ಸಭೆಯ ಮಾನ್ಯ ಸದಸ್ಯರುಗಳೆಲ್ಲ ಏನೇನು ವಿಚಾರಗಳನ್ನು ತಿಳಿಸಿರುತ್ತಾರೆಂಬುದು ಈಗಾಗಲೇ ಸರ್ಕಾರಕ್ಕೆ ಚೆನ್ನಾಗಿ ಮನವರಿಕೆಯಾಗಿದೆ. ಆದರೆ, ನಾವು ಈ ನೀರಿನ ಹಂಚಿಕೆ ವಿಷಯದಲ್ಲಿ ಯಾವ ವಿಷಯದಲ್ಲೂ ಯಾರಿಗೂ ಹಿಂದುಳಿಯುವುದಿಲ್ಲ ಎಂಬ ಭರವಸೆಯನ್ನು ನಾನೀಗ ತಮಗೆ ನೀಡುತ್ತಿದ್ದೇವೆ ?

ಶ್ರೀ ಎಂ. ಸಿ. ಬಸಪ್ಪ.—ಕೇಂದ್ರ ಸರ್ಕಾರದ ಫೈನಲ್ ಅವಾರ್ಡ್ ಏನಾಗುತ್ತದೆಂಬುದನ್ನೇ ನೋಡಿಕೊಂಡ ನಂತರ ಟ್ರಿಬ್ಯೂನಲ್ ಮುಂದೆ ಹೋಗಬೇಕಾಗುತ್ತದೆಂದು ತಾವು ಹೇಳುತ್ತಿದ್ದೀರಿ. ಆದರೆ ಈಗಾಗಲೇ ಕೇಂದ್ರ ಸರ್ಕಾರ ತೀರ್ಮಾನ ಕೊಟ್ಟಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಅವರು ಹೇಳಿರತಕ್ಕದ್ದು ತೀರ್ಮಾನವಲ್ಲ. ಅದೊಂದು ಸ್ಟೇಟ್‌ಮೆಂಟ್ ಮಾತ್ರ. ನಾನಾಗಲೇ ನಮ್ಮ ಕೆಲವು ಯಂ.ಪಿ. ಗಳು ಅವರ ಹತ್ತಿರ ಹೋಗಿದ್ದರು—ನಮ್ಮ ವಿಚಾರದಲ್ಲಿ ಇದೇಕೆ ಹೀಗೆ ಅನ್ಯಾಯವಾಗಿದೆ ಎಂತ ಎಲ್ಲವನ್ನು ಅವರಿಗೆ ತಿಳಿಸಿದ್ದಾರೆ. ಈ ವಿಚಾರದಲ್ಲಿ ಇನ್ನೂ ಅವರು ಎಗ್ಸಾಸ್ಟೀವ್ ಆಗಿ ವಿಚಾರಗಳನ್ನು ಪರಿಶೀಲಿಸಿಲ್ಲ, ನಮಗೆ ಈಗ ಅನ್ಯಾಯವಾಗಿದೆ, ನಮಗೆ ಅವರು ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯ ಮಾಡಿದ್ದಾರೆ. ಹಾಗೆ ಅವರಿಂದ ಇದು ಸಾಧ್ಯವಾಗದಿದ್ದರೆ ಒಂದು ಆಡ್‌ಹಾಕ್ ಮಾಡಿಕೊಡಬೇಕೆಂತ ಕೇಳಿದ್ದೇವೆ. ಅದಕ್ಕೆ ಅವರು ನಮಗೆ ನಿಮ್ಮ ಎಲ್ಲ ಪ್ರಾಜೆಕ್ಟುಗಳನ್ನು ತಯಾರು ಮಾಡಿಕೊಂಡು ಬನ್ನಿ ಎಂತ ಹೇಳಿದ್ದಾರೆ. ಆದರೆ, ನಮ್ಮೆಲ್ಲ ಈ ಪ್ರಾಜೆಕ್ಟ್‌ಗಳಿನ್ನೂ ಸಿದ್ಧವಾಗಿಲ್ಲ. ಆದರೆ, ಆಂಧ್ರದವರು ಈಗಾಗಲೇ ಒಂದು ಸಾವಿರ T.M.C.ft. ನೀರಿನ ಪ್ರಾಜೆಕ್ಟುಗಳನ್ನು ತಯಾರಿಸಿಕೊಂಡು ನೀರನ್ನು ಕೊಡಿ ಎಂದು ಕೇಂದ್ರಕ್ಕೆ ಒತ್ತಾಯ ಮಾಡುತ್ತಿದ್ದಾರೆ. ಅದಕ್ಕೆ ನಾವು ಕೇಂದ್ರದವರಿಗೆ ಇಷ್ಟೇ ಹೇಳಿದ್ದೇವೆ—ನಮ್ಮ ಯೋಜನೆಗಳಿನ್ನೂ ತಯಾರಾಗಿಲ್ಲ. ನೀವು ಈ ದಿವಸ ಇಷ್ಟು T.M.C.ft. ನೀರನ್ನು ಕೊಡುತ್ತೇವೆಂತ ಎಂಬುದನ್ನು ತಿಳಿಸಬೇಕು ಎಂತ ನಾವು ಕೇಳುತ್ತಿದ್ದೇವೆ. ಯಾರಿಗೇ ಆಗಲಿ ಈ ಬಗ್ಗೆ ಒಂದು ನ್ಯಾಯ ದೊರಕಿಸಿಕೊಡಬೇಕಾದರೆ ಈ ವಿಚಾರಗಳನ್ನೆಲ್ಲಾ ಒಂದು ಸೈಂಟಿಫಿಕ್ ಮೆಥಡ್‌ನಲ್ಲಿ ಅಸೆಸ್ ಮಾಡಬೇಕು ; ಖಚಿತವಾದ ಅಂಕಿಅಂಶಗಳಿರಬೇಕು, ಇದಕ್ಕೆ ಒಂದು ನಿಖರವಾದ ಪ್ರಿನ್ಸಿಪಲ್ ಇರಬೇಕು. ಈ ದಿವಸ ಅವರು ಆಂಧ್ರಕ್ಕೆ 800 T.M.C.ft. ನೀರನ್ನು ಕೊಟ್ಟಿರಬಹುದು, ಮೈಸೂರಿನವರಿಗೆ 600 T.M.C.ft. ನೀರನ್ನು ಕೊಟ್ಟಿರಬಹುದು, ಮಹಾರಾಷ್ಟ್ರಕ್ಕೆ 400 T.M.C.ft. ನೀರನ್ನು ಕೊಟ್ಟಿರಬಹುದು. ಆದರೆ, ಈ ಹಂಚಿಕೆಯನ್ನು ಅವರು ಈ ದಿವಸ ಯಾವ ಪ್ರಿನ್ಸಿಪಲ್ ಮೇಲೆ ಮಾಡಿದ್ದಾರೆ ? ಈ ಹಂಚಿಕೆಯನ್ನು ಅವರು ನಾವು ಇಂಥ ಪ್ರಿನ್ಸಿಪಲ್ಸ್ ಮೇಲೆ ಮಾಡಿದ್ದೇವೆ ಎಂತ ಹೇಳಲಿ, ಕೇಂದ್ರ ಸರ್ಕಾರದವರು ಒಂದು ಖಚಿತವಾದ ಪ್ರಿನ್ಸಿಪಲ್ ಮೇಲೆ ಆ ಹಂಚಿಕೆಯನ್ನು ಮಾಡಲಿ, ನಮಗೆ ಕೇವಲ ಒಂದೇ T.M.C.ft. ನೀರು ಬಂದರೂ ಚಿಂತೆಯಿಲ್ಲ, ನಾವು ಆ ತೀರ್ಮಾನಕ್ಕೆ ಒಪ್ಪಿಕೊಳ್ಳುತ್ತೇವೆ ಎಂಬುದಾಗಿ ನಾವು ಕೇಂದ್ರ ಸರ್ಕಾರದವರಿಗೆ ತಿಳಿಸಿದ್ದೇವೆ. ಈ ರೀತಿ ಅವರು ಯಾವುದಾದರೊಂದು ನಿರ್ದಿಷ್ಟವಾದ ಪ್ರಿನ್ಸಿಪಲನ್ನು ಅನುಸರಿಸದೆ ಈಗ ಕೊಟ್ಟಿರತಕ್ಕ ತೀರ್ಮಾನವನ್ನು ಒಪ್ಪಿಕೊಳ್ಳಿ ಎಂದು ಹೇಳಿದರೆ ಅದು ಖಂಡಿತ ಸಾಧ್ಯವಾಗುವುದಿಲ್ಲ ಎಂತ ನಾವು ಅವರಿಗೆ ಹೇಳಿದ್ದೇವೆ. ಆದರೆ, ಈಗ ಆ ಕೇಂದ್ರ ಸರ್ಕಾರದವರು ಈ ಸಮಸ್ಯೆಯನ್ನು ಬಗೆಹರಿಸಲೇಬೇಕಾದ ಕಾಲ ಸನ್ನಿಹಿತವಾಗಿದೆ. ಈ ದಿವಸ ಅಂತ ರಾಜ್ಯಗಳ ನದಿ ವಿವಾದ ಬಹಳ ಬಿಕ್ಕಟ್ಟಿನ ಪರಿಸ್ಥಿತಿಗೆ ಬಂದಿದೆ. ಅವರು ಈಗ ಈ ವಿಚಾರಗಳನ್ನು ಯಾವ ರೀತಿ ಮಾಡಬೇಕೆಂಬ ಬಗ್ಗೆ ನಿರ್ಣಯ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ನಾವು ಅವರಿಗೆ ಈ ವಿವಾದಗಳು ಇಂದಲ್ಲ ನಾಳೆ ರಾಜ್ಯಗಳಲ್ಲಿ ಹುಟ್ಟಬಹುದು ಅದಕ್ಕಾಗಿ ಈಗಲೇ ಇತ್ಯರ್ಥದ ಬಗ್ಗೆ ಒಂದು ಪ್ರಿನ್ಸಿಪಲ್‌ನ್ನು ಇವಾಲ್ವ್ ಮಾಡಿ ಎಂತ ಕೇಳುತ್ತಿದ್ದೇವೆ. ಹೀಗೆ ಅವರು ಒಂದು ಪ್ರಿನ್ಸಿಪಲ್ ಮೇಲೆ ಎಲ್ಲಿಯವರೆಗೆ ಈ ವಿಚಾರಗಳನ್ನು ಇತ್ಯರ್ಥ ಮಾಡುವುದಿಲ್ಲವೋ ಅಲ್ಲಿಯವರೆಗೂ

(ಶ್ರೀ ವೀರೇಂದ್ರ ಪಾಟೀಲ್)

ನಾವು ಈ ತೀರ್ಮಾನವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದೂ, ಒಮ್ಮೆ ನಾವು ಒಂದು ತತ್ವಕ್ಕೆ ಒಪ್ಪಿಕೊಂಡಮೇಲೆ ನಮಗೆ ಅದರ ಪ್ರಕಾರ ಎಷ್ಟೇ ಬರಲಿ ನಾವು ಅದನ್ನು ಒಪ್ಪಿಕೊಳ್ಳುತ್ತೇವೆ ಎಂತ ಹೇಳಿರುತ್ತೇವೆ. ಇಷ್ಟೆಲ್ಲಾ ನಾವು ಹೇಳಿರುವಾಗ ಅವರಿಂದ ಆಖೈರಾಗಿ ಒಂದು ತೀರ್ಮಾನ ಪಡೆಯದೆ ಒಮ್ಮಿಂದೊಮ್ಮೆಲೆ ನಾವು ಈ ವಿಚಾರವನ್ನು ಟ್ರೈಬ್ಯುನಲ್ ಮುಂದೆ ಒಯ್ಯುವುದಕ್ಕಾಗು ವುದಿಲ್ಲ. ಈ ವಿಚಾರದಲ್ಲಿ ಬಹಳ ಡೆಲಿಕೇಟ್ ಪ್ರಶ್ನೆಗಳಿರುತ್ತವೆ. ನಾವು ಈ ದಿವಸ ನಮ್ಮ ಸ್ಟೇಟಿನ ಹಿತರಕ್ಷಣೆ ಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯ. ನಾವು ಈ ಸಂಬಂಧದಲ್ಲಿ ಏನೇನು ವಿಚಾರ ನಡೆಸಬೇಕೋ ಅದನ್ನೆಲ್ಲ ನಡೆಸಿ ಈ ವಿಚಾರದಲ್ಲಿ ಯಾವ ಹಾದಿ ಹಿಡಿಯಬೇಕೆಂಬ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸಂಪೂರ್ಣ ಜವಾಬ್ದಾರಿ ಯನ್ನು ಸರ್ಕಾರದವರಿಗೆ ಬಿಟ್ಟುಕೊಡುವುದು ಒಳ್ಳೆಯದೆಂದು ನಾನು ತಿಳಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಅವರು ಪುಟ 6, ಪ್ಯಾರಾ 14ರಲ್ಲಿ ಹೀಗೆ ಹೇಳಿದ್ದಾರಲ್ಲಾ!

"During the discussion with the States, I was able to know that the above principles were by and large acceptable to them".

ಶ್ರೀ ವೀರೇಂದ್ರ ಪಾಟೀಲ್.—ಅವರೇನೋ ಆ ಒಂದು ಪ್ರಿನ್ಸಿಪಲ್ಲನ್ನು ಹೇಳಿದ್ದಾರೆ. ಅವರು ನಮ್ಮ ರಾಜ್ಯದಲ್ಲಿ ಹೆಚ್ಚು ಸ್ಕೇರ್ಸಿಟಿ ಏರಿಯಾ ಇದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ ಈಗ ಆ ಪ್ರಿನ್ಸಿಪಲ್ ಪ್ರಕಾರ ಅವರು ಇದನ್ನು ತೀರ್ಮಾನವೂ ಅಲ್ಲ. ಹೀಗೆಲ್ಲ ವ್ಯತ್ಯಾಸವಾಗಿದೆ. ಈ ವಿಚಾರವನ್ನು ನಾವು ಈಗಾಗಲೇ ಅವರ ಗಮನಕ್ಕೆ ತಂದಿದ್ದೇವೆ. ಈಗ ಕೇಂದ್ರದವರು ನಮ್ಮ ಪ್ರಿನ್ಸಿಪಲ್‌ಗಳನ್ನು, ನಮ್ಮ ವಾದವನ್ನು ಒಪ್ಪಿಕೊಂಡಿದ್ದಾರೆ. ಅವರೀಗ ಅವರ ತೀರ್ಮಾನವನ್ನು ಮತ್ತೆ ರಿವೈಸ್ ಮಾಡುವ ಪ್ರಮೇಯ ಬರುತ್ತದೆ. ನಾವು ಈ ಸನ್ನಿವೇಶದಲ್ಲಿ ಕೇಂದ್ರದವರೊಡನೆ ಯಾವ ರೀತಿ ವ್ಯವಹರಿಸಬೇಕೆಂಬ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಲು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಆದ್ದರಿಂದ ನಮಗೆ ಈ ವಿಚಾರ ಬಿಟ್ಟುಬಿಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಶರಣಪ್ಪ.—ಈಗ ಆ ಗುಲ್ಹಾಟಿ ಸಮಿತಿಯವರೇ ನಮಗೆ 47 ಪರ್ಸೆಂಟ್ ನೀರು ಬರ ಬೇಕೆಂದು ಹೇಳಿದ್ದಾರೆ. ಅವರ ಅಂದಾಜಿನ ಪ್ರಕಾರ ನಮಗೀಗ ಅಷ್ಟು ನೀರು ಬರಬೇಕಾಗಿಲ್ಲವೇ?

Sri VEERENDRA PATIL.—"The development of these rivers has to be carefully planned with co-ordination and even excessive and thoughtless irrigation in one area may lead to water-logging and a great deal of scarcity of water in one area will create a dangerous void."

ಅವರೇ ಒಪ್ಪಿಕೊಂಡಿದ್ದಾರೆ. ಒಂದೇ ಕಡೆ ಹೆಚ್ಚಿಗೆ ನೀರು ಅಸ್ಯೈನ್ ಲೇಟ್ ಆದರೆ ಅದರಿಂದ ವಾಟರ್ ಲಾಗಿಂಗ್ ಆಗುತ್ತೆ, ಹಾಗೆ ಆಗಬಾರದೆಂದು, ಆ ರೀತಿ ನೀರನ್ನು ಹಂಚಿಕೆ ಮಾಡ ಬೇಕೆಂದು ಹೇಳಿದ್ದಾರೆ. ಆ ಗುಲ್ಹಾಟಿ ಕಮಿಷನ್ನಿನವರ ಪ್ರಕಾರ ಕೃಷ್ಣಾ ನದಿಯಲ್ಲಿ ನೀರು ಬಹಳ ಕಡಿಮೆ ಇದೆ, ಆದ್ದರಿಂದ ಆ ಪ್ರದೇಶದಲ್ಲಿ ಪೂರ್ಣಭತ್ತವನ್ನೇ ಯಾವಾಗಲೂ ಬೆಳೆಯುವುದು ಬೇಡ, ಮಾನ್ಸೂನ್‌ನಲ್ಲಿ ಮಾತ್ರ ಬತ್ತ ಬೆಳೆಯಬೇಕು ಎಂತ ತಿಳಿಸಿದ್ದಾರೆ. ಆದ್ದರಿಂದ ನಾವೀಗ ಆ 18-20 ಪರ್ಸೆಂಟ್ ಬತ್ತ ಬೆಳೆಯತಕ್ಕ ಏರಿಯಾದಲ್ಲಿ ಕ್ರಾಪ್ ಪ್ಯಾಟ್ರನ್ ಪ್ರಕಾರ ಬೆಳೆ ತೆಗೆಯ ಬೇಕೆಂತ ಮಾಡಿಕೊಂಡಿದ್ದೇವೆ. ನಾವು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿ ನಮಗೆ ನ್ಯಾಯವಾಗಿ ಬರಬೇಕಾದ ಪಾಲನ್ನು ನಾವು ತೆಗೆದುಕೊಳ್ಳಬೇಕು. ಆ ನಮ್ಮ ಪಾಲಿನ ಕೊನೇ ಒಂದು ಹನಿ ನೀರನ್ನೂ ಬಿಡದೆ ಹಾಗೆ ಪಡೆದು ಅದನ್ನು ಇಲ್ಲಿ ಉಪಯೋಗಿಸತಕ್ಕ ಬಗ್ಗೆ ನಾವೂ-ನೀವೂ ಸರ್ವಪ್ರಯತ್ನಗಳನ್ನೂ ಮಾಡಬೇಕಾಗಿದೆ. ಈ ಬಗ್ಗೆ ನಾವು ಏನೇನು ಕಾರ್ಯಕ್ರಮ ತೆಗೆದುಕೊಳ್ಳ ಬೇಕೋ ಅವುಗಳನ್ನೆಲ್ಲ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಈ ದಿವಸ, ಕೇಂದ್ರದವರು ನಿಮ್ಮಲ್ಲಿ ಯಾವ ಯಾವ ಪ್ರಾಜೆಕ್ಟ್‌ಗಳಿವೆ? ಯಾವ ಬ್ಲೂ ಪ್ರಿಂಟ್ಸಿದೆ? ಅಷ್ಟು ನೀರನ್ನು ಕೊಟ್ಟರೆ ನೀವೇನು ಮಾಡುತ್ತೀರಿ? ಎಂತ ಕೇಳಬಹುದು. ಆ ಕಾರಣಕ್ಕಾಗಿ ನಾವು ಈಗಾಗಲೇ ಈ ಮೀಡಿಯಂ ಪ್ರಾಜೆಕ್ಟ್‌ಗಳು ಹಾಗೂ ದೊಡ್ಡ ಪ್ರಾಜೆಕ್ಟುಗಳ ಸರ್ವೇ ಕಾರ್ಯ ಕೈಗೊಳ್ಳಲು ಆ ಕಾವೇರಿ ಸರ್ವೇ ಕೆಲಸ ಇತ್ಯಾದಿಗಳನ್ನೆಲ್ಲ ತೀವ್ರವಾಗಿ ನಡೆಸಲು ಎರಡು ಇನ್‌ವೆಸ್ಟಿಗೇಷನ್ ಸೆಂಟರುಗಳನ್ನು

ಮಾಡಿದ್ದೇವೆ. ಒಂದನ್ನು ಮೈಸೂರಿನಲ್ಲೂ ಮತ್ತು ಒಂದನ್ನು ಧಾರವಾಡದಲ್ಲೂ ಓಪನ್ ಮಾಡಲಾಗಿದೆ.

ಹೀಗಾಗಲೇ Bijapur Lift irrigation Scheme, Kagoni, Don, Dandavathi Upper Krishna, ಇವುಗಳ preliminary survey ಮಾಡಿದ್ದೇವೆ. Mullaramani, Chandramalpli, Settynala ಮೊದಲಾದ ಕೆಲಸಗಳ detailed survey ಆಗಿ ಎಸ್ಟಿಮೇಟ್‌ಗಳು ತಯಾರಾಗಿವೆ. ಕೆಲವು minor tank ನಿಂದ 5 TMC ft. ನೀರಿನ ಪ್ರಯೋಜನ ಪಡೆಯಲು 325 ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆ. ಮತ್ತು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇಂಥ ಕೆಲಸಗಳನ್ನೂ ಮಾಡಬೇಕಾಗಿದೆ. ಎಲ್ಲ ಪ್ರಾಜೆಕ್ಟ್‌ಗಳ blue print ಮಾಡುವ ಸಲುವಾಗಿ ಒಂದೆರಡು ಸರ್ಕಲ್‌ಗಳನ್ನೂ ಹೆಚ್ಚು ಮಾಡುವುದು ಅವಶ್ಯವಿದೆ. ಪ್ರಾಜೆಕ್ಟ್‌ಗಳ ಸರ್ವೆ ಪೂರ್ತಿಯಾಗಿ ಬ್ಲೂ ಪ್ರಿಂಟ್ ತಯಾರಾಗಿ ಯಾವಾಗ ಬೇಕಾದರೂ ಕೆಲಸ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿರಬೇಕು. ಒಂದೆರಡು investigation circles ಮಾಡಿ ಕಾವೇರಿ ಪಾತ್ರದಲ್ಲಿರುವಂಥ ಎಲ್ಲ ಪ್ರಾಜೆಕ್ಟ್‌ಗಳನ್ನೂ ಕೃಷ್ಣ ಪಾತ್ರದಲ್ಲಿರುವ ನಮ್ಮ ಎಲ್ಲ ಪ್ರಾಜೆಕ್ಟ್‌ಗಳನ್ನೂ ಬಿದರೆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಗೋದಾವರಿ ನದೀ ಪಾತ್ರದಲ್ಲಿರುವಂಥ ಎಲ್ಲ ಯೋಜನೆಗಳನ್ನೂ ಸಂಪೂರ್ಣವಾಗಿ ಸರ್ವೆಮಾಡಿ ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಆ ಕೆಲಸವನ್ನು ಮುಗಿಸಿ ಬ್ಲೂ ಪ್ರಿಂಟ್ ಸಿದ್ಧಮಾಡಿಕೊಂಡರೆ ಯಾವಾಗ ಬೇಕಾದರೂ ತೆಗೆದುಕೊಳ್ಳುವಂಥ ಪರಿಸ್ಥಿತಿಯಲ್ಲಿರಬೇಕು. ಇದಕ್ಕೆ ನಮ್ಮ machinery gear up ಮಾಡಬೇಕಾಗಿದೆ ಮತ್ತು ವಿಶೇಷ investigation circles ತೆರೆಯಬೇಕಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—Investigation circleಗೆ ಯಾರನ್ನೂ ವರ್ಗಮಾಡಿದರೂ ಅವರು ಹೋಗದೆ ವರ್ಗವಾಗಿರುವುದನ್ನು ರದ್ದುಪಡಿಸಿಕೊಳ್ಳುವುದರಿಂದ ತೊಂದರೆಯಾಗಿದೆಯಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲೋ ಒಂದೆರಡು ಸಂದರ್ಭದಲ್ಲಿ ಹಾಗೆ ಆಗಿರಬಹುದು. ಜನರಲ್ ಆಗಿ ಹೇಳಿದರೆ ಕಷ್ಟವಾಗುತ್ತದೆ.

ಈಗ ನಮಗೆ ತಾತ್ಕಾಲಿಕವಾಗಿ ಕೊಟ್ಟಿರುವ 600 T.M.C. ft. ನೀರಿನಿಂದ ಸಂತೋಷವಿಲ್ಲ, ಸಮಾಧಾನವಿಲ್ಲ. ಇದನ್ನು ಪುನರ್ವಿಮರ್ಶೆಮಾಡಿ ಇನ್ನೂ ಹೆಚ್ಚಾಗಿ ಕೊಡಿ ಎಂದು ಸ್ಪಷ್ಟವಾಗಿ ಕೇಳುತ್ತೇವೆ. ಮುಂದೆ ನಮಗೆ ಯಾವ ರೀತಿ ನೀರು ಒದಗಿಸುತ್ತೀರಿ, ನಿಮ್ಮಲ್ಲಿ ಎಷ್ಟು ನೀರಿದೆ, ಎನ್ನುವ ವಿಚಾರಗಳಲ್ಲಿ ಅವರಿಂದ clarification ಕೇಳಿ ಆನಂತರ ಏನು ಮಾಡಬೇಕೆಂಬುದನ್ನು ನಿರ್ಧರಿಸುತ್ತೇವೆ ಎಂದು ಆಶ್ವಾಸನೆಯನ್ನೂ ಈ ಸಂದರ್ಭದಲ್ಲಿ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

Sri B. D. JATTI.—One point, sir. I presume that the Chair will send the proceedings of the entire debate to the Centre in order to inform the sense of the House.

Mr. SPEAKER.—Yes.

ಶ್ರೀ ವಿ. ಎಂ. ದೇವ್.—ನನಗೆ ತಿಳಿದಮಟ್ಟಿಗೆ, ಮೈಸೂರಿನ ನ್ಯಾಯವಾದ ನಿಲುವನ್ನು ಒಪ್ಪಿಕೊಂಡಿದ್ದರೂ ನಮಗೆ ನೀರು ಕೊಡುವುದರಲ್ಲಿ ಅನ್ಯಾಯ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಹೇಳಿಕೆಯನ್ನೂ ಕೊಟ್ಟಿರುವುದರಲ್ಲಿ optimum utilisation of water ಎಂದು ಮಾಡಿದ್ದಾರೆ, Western Ghats ಇರುವುದು withering ಆಗದೆ ಹಾಗೆಯೇ ಉಳಿದಿದೆ. ಮಳೆ ಬಂದು ನೀರು ದೊರೆಯುತ್ತದೆ. ಒಟ್ಟಿನಲ್ಲಿ upper region ನಲ್ಲಿ maximum water ನಿಲ್ಲಿಸದೆ ಇದ್ದರೆ ಏನಾಗುತ್ತದೆ? Not only the whole of southern zone suffers, ಅದರ over all development ಗೂ ಕಷ್ಟವಾಗುತ್ತದೆ. ಇದಕ್ಕೆ ಮುಖ್ಯವಾದ ಕಾರಣ ಕಟ್ಟಾಡುತ್ತಾರೆ. The responsiblity solely rests with the Central Government. ಒಂದೊಂದು ಸಲ ಇಂಥ ಸಂದಿಗ್ಧ ಸಂದರ್ಭಗಳು ಬರುತ್ತವೆ. ಇದು ಬಹಳ ಗಭೀರತೆಯ ಪ್ರಶ್ನೆ, ತುರ್ತು ಪ್ರಶ್ನೆಯಾಗಿರುವುದರಿಂದ ಇದನ್ನೂ ಪ್ರಧಾನ ಮಂತ್ರಿಗಳಾದ ಜವಹಾರಲಾಲ ನೆಹರೂ ಅವರ ಹತ್ತಿರ arbitrationಗೆ ಏಕೆ ತೆಗೆದುಕೊಂಡು ಹೋಗಬಾರದು ಎಂದು ಕೇಳುತ್ತೇನೆ.

Mr. SPEAKER.—A very useful suggestion !

ಶ್ರೀ ಎಸ್. ಗೋಪಾಲಗೌಡ.—ಕೇಂದ್ರದವರು ಈ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ತಮ್ಮ ಜೊತೆಯಲ್ಲಿ ಚರ್ಚೆ ಮಾಡಿದರು. ನೀವು ನಮಗೆ projectwise allocation ಬೇಡ, ಒಟ್ಟಿಗೆ ಇಷ್ಟು ನೀರು ಎಂಬುದಾಗಿ ಕೊಡಿ ಎಂದು ಕೇಳಿದಿರಿ. ಅದರ ಮೇಲೆ ಅವರು ಈಗ ತಯಾರಾಗಿರುವ Malaprabha, Upper Krishna ಇವುಗಳಿಗೆ ಇಷ್ಟು ನೀರನ್ನು ಉಪಯೋಗಿಸಿಕೊಳ್ಳಿ, ಇಷ್ಟು ನೀರನ್ನು ಕೊಟ್ಟಿದ್ದೇವೆ, ಮುಂದೆ ನೋಡಿಕೊಳ್ಳೋಣ ಎಂದು ಹೇಳಿದರು. ನಿಮ್ಮ ಹತ್ತಿರ project ಸಿದ್ಧವಾಗಿಲ್ಲಲ್ಲ. 1951ರಿಂದ ಕೊಟ್ಟಿರುವ ನೀರನ್ನೇ ಉಪಯೋಗಿಸಿಕೊಳ್ಳುವುದಕ್ಕೆ ಆಗಿಲ್ಲ ಎಂದು ಅವರು ಹೇಳಿದರು ಎಂಬುದಾಗಿ ತಿಳಿದಿದೆ. ಈ ಬಗ್ಗೆ ಮಾನ್ಯಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಹಾಗೆ ಹೇಳಲೂ ಇಲ್ಲ, ನಾವು ಒಪ್ಪಿಕೊಳ್ಳಲೂ ಇಲ್ಲ.

Mr. SPEAKER.—There has been a full debate and I do not think I need put this question to the vote of the House; I have considered it. There is no question of putting it to the vote of the House. Even in collecting the sense, I have found unanimity. Therefore, the debate is now over. I will adjourn the House to assemble again tomorrow at 1 P.M,

---

The House adjourned at Thirty Minutes past Six of the Clock to meet again at One of the Clock on Thursday, the 4th April 1963.

WD 426—GPB—900—14-9-1963